ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 27 ಭಾನುವಾರ 2023

ಸಂಪುಟ: 44 | ಸಂಚಿಕೆ: 132 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಂದ್ರಯಾನ–2 ಪತನ ಜಾಗ ತಿರಂಗ ಸ್ಥಳ; ಇನ್ನು ಆ.23, 'ರಾಷ್ಟ್ರೀಯ ಬಾಹ್ಯಾಕಾಶ ದಿನ'; ಚಂದ್ರಯಾನ–3ರ ಲ್ಯಾಂಡಿಂಗ್

'ಶಿವಶಕ್ತಿ' ಸ್ಥಳ

ಚಂದ್ರಯಾನ–3 ಯಶಸ್ವಿಗೊಳಿಸಿದ ಇಸ್ರೋ ವಿಜ್ಞಾನಿಗಳ ಮನತುಂಬಿ ಅಭಿನಂದಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ

- ಸಾಧನೆಯ ಮಾಹಿತಿ ಪಡೆದು ಸಾಧಕರ ಮುಂದೆ ಭಾವುಕರಾದ ಮೋದಿ
- ನಾನು ದಕ್ಷಿಣ ಆಫ್ರಿಕಾದಲ್ಲಿದ್ದರೂ ನನ್ನ ಮನಸು ಮಾತ್ರ ನಿಮ್ಮೊಂದಿಗಿತ್ತು!



ಬೆಂಗಳೂರು, ಆ.26(ಕೆಎಂಶಿ)– ವಿಶ್ವದ ಸಮಸ್ಯೆಗಳ ಪರಿಹಾರಕ್ಕೆ ಚಂದ್ರಯಾನ–3 ಸಹಕಾರಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಚಂದ್ರಯಾನ–3 ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ದಕ್ಷಿಣ ಧ್ರುವದ ಮೇಲೆ ಯಶಸ್ವಿಯಾಗಿ ಲ್ಯಾಂಡಿಂಗ್ ಮಾಡಿಸಿದ ಇಸ್ರೋ ತಂಡದ ವಿಜ್ಞಾನಿಗಳನ್ನು ಪ್ರಧಾನಿ, ಅಭಿನಂದಿಸಿ ಮಾತನಾಡಿ, ಆ.23ರ ದಿನವನ್ನು ಮರೆಯಲು ಸಾಧ್ಯವಿಲ್ಲ. ವಿಶ್ವದ ಅನೇಕ ಸಮಸ್ಯೆಗಳಿಗೆ ಸಹಕಾರಿಯಾಗಲಿದೆ ಎಂದರು.

ಆ.23ರ ದಿನವನ್ನು 'ರಾಷ್ಟ್ರೀಯ ಬಾಹ್ಯಾಕಾಶ ದಿನ'ವನ್ನಾಗಿ ಆಚರಿಸಲಾಗುವುದು. ಮೇಕ್ ಇನ್ ಇಂಡಿಯಾ ಮೂಲಕವೇ ಭಾರತ ಚಂದ್ರನನ್ನು ತಲುಪಿದ ಹೆಗ್ಗಳಿಕೆ ಇದೆ ಎಂದು ಹೇಳಿದರು.

ಇದಕ್ಕೂ ಮುನ್ನ ಪ್ರಧಾನಿ ಅವರು ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಅವರಿಗೆ ಭಾರತದ ಪ್ರಜೆಗಳ ಪರವಾಗಿ ಸೆಲ್ಯೂಟ್ ಹೊಡೆದರು. ದಕ್ಷಿಣ ಆಫ್ರಿಕಾ ಪ್ರವಾಸದಿಂದ ನೇರವಾಗಿ ನಗರಕ್ಕೆ ಆಗಮಿಸಿ, ಇಸ್ರೋ ಟೆಲಿಮೆಟ್ರಿಕ್ ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ ಮಿಷನ್ ಕಂಟ್ರೋಲ್ ಕಾಂಪ್ಲೆಕ್ಸ್‌ನಲ್ಲಿ ವಿಜ್ಞಾನಿಗಳ ತಂಡವನ್ನು ●9ನೇ ಪುಟಕ್ಕೆ

ನಾಳೆಯಿಂದ ಮೂರು ದಿನ ಮೈಸೂರಲ್ಲಿ ಮುಖ್ಯಮಂತ್ರಿ



ಮೈಸೂರು, ಆ.26(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರದಿಂದ (ಆ.28) ಮೂರು ದಿನಗಳ ಮೈಸೂರು ಪ್ರವಾಸ ಕೈಗೊಂಡಿದ್ದಾರೆ.

ಸೋಮವಾರ ಬೆಳಗ್ಗೆ 9 ಗಂಟೆಗೆ ಬೆಂಗಳೂರಿನಿಂದ ರಸ್ತೆ ಮಾರ್ಗದಲ್ಲಿ ಹೊರಡುವ ಮುಖ್ಯಮಂತ್ರಿಗಳು 11 ಗಂಟೆಗೆ ಮೈಸೂರಿಗೆ ಆಗಮಿಸುವರು.

ಸೋಮವಾರ ಬೆಳಗ್ಗೆ 11 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿರುವ ಕೆಡಿಪಿ ಸಭೆಯಲ್ಲಿ ಪಾಲ್ಗೊಳ್ಳಲಿರುವ ಅವರು, ಸಂಜೆ 5 ಗಂಟೆಗೆ ಸಿದ್ಧಾರ್ಥನಗರದ ವಿನಯ ಮಾರ್ಗದಲ್ಲಿರುವ ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆಯಲ್ಲಿ ನವೀಕೃತ ಕಣ್ಣಿನ ಆಸ್ಪತ್ರೆಯನ್ನು ಉದ್ಘಾಟಿಸುವರು. ನಂತರ ರಾತ್ರಿ 7 ಗಂಟೆಗೆ ಜೆ.ಪಿ.ಪ್ಯಾಲೇಸ್ ಹೋಟೆಲ್‌ನಲ್ಲಿ ಗಂಗೋತ್ರಿ ವಿದ್ಯಾರ್ಥಿಗಳೊಂದಿಗೆ ಸಿದ್ದರಾಮಯ್ಯ ಸಂವಾದ ನಡೆಸುವರು. ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಆಯೋಜಿಸಿರುವ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 108ನೇ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮಧ್ಯಾಹ್ನ 1 ಗಂಟೆಗೆ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಭರತೇಶ್ ಎಂಟರ್‌ಪ್ರೈಸಸ್‌ನಿಂದ ನಿರ್ಮಿಸಿರುವ ಅಡಿಕೆ ತಯಾರಿಕಾ ಘಟಕವನ್ನು ಮುಖ್ಯಮಂತ್ರಿಗಳು ●9ನೇ ಪುಟಕ್ಕೆ

ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ಉದ್ಯೋಗ

ಚಾಮರಾಜನಗರದಲ್ಲಿ ಡಿಸಿಎಂ ಡಿಕೆಶಿ ಭರವಸೆ



ಚಾಮರಾಜನಗರ, ಆ.26– ಕೊರೊನಾ ಸಂದರ್ಭದಲ್ಲಿ ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೂಕ್ತ ಸಮಯಕ್ಕೆ ಆಕ್ಸಿಜನ್ ಲಭ್ಯವಾಗದೇ ದುರಂತ ಸಾವಿಗೀಡಾದವರ ಕುಟುಂಬ ಸದಸ್ಯರಿಗೆ ಉದ್ಯೋಗ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ಸಹಾಯ ಹಾಗೂ ನ್ಯಾಯ ಒದಗಿಸುವುದು ಮುಖ್ಯಮಂತ್ರಿಗಳು ಹಾಗೂ ನನ್ನ ಆದ್ಯತೆಯಾಗಿದೆ ಎಂದರು. ಸಂತ್ರಸ್ತ ಕುಟುಂಬದ ಓರ್ವ ಸದಸ್ಯನಿಗೆ ಚಾಮರಾಜನಗರ ಮೆಡಿಕಲ್ ಕಾಲೇಜಿನಲ್ಲೇ ಉದ್ಯೋಗ ನೀಡಲಾಗುವುದು. ಈ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗಿದೆ. ಅಲ್ಲದೇ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೊಂದಿಗೂ ಸಭೆ ನಡೆಸಲಾಗಿದೆ ಎಂದರು.

ಆಪರೇಷನ್ ಹಸ್ತದ ಅವಶ್ಯಕತೆ ಇಲ್ಲ: ನಮಗೆ ಆಪರೇಷನ್ ಹಸ್ತದ ಅವಶ್ಯಕತೆ ಇಲ್ಲ. ಬೇರೆ ಪಕ್ಷದ ನಾಯಕರು ಅಥವಾ ಕಾರ್ಯಕರ್ತರು ನಮ್ಮ ಪಕ್ಷವನ್ನು ಒಪ್ಪಿಕೊಂಡು ಬಂದರೆ ಅವರನ್ನು ಸ್ವಾಗತಿಸುತ್ತೇವೆ ಎಂದು ●6ನೇ ಪುಟಕ್ಕೆ

ಎಕ್ಸ್‌ಪ್ರೆಸ್ ವೇ ಸರ್ವೀಸ್ ರಸ್ತೆ ಕಾಮಗಾರಿ ಶೀಘ್ರ ಪೂರ್ಣ

ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಪರಿಶೀಲಿಸಿದ ನಂತರ ಸಂಸದ ಪ್ರತಾಪ್ ಸಿಂಹ ಭರವಸೆ



ಮೈಸೂರು, ಆ.26(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಯೋಜನೆ ಪೂರ್ಣಗೊಂಡಿದ್ದು, ಬಾಕಿ ಉಳಿದಿರುವ ಸರ್ವೀಸ್ ರಸ್ತೆಗಳ ಕಾಮಗಾರಿಯನ್ನು ಶೀಘ್ರ ಮುಕ್ತಾಯಗೊಳಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಕಳಸ್ತವಾಡಿವರೆಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಯ ಸರ್ವೀಸ್ ರಸ್ತೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಪರಿಶೀಲನೆ ನಡೆಸಿದ ಅವರಿಗೆ ಕೆ.ಆರ್. ಮಿಲ್ ಕಾಲೋನಿ ಸರ್ಕಲ್, ಸಿದ್ದಲಿಂಗಪುರ, ಕಳಸ್ತವಾಡಿ ಮತ್ತು ನಾಗನಹಳ್ಳಿ ಗೇಟ್ ಬಳಿ ಜಮಾಯಿಸಿದ್ದ ಜನರು ಸರ್ವೀಸ್ ರಸ್ತೆಯ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಸರ್ವೀಸ್ ರಸ್ತೆಯ ಚರಂಡಿ ನೀರು ರಸ್ತೆ ಮೇಲೆ ಹರಿದು ಸಂಚಾರಕ್ಕೆ ತೊಂದರೆಯಾಗುತ್ತಿದೆ. ಅಂಡರ್ ಪಾಸ್ ಅಥವಾ ಸ್ಕೈವಾಕ್ ಇಲ್ಲದಿರುವುದರಿಂದ ಗ್ರಾಮಸ್ಥರು ಎಕ್ಸ್‌ಪ್ರೆಸ್‌ವೇ ಆಚೆಗಿನ ತಮ್ಮ ಜಮೀನುಗಳಿಗೆ ಹೋಗಲು 2–3 ಕಿ.ಮೀ. ದೂರ ಬಳಸಬೇಕಾಗಿದೆ. ಬ್ಯಾರಿಕೇಡ್ ಅಳವಡಿಸದ ಕಾರಣ, ವಾಹನಗಳು ರಸ್ತೆ ಬದಿ ಗದ್ದೆಗಳಿಗೆ ಬೀಳುತ್ತಿವೆ. ಹೆದ್ದಾರಿ ಮೇನ್ ಕ್ಯಾರಿಯೇಜ್ ಮತ್ತು ಸರ್ವೀಸ್ ರಸ್ತೆಗಳಿಗೆ ಬೀದಿ ದೀಪವೇ ಇಲ್ಲದಿರುವುದು ●9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನ 24 ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಾಣಕ್ಕೆ ನಿರ್ಧಾರ ಪುಟ –9

ಎಕ್ಸ್‌ಪ್ರೆಸ್‌ವೇನಲ್ಲಿ ಎಲ್ಲಿಯೂ ವಾಹನ ನಿಲ್ಲಿಸಬೇಡಿ; ಟೋಲ್ ಪ್ಲಾಜಾ ಬಳಿ ಮಾತ್ರ ವಿರಮಿಸಿ

ದರೋಡೆ, ಸುಲಿಗೆಯಿಂದ ಪಾರಾಗಲು ಸಂಸದ ಪ್ರತಾಪ್ ಸಿಂಹ ಸಲಹೆ!

ಮೈಸೂರು,ಆ.26(ಆರ್‌ಕೆ)–ರಾತ್ರಿ ವೇಳೆ ನಿದ್ರೆ ಬಂದಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಎಲ್ಲೆಂದರಲ್ಲಿ ವಾಹನ ನಿಲ್ಲಿಸಬೇಡಿ. ಎರಡೂ ಟೋಲ್ ಪ್ಲಾಜಾಗಳ ವಿಶಾಲ ಸ್ಥಳದಲ್ಲಿ ವಾಹನ ನಿಲ್ಲಿಸಿಕೊಂಡು ವಿಶ್ರಾಂತಿ ಪಡೆದು, ಮುಂದೆ ಸಾಗಿ ಎಂದು ಸಂಸದ ಪ್ರತಾಪ್‌ಸಿಂಹ, ವಾಹನ ಚಾಲಕರು ಹಾಗೂ ಸವಾರರಿಗೆ ಇಂದಿಲ್ಲಿ ಸಲಹೆ ನೀಡಿದ್ದಾರೆ. ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸರ್ವೀಸ್ ರಸ್ತೆ ಪರಿಶೀಲಿಸಿದ ಅವರು, ಕೆ.ಆರ್.ಮಿಲ್ ಕಾಲೋನಿ ಬಳಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು. ಹೆದ್ದಾರಿ ●9ನೇ ಪುಟಕ್ಕೆ

ಇಲವಾಲದ ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘದ 3ನೇ ವಾರ್ಷಿಕ ಸಂತೋಷ ಕೂಟ



ಮೈಸೂರು,ಆ.26–ಮೈಸೂರಿನ ಇಲವಾಲದ ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘದ 3ನೇ ವಾರ್ಷಿಕ ಸಂತೋಷ ಕೂಟ, ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ (ಭಾರತ್ ಕ್ಯಾನ್ಸರ್ ಆಸ್ಪತ್ರೆ ಎದುರು) ಗ್ರ್ಯಾಂಡ್ ಚಿಪ್ಪಾಸ್ ಹೋಟೆಲ್‌ನಲ್ಲಿ ದೇಯಂಡ ಜಯಾ ಚೆಂಗಪ್ಪನವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನೆರವೇರಿತು.

ಮುಖ್ಯ ಅತಿಥಿಗಳಾಗಿ ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಡ ಮುತ್ತಪ್ಪ ಮತ್ತು ಶ್ರೀಮತಿ ರೇಖಾ ಮುತ್ತಪ್ಪ ಭಾಗವಹಿಸಿದ್ದರು. ನಿರ್ವಹಣಾ ಸಮಿತಿಯಲ್ಲಿ ಅಧ್ಯಕ್ಷ ದೇಯಂಡ ಜಯಾ ಚಂಗಪ್ಪ, ಕಾರ್ಯದರ್ಶಿ ಮುಂದನೆರವಂಡ ಸುಬ್ರಮಣಿ, ಖಜಾಂಚಿ ಕಾಡಿರ ನಂದಕುಮಾರ್, ಸಹ ಕಾರ್ಯದರ್ಶಿ ಶ್ರೀಮತಿ ನಂಬಿಯಪಂಡ ಸೀಮಾ ಮಹೇಶ್, ಸಮಿತಿ ಸದಸ್ಯರಾದ ಅಲ್ಲಪಂಡ ಚಾಮಿ ಕುಟ್ಟಪ್ಪ, ನಾಯಕಂಡ ಅಯ್ಯಪ್ಪ, ನಾಯಕಂಡ ಹರೀಶ್ ಅಚ್ಚಯ್, ಮೇಕೇರಿರ ಭರತ್, ಮರಡ ಶಶಿ ಅಯ್ಯಣ್ಣ, ಕೂತಂಡ ದಿನೇಶ್ ಪೂಣಚ್ಚ, ಮುಕ್ಕಾಟಿರ ಸತೀಶ್ ಕಾರ್ಯಪ್ಪ, ಶ್ರೀಮತಿ ಮುಂಡುಮಡ ಲತಾ ಬೋಸು, ಸಮಿತಿ ಸದಸ್ಯರು ಸಂತೋಷ ಕೂಟವನ್ನು ಸಂಘದವರೊಂದಿಗೆ ವಿಜೃಂಭಣೆಯಿಂದ ಆಚರಿಸಿದರು.

ಇದ್ದೂ ಇಲ್ಲದಂತಾಗಿರುವ ಕಾವೇರಿ ಕಲಾ ಗ್ಯಾಲರಿ

ಸಾರ್ವಜನಿಕರಿಗೆ, ಪ್ರವಾಸಿಗರಿಗೆ ಇದರ ಬಗ್ಗೆ ಮಾಹಿತಿಯೇ ಇಲ್ಲ

ಮೈಸೂರು,ಆ.26(ಜಿಎ)– ಕಾವೇರಿ ನದಿ ಉಗಮ ಮತ್ತು ಅದರ ಮಹತ್ವವನ್ನು ತಿಳಿಯಲು ಮೈಸೂರಿನಲ್ಲಿ 'ಕಾವೇರಿ ಕಲಾ ಗ್ಯಾಲರಿ' ಇದ್ದು, ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಇದರ ಬಗ್ಗೆ ಮಾಹಿತಿಯೇ ಇಲ್ಲದಂತಾಗಿದೆ.

ಮೈಸೂರಿನ ವಸ್ತು ಪ್ರದರ್ಶನದ ಆವರಣದಲ್ಲಿ 2022ರ ದಸರಾ ಮಹೋತ್ಸವದ ಅಂಗವಾಗಿ ಪ್ರವಾಸಿಗರಿಗೆ ಕಾವೇರಿ ನದಿಯ ಮಹತ್ವ ಮತ್ತು ಕಾವೇರಿ ಕಣಿವೆಯಲ್ಲಿರುವ ತಾಣಗಳ ಬಗ್ಗೆ ವೈಜ್ಞಾನಿಕವಾಗಿ ಮಾಹಿತಿ ನೀಡುವ 'ಕಾವೇರಿ ಕಲಾ ಗ್ಯಾಲರಿ' ಲೋಕಾರ್ಪಣೆಯಾಗಿತ್ತು. ಈ ಗ್ಯಾಲರಿ ವರ್ಷ ಪೂರ್ತಿ ವೀಕ್ಷಣೆಗೆ ಮುಕ್ತವಾಗಿದ್ದು, ಪ್ರಚಾರದ ಕೊರತೆಯಿಂದ ಗ್ಯಾಲರಿ ದಸರಾ ಮಹೋತ್ಸವಕ್ಕೆ ಮಾತ್ರ ಸೀಮಿತವಾಗಿದೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಮೈಸೂರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಮತ್ತು ನ್ಯಾಷನಲ್ ಕೌನ್ಸಿಲ್ ಆಫ್ ಸೈನ್ಸ್ ಮ್ಯೂಸಿಯಂ ಸಹಯೋಗದೊಂದಿಗೆ ನಗರದ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ 'ಕಾವೇರಿ ಕಲಾ ಗ್ಯಾಲರಿ' ನಿರ್ಮಾಣವಾಗಿದೆ.



'ಗಂಗಾ' ನದಿ ಗ್ಯಾಲರಿಯನ್ನು ಅಲಹಾಬಾದ್‌ನಲ್ಲಿ, 'ಬ್ರಹ್ಮಪುತ್ರ' ಗ್ಯಾಲರಿಯನ್ನು ಅಸ್ಸಾಂನ ಗುವಾಹಟಿಯಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಇಂಡಿಯಾ ನಿರ್ಮಿಸಿದ್ದು, ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದಾಗ ಪ್ರೊ.ಕಸ್ತೂರಿ ರಂಗನ್ ಅವರು ಕಾವೇರಿ ಕಲಾ ಗ್ಯಾಲರಿ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದರು. ಅದರಂತೆ ಮೈಸೂರಿನಲ್ಲಿ ಎನ್‌ಎಎಸ್‌ಐ ಸಹಯೋಗದೊಂದಿಗೆ ಗ್ಯಾಲರಿ ನಿರ್ಮಾಣವಾಗಿದೆ. ಕಾವೇರಿ ನದಿಯ ಪ್ರಾಮುಖ್ಯತೆ ಮತ್ತು ಬೇರೆ ಬೇರೆ ಆಯಾಮದಲ್ಲಿ ಉಪಯುಕ್ತವಾಗಿದೆ ಎಂಬುದನ್ನು ತಿಳಿಯಲು ಇದು ಸಹಕಾರಿಯಾಗಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಕಾವೇರಿ ಕಲಾ ಗ್ಯಾಲರಿಯಲ್ಲಿ ಕಾವೇರಿ ನದಿಯು ಎಲ್ಲಿ ಹುಟ್ಟುತ್ತದೆ ಮತ್ತು ಎಲ್ಲಿಗೆ ಹೋಗಿ ಸೇರುತ್ತದೆ ಎಂಬುದನ್ನು ತಿಳಿಸಲು ವೈಜ್ಞಾನಿಕವಾಗಿ ರೂಪಿಸಲಾಗಿದೆ.

> "'ಕಾವೇರಿ ಕಲಾ ಗ್ಯಾಲರಿ'ಯು ವರ್ಷದ 365 ದಿನವೂ ವೀಕ್ಷಣೆಗೆ ಮುಕ್ತವಾಗಿದೆ ಆದರೆ, ಜನರು ದಸರಾ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಶಾಲಾ – ಕಾಲೇಜಿನ ಮಕ್ಕಳು ಭೇಟಿ ನೀಡಿ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಪ್ರಾಧಿಕಾರದ ವತಿಯಿಂದ ಡಿಡಿಪಿಐಗೆ ಪತ್ರ ಬರೆಯಲಾಗಿದೆ. ಪ್ರಾಧಿಕಾರದ ಸಾಮಾಜಿಕ ಜಾಲತಾಣದಲ್ಲಿಯೂ ಪ್ರಚಾರ ಮಾಡಲಾಗಿದೆ. ಮಕ್ಕಳಿಗೆ 5 ರೂ. ಮತ್ತು ಸಾರ್ವಜನಿಕರಿಗೆ 25 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ.
>
> –ರಾಜೇಶ್ ಜಿ.ಗೌಡ, ಸಿಇಓ, ವಸ್ತು ಪ್ರದರ್ಶನ ಪ್ರಾಧಿಕಾರ



3 ಡಿ ಸಾಕ್ಷ್ಯಚಿತ್ರ: ದಕ್ಷಿಣ ಕರ್ನಾಟಕದ ಪ್ರಮುಖ ನದಿಯಾಗಿರುವ ಕಾವೇರಿ ಮಹತ್ವ, ಈ ಕಣಿವೆಯ ಪ್ರಮುಖ ತಾಣಗಳನ್ನು ಪರಿಚಯಿಸುವ ಮತ್ತು ಬೇರೆ ಯಾವ ಆಯಾಮಗಳಲ್ಲಿ ಉಪಯುಕ್ತವಾಗಿದೆ ಎಂಬುದನ್ನು ತಿಳಿಸುವ ಉದ್ದೇಶದಿಂದ 30 ನಿಮಿಷಗಳ ತ್ರಿಡಿ ಸಾಕ್ಷ್ಯಚಿತ್ರ ವೀಕ್ಷಣೆಗೆಂದು ವಿಶೇಷ ಕೊಠಡಿಯನ್ನು ನಿರ್ಮಾಣ ಮಾಡಲಾಗಿದ್ದು, ವಿಶೇಷ ಅನುಭವ ನೀಡಲಿದೆ. ಇಂತಹ ಗ್ಯಾಲರಿಯೂ ಕಾವೇರಿ ನದಿಯ ಮಹತ್ವವನ್ನು ಇಡೀ ರಾಜ್ಯದ ಜನರಿಗೆ ತಿಳಿಸಲು ವರ್ಷದ 365 ದಿನಗಳು ವೀಕ್ಷಣೆಗೆ ಲಭ್ಯವಿರಲಿದೆ.

ಗ್ಯಾಲರಿ ವಿಶೇಷತೆಗಳು

ವಸ್ತುಪ್ರದರ್ಶನ ಪ್ರಾಧಿಕಾರದ ಕಾರಂಜಿ ಕಟ್ಟಡದಲ್ಲಿನ ಅಂದಾಜು 19 ಸಾವಿರ ಚದರ ಅಡಿ ಪ್ರದೇಶದಲ್ಲಿ ಸುಮಾರು 3.5 ಕೋಟಿ ರೂ. ವೆಚ್ಚದಲ್ಲಿ 'ಕಾವೇರಿ ಕಲಾ ಗ್ಯಾಲರಿ'ಯನ್ನು ನಿರ್ಮಿಸಲಾಗಿದೆ. ನೆಲ ಮಹಡಿಯಲ್ಲಿ ನದಿಗೆ ಸಂಬಂಧಿಸಿದ ವಿವರಗಳು ಇದೆ. ಗ್ಯಾಲರಿಯ ಒಳಭಾಗದಲ್ಲಿ ಕಾವೇರಿ ತಲಕಾವೇರಿಯಿಂದ ತಮಿಳುನಾಡಿನ ಪೂಂಪುಹಾರ್‌ವರೆಗೆ ಸಾಗುವ ನದಿಯ ನಕಾಶೆ, ಪ್ರವಾಸಿ ಕೇಂದ್ರಗಳು, ಸಾಂಸ್ಕೃತಿಕ ವಿವರಗಳು ಇವೆ.

ಕಟ್ಟಡ ಕಾರ್ಮಿಕರಿಗೆ ಕಾರ್ಮಿಕರ ಕಾರ್ಡ್ ವಿತರಣೆ



ಮೈಸೂರು,ಆ.26–ಮೈಸೂರಿನ ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ ಬಿಜೆಪಿ ಅಸಂಘಟಿತ ಕಾರ್ಮಿಕ ಪ್ರಕೋಷ್ಠದಿಂದ 26 ಕಟ್ಟಡ ಕಾರ್ಮಿಕರಿಗೆ ಕಟ್ಟಡ ಕಾರ್ಮಿಕರ ಕಾರ್ಡ್ ಮತ್ತು 6 ಮಂದಿಗೆ ವೃದ್ಧಾಪ್ಯ ವೇತನ (ಪಿಂಚಣಿ) ವಿತರಣೆ ಮಾಡಲಾಯಿತು. ಈ ವೇಳೆ ಬಿಜೆಪಿ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ರಾಜ್ಯ ಸಂಚಾಲಕ ಉಮೇಶ್ ಮಾತನಾಡಿ, ಕೇಂದ್ರ ಸರ್ಕಾರದ ಸಾಧನೆಗಳು, ಪ್ರಧಾನಮಂತ್ರಿ ಆವಾಸ್ ಯೋಜನೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕಟ್ಟಡ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳ ಕುರಿತು ಕಟ್ಟಡ ಕಾರ್ಮಿಕರಿಗೆ ಮಾಹಿತಿ ನೀಡಿದರು. ಜೀವಧಾರ ರಕ್ತ ನಿಧಿ ಕೇಂದ್ರದ ಅಧ್ಯಕ್ಷ ಗಿರೀಶ್, ಚಾಮರಾಜ ಕ್ಷೇತ್ರ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಸೂರಜ್, 24ನೇ ವಾರ್ಡ್ ಬಿಜೆಪಿ ಅಧ್ಯಕ್ಷ ವಿಜಯ್‌ಕುಮಾರ್, ಮುಖಂಡ ಮರಿಸ್ವಾಮಿ ಇತರರು ಹಾಜರಿದ್ದರು.

ನಾಳೆ ಪ್ರಗತಿ ಪರಿಶೀಲನಾ ಸಭೆ

ಮೈಸೂರು,ಆ.26–ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ಆ.28ರಂದು ಬೆಳಗ್ಗೆ 11 ಗಂಟೆಗೆ ಜಿಪಂ ಮುಖ್ಯ ಸಭಾಂಗಣದಲ್ಲಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಖುದ್ದು ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಫ್ರಾನ್ಸಿಸ್ ಡಿಸೋಜಾ

ಮೈಸೂರು,ಆ.26–ಮೈಸೂರಿನ ವಿಜಯನಗರ 2ನೇ ಹಂತದ 5ನೇ ಕ್ರಾಸ್ ನಿವಾಸಿ ಫ್ರಾನ್ಸಿಸ್ ಡಿಸೋಜಾ (68) ಶನಿವಾರ ನಿಧನರಾದರು. ಮೃತರು ಪತ್ನಿ ಫಿಲೋಮಿನಾ ಡಿಸೋಜಾ, ಪುತ್ರರಾದ ರಿಚರ್ಡ್ ಮತ್ತು ರೋಶನ್, ಪುತ್ರಿ ರೀನಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಳವಾಡಿ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ಭಾನುವಾರ (ಆ.27) ಮಧ್ಯಾಹ್ನ 3 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆ.29ರಂದು ಮಹಿಳೆಯರ ವುಶು ಚಾಂಪಿಯನ್‌ಶಿಪ್

ಮೈಸೂರು,ಆ.26(ಜಿಎ)–ಕರ್ನಾಟಕ ವುಶು ಸಂಸ್ಥೆ ವತಿಯಿಂದ ಆ.29ರಂದು ಖೇಲೋ ಇಂಡಿಯಾ ಸ್ಟೇಟ್ ವುಮೆನ್ಸ್ ವುಶು ಚಾಂಪಿಯನ್‌ಶಿಪ್ ಮೈಸೂರಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ವುಶು ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಎಂ.ಎ.ಧರ್ಮ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರೀಡೆಗಳ ಸಬಲೀಕರಣಕ್ಕಾಗಿ ರಾಷ್ಟ್ರೀಯ ಕ್ರೀಡಾ ದಿನವಾದ ಆ.29ರಂದು ದೇಶಾದ್ಯಂತ 25ಕ್ಕೂ ಹೆಚ್ಚು ರಾಜ್ಯಗಳಲ್ಲಿ ಖೇಲೋ ಇಂಡಿಯಾ ಸ್ಟೇಟ್ ವುಮೆನ್ಸ್ ವುಶು ಚಾಂಪಿಯನ್ ಶಿಪ್ ನಡೆಯುತ್ತಿದ್ದು, ಕರ್ನಾಟಕದಲ್ಲಿ ಮೈಸೂರಿನಲ್ಲಿ ನಡೆಯಲಿದೆ ಎಂದರು.

ಅಂದು ಬೆಳಗ್ಗೆ ಮೈಸೂರಿನ ಚಾಮುಂಡಿ ವಿಹಾರ್ ಕ್ರೀಡಾಂಗಣದಲ್ಲಿ ರಾಜವಂಶಸ್ಥರಾದ ತ್ರಿಶಿಕಾ ಕುಮಾರಿ ಒಡೆಯರ್ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ. ಹರೀಶ್‌ಗೌಡ, ಕೆ.ಹರೀಶ್‌ಗೌಡ ಭಾಗವಹಿಸಲಿದ್ದಾರೆ. ಈ ವೇಳೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಕೆ.ಎಂ. ಗಾಯತ್ರಿ, ಎಸ್‌ಪಿ ಸೀಮಾ ಲಾಟ್ಕರ್ ಸೇರಿದಂತೆ ಮತ್ತಿತರ ಗಣ್ಯರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

200 ಸ್ಪರ್ಧಿಗಳು ಈ ಪಂದ್ಯಾವಳಿಗೆ ನೋಂದಣಿ ಮಾಡಿಕೊಂಡಿದ್ದು, ಮೈಸೂರಿನ 35 ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಸ್ಪರ್ಧಾಳುಗಳಿಗೆ ಉಚಿತ ಪ್ರವೇಶವಿದ್ದು, ಎಲ್ಲಾ ರೀತಿ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಇಲ್ಲಿನ ವಿಜೇತರಾದ ಸ್ಪರ್ಧಿಗಳು ಮುಂದೆ ನಡೆಯಲಿರುವ ದಕ್ಷಿಣ ವಲಯದ ಪಂದ್ಯಾವಳಿಗೆ ಆಯ್ಕೆ ಆಗಲಿದ್ದಾರೆ ಎಂದರು.

ಇದೇ ವೇಳೆ ಜಿಪಂ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್ ಪಂದ್ಯಾವಳಿ ಪೋಸ್ಟರ್ ಬಿಡುಗಡೆಗೊಳಿಸಿದರು. ಸುದ್ದಿಗೋಷ್ಠಿಯಲ್ಲಿ ಅತೀ ಕಿರಿಯ ವುಶು ಚಾಂಪಿಯನ್ ಜಿ.ಪ್ರಣತಿ, ವುಶು ತರಬೇತುದಾರ ಎಚ್.ಎಸ್.ಪಾರ್ತಿಪ, ಅಕ್ಷತಾ ಮತ್ತು ಎಸ್.ಡಿ.ಗಿರಿಧರ್ ಉಪಸ್ಥಿತರಿದ್ದರು.

ಡಾ.ಸುಬ್ರಹ್ಮಣ್ಯರಿಂದ 'ಲಾಜಿಸ್ಟಿಕ್ಸ್-4.9' ಕುರಿತು ಉಪನ್ಯಾಸ



ಮೈಸೂರು,ಆ.25–ಮೈಸೂರಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದಲ್ಲಿ 'ಪ್ರಜ್ಞಾ–ವಿಟಿಯು' ಶೀರ್ಷಿಕೆಯಡಿಯಲ್ಲಿ ನಡೆದ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಬೆಂಗಳೂರಿನ ಆರ್‌ವಿಸಿಇ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಎನ್.ಸುಬ್ರಹ್ಮಣ್ಯ 'ಲಾಜಿಸ್ಟಿಕ್ಸ್–4.9' ಕುರಿತು ಉಪನ್ಯಾಸ ನೀಡಿದರು. ಈ ವೇಳೆ ಸುಬ್ರಹ್ಮಣ್ಯ ಅವರು ಲಾಜಿಸ್ಟಿಕ್ಸ್–4.0 ಪ್ರಮುಖ ಸವಾಲುಗಳು, ಅವಕಾಶಗಳು ಮತ್ತು ವ್ಯವಹಾರಗಳ ಪರಿಣಾಮಗಳ ಕುರಿತು ಚರ್ಚಿಸಿದರು. ಆಟೋಮೆಷಿನ್ ಮತ್ತು ಸಪ್ಲೈ ಚೈನ್ ಪ್ರೋಸಸ್ ಮೂಲಕ ವ್ಯವಹಾರಗಳ ಬೇಡಿಕೆಯನ್ನು ಪೂರೈಸಲು ಸಹಾಯ ಮಾಡುತ್ತದೆ ಎಂಬುದನ್ನು ತಿಳಿಸಿಕೊಟ್ಟರು. ವಿಟಿಯು ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಡಾ.ಟಿ.ಪಿ. ರೇಣುಕಾಮೂರ್ತಿ, ಬೋಧಕ ಸಿಬ್ಬಂದಿ ಭಾಗವಹಿಸಿದ್ದರು.

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಜನ್ಮದಿನ: ಆ.31ರಂದು ಉದ್ಯೋಗ ಮೇಳ



ಮೈಸೂರು,ಆ.26(ಜಿಎ)–ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ಆ.31ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಸಂಚಾಲಕ ಡಾ. ಮಹೇಶ್ ಸೋಸಲೆ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಅವರ 41ನೇ ಹುಟ್ಟುಹಬ್ಬದ ಅಂಗವಾಗಿ ಟಿ.ನರಸೀಪುರದ ಎ.ಪಿ.ಎಂ.ಸಿ ಆವರಣದಲ್ಲಿ ಅಂದು ಬೆಳಗ್ಗೆ 10 ಗಂಟೆ ಬೃಹತ್ ಉದ್ಯೋಗ ಮೇಳವನ್ನು ಸುನೀಲ್ ಬೋಸ್ ಯುವ ಬ್ರಿಗೇಡ್ ವತಿಯಿಂದ ಏರ್ಪಡಿಸಲಾಗಿದೆ. ಉದ್ಯೋಗ ಮೇಳದಲ್ಲಿ ಇನ್‌ಫೋಸಿಸ್, ಐಸಿಐಸಿಐ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಮುತ್ತೂಟ್ ಫೈನಾನ್ಸ್ ಸೇರಿದಂತೆ 100ಕ್ಕೂ ಅಧಿಕ ಕಂಪನಿಗಳು ಭಾಗವಹಿಸಲಿದ್ದು, ಎರಡು ಸಾವಿರಕ್ಕೂ ಅಧಿಕ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಳಗದ ನಟರಾಜ್ ಶಿವಣ್ಣ, ಜೋಗಿ ಮಹೇಶ್, ಜೀವನ್, ಸಂಜಯ್ ಮತ್ತು ರವಿರಾಜ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಆ.29ರಂದು ಉದ್ಯೋಗ ಮೇಳ

ಮೈಸೂರು,ಆ.26(ಜಿಎ)–ಮೈಸೂರಿನ ಎನ್‌ಎಸ್ ಸೇವಾ ಟ್ರಸ್ಟ್, ಭಾವಿಸ್ ಫೌಂಡೇಶನ್ ಮತ್ತು ರೋಟರಿ ಪಶ್ಚಿಮ ಸಹಯೋಗದೊಂದಿಗೆ ಆ.29ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ ಎಂದು ಎನ್‌ಎಸ್ ಸೇವಾ ಟ್ರಸ್ಟ್‌ನ ಅಧ್ಯಕ್ಷ ಎನ್.ಎಸ್. ನಂಜುಂಡಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ನಟರಾಜ ಕಲ್ಯಾಣ ಮಂಟಪದಲ್ಲಿ ಉದ್ಯೋಗ ಮೇಳ ಆಯೋಜಿಸಿದ್ದು, ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷರಾದ ಚಿದಾನಂದಸ್ವಾಮಿ ಅವರ ಸಾನ್ನಿಧ್ಯದಲ್ಲಿ ನಿರ್ಮಲ ಆಸ್ಪತ್ರೆ ನಿರ್ದೇಶಕ ಡಾ.ಬಸವರಾಜು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಅನಘ ಆಸ್ಪತ್ರೆಯ ಡಾ.ಮಹೇಶ್, ಬಾಮಿಸ್ ಕನ್ಸ್ಟ್ರಕ್ಷನ್ ಮಾಲೀಕ ರಾಘವೇಂದ್ರ ಭಾಗವಹಿಸಲಿದ್ದಾರೆ. ಪ್ರೊ.ಹೆಚ್.ಶಿವರಾಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಉದೋಗ ಮೇಳದಲ್ಲಿ ಮೈಸೂರು, ಬೆಂಗಳೂರಿನ 70 ಕಂಪನಿಗಳು ಭಾಗವಹಿಸಲಿದ್ದು, 8ನೇ ತರಗತಿಯಿಂದ ಡಿಗ್ರಿವರೆಗೆ ವಿದ್ಯಾಭ್ಯಾಸ ಮಾಡಿರುವವರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ 974328 3001, 9980959598 ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡ ಅರುಣ್‌ಕುಮಾರ್, ಉದ್ಯಮಿ ಚೆನ್ನ ಪಾಜೀ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪ್ಯಾಲೇಸ್ ಸ್ಪೋರ್ಟ್ಸ್ ಕ್ಲಬ್:** ಚಾಮುಂಡಿ ರಸ್ತೆ ಓಟದ ಸ್ಪರ್ಧೆ, ಅಧ್ಯಕ್ಷತೆ: ಶಾಸಕ ಜಿ.ಡಿ. ಹರೀಶ್‌ಗೌಡ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ವಿಶೇಷ ಆಹ್ವಾನಿತರು: ಮೇಯರ್ ಶಿವಕುಮಾರ್, ಸನ್ಮಾನಿತರು: ರಾಷ್ಟ್ರೀಯ ಕ್ರೀಡಾಪಟು ಕು.ವಿ.ಅಂಬಿಕಾ, ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕ್ಲಬ್ ಉಪಾಧ್ಯಕ್ಷ ಅರುಣ್ ಆರ್.ವೈ, ಸ್ಥಳ: ರಾಮಕೃಷ್ಣನಗರ ವೃತ್ತ, ಬೆಳಗ್ಗೆ 7ಕ್ಕೆ.

■ **ಕಾರ್ಡಿಯಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾ:** ಸಿಎಸ್‌ಐ 25ನೇ ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ: ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಪ್ರಾಸ್ತಾವಿಕ ಭಾಷಣ: ಸಿಎಸ್‌ಐ, ಮೈಸೂರು ಕಾರ್ಯದರ್ಶಿ ಡಾ.ಎಸ್.ಹೇಮಾ, ಮುಖ್ಯ ಅತಿಥಿಗಳು: ಶ್ರೀ ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಪ್ರಾಧ್ಯಾಪಕ ಡಾ.ಟಿ.ಆರ್.ರಘು, ಸಿಎಸ್‌ಐ, ಕರ್ನಾಟಕ ರಾಜ್ಯ ಅಧ್ಯಕ್ಷ ಡಾ. ಬಿ.ಕೆ.ಮಹಾಲ, ಸಿಎಸ್‌ಐ ದಕ್ಷಿಣ ವಲಯ ಇಸಿ ಡಾ.ಬಿ.ಹೆಚ್.ನಟೇಶ್, ಕಾರ್ಡಿಯಾಕ್ ಸೈನ್ಸ್ ಅಧ್ಯಕ್ಷ ಡಾ. ವಿವೇಕ್ ಜವಳಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಸಹಜ ಸಮೃದ್ಧಿ ಸಂಸ್ಥೆ :** ಸಿರಿಧಾನ್ಯ ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಸಂಸ್ಕೃತಿ ಪ್ರಕಾಶನ:** ಡಾ.ಪುರುಷೋತ್ತಮ ಆರ್.ತಿಮ್ಮಪ್ಪ ಅವರ ಚಿಟಿಗಾನಪುರಿ ಚಾರಣ ಹಾಗೂ ರಾಮನ ಆಧ್ಯಾತ್ಮಿಕ ಸಾಧನೆಯ ಬೆಳಕು ನೆರಳುಗಳು ಕೃತಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಪ್ರೊ.ಟಿ.ಕೆ. ಸುಂದರ ಲಕ್ಷ್ಮಿ, ಉಪಸ್ಥಿತರು: ಡಾ.ಮಂಜುಳ ಪಿ.ರಾವ್, ಆಶಯ ನುಡಿ: ಸಂಸ್ಕೃತಿ ಸುಬ್ರಹ್ಮಣ್ಯ, ಪುಸ್ತಕ ಪರಿಚಯ: ಪಿ.ಎಸ್. ಲಕ್ಷ್ಮೀನಾರಾಯಣ ರಾವ್, ಡಾ.ಜಯಶಂಕರ ಕಂಗಣ್ಣಾರು, ಡಾ. ಪಿ.ಆರ್. ಹರಿನಾಥ್, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಸಭಾಂಗಣ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ

■ **ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್, ಡಿ. ದೇವರಾಜ ಅರಸ್ ದತ್ತಿ:** ಮಾಜಿ ಸಿಎಂ ಡಿ.ದೇವರಾಜ ಅರಸ್ ಜನ್ಮದಿನೋತ್ಸವ, ಜಯಚಾಮರಾಜ ಅರಸ್ ಅವರ ಅನುವಾದಿತ ಕೃತಿ 'ಹೆಣ ಹೊರುವವನ ವೃತ್ತಾಂತ' ಕೃತಿ ಬಿಡುಗಡೆ ಸಮಾರಂಭ, ಅರಸು ಜನಾಂಗದ ಚಿಂತನ–ಮಂಥನ ಕಾರ್ಯಕ್ರಮ, ಉದ್ಘಾಟನೆ: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಕೃತಿ ಬಿಡುಗಡೆ: ಎಡಿಸಿ ಡಾ.ಕವಿತಾ ಜಯರಾವ್, ಕೃತಿ ಪರಿಚಯ: ಸಾಹಿತಿ ಪ್ರೊ. ಸಿ.ನಾಗಣ್ಣ, ಉಪಸ್ಥಿತರು: ಬಿ.ಜಯರಾಮರಾಜೇ ಅರಸ್, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್, ಸ್ಥಳ: ಶ್ರೀ ವೇಣು ಗೋಪಾಲಸ್ವಾಮಿ ದೇವಸ್ಥಾನದ ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಗಾನಯೋಗಿ ಕಲಾ ಟ್ರಸ್ಟ್:** ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ಸಿದ್ದಮಲ್ಲ ಸ್ವಾಮೀಜಿ, ಉದ್ಘಾಟನೆ: ಶ್ರೀ ಕುಂದೂರು ಮಠದ ಡಾ.ಶರತ್‌ಚಂದ್ರ ಸ್ವಾಮೀಜಿ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಬಿ.ಎಸ್. ವಿರೂಪಾಕ್ಷ, ಉಪಾಧ್ಯಕ್ಷ ಶ್ರೀಮತಿ ಸವಿತಾ ನಾಗೇಂದ್ರ, ಮುಖ್ಯ ಅತಿಥಿಗಳು: ಬಿ.ಎಸ್.ಬಾಲಸರಸ್ವತಿ, ಬಸವರಾಜ್ ಉಮ್ಮತ್ತೂರು, ಕೆ.ಆನಂದಕುಮಾರ್, ಟಿ.ಎಸ್.ಮಂಜುನಾಥ್ ಪ್ರಸಾದ್, ಕೆ.ಎನ್. ಫಣಿರಾಜಮೂರ್ತಿ ಕುದೇರು, ಕೆ.ಎಂ.ಗುರುಪ್ರಸಾದ್ ಕೊಡಗಾಪುರ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಅಗ್ರಹಾರ, ಬೆಳಗ್ಗೆ 10ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಪ್ರೊ. ಮಳಲಿ ವಸಂತಕುಮಾರ್ ರವರ ನೆನಪಿನ ದತ್ತಿ ಪ್ರಶಸ್ತಿ ಪ್ರದಾನ, ಪ್ರಶಸ್ತಿ ಪುರಸ್ಕೃತರು : ಹಿರಿಯ ವಿದ್ವಾಂಸ ಪ್ರೊ. ಜಿ.ಎಸ್. ಭಟ್ಟ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಸಾಹಿತಿ ಡಾ.ಸಿಪಿಕೆ, ಪ್ರೊ.ಕೆ.ಅನಂತರಾಮು, ಪ್ರೊ.ಎಸ್.ಎನ್.ಹೆಗ್ಡೆ, ಅಂಶಿ ಪ್ರಸನ್ನಕುಮಾರ್, ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಸ್ಥಳ: ಕುಮಾರಕೃಪ, 5ನೇ ತಿರುವು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.



ಇಂದಿನ ಪಂಚಾಂಗ

27.8.2023 ಭಾನುವಾರ, ಮಳೆ ನಕ್ಷತ್ರ: ಮಖ 17.08.2023 ರಿಂದ 30.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮೈಸೂರು ಜಿಲ್ಲಾ ಗಾಣಿಗರ ಸಂಘ:** ಪ್ರತಿಭಾ ಪುರಸ್ಕಾರ–23 ಹಾಗೂ ಸಮಾಜದ ಗಣ್ಯರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಉಪಸ್ಥಿತರು: ಶಾಸಕರಾದ ಜಿ.ಡಿ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮೈಲ್ಯಾಕ್ ಮಾಜಿ ಅಧ್ಯಕ್ಷ ಆರ್.ರಘು, ಅರಣ್ಯ ವಸತಿ ವಿಹಾರ ಧಾಮಗಳ ಸಂಸ್ಥೆ ಮಾಜಿ ಅಧ್ಯಕ್ಷ ಅಪ್ಪಣ್ಣ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮಾಜಿ ಮೇಯರ್ ಅನಂತು, ಸಂಘದ ಅಧ್ಯಕ್ಷ ಎಂ.ಆರ್.ರಾಜಶೇಖರ್, ಉಪಾಧ್ಯಕ್ಷ ಬಿ.ವಿ. ನರಸಿಂಹಯ್ಯ, ಗಾಣಿಗರ ವಿದ್ಯಾರ್ಥಿನಿಲಯ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ವಾಯ್ಸ್ ಆಫ್ ಪೀಪಲ್:** ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಹರೀಶ್‌ಗೌಡ, ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ದೇವರಾಜ ಮಾರುಕಟ್ಟೆ ಅಧ್ಯಕ್ಷ ಕೆ.ದಿನೇಶ್, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಜಿ.ಗಂಗಾಧರ್, ರಶ್ಮಿ ಎನ್.ರಾಜ್, ಉದ್ಯಮಿ ಎನ್.ಗಿರೀಶ್, ಸ್ಥಳ: ವಿಜಯನಗರ ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್:** ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್‌ನ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಪ್ರತಿಭಾ ಪುರಸ್ಕಾರ: ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್.ನಂದಕುಮಾರ್, ಮುಖ್ಯ ಅತಿಥಿಗಳು: ಸಚಿವರಾದ ಹೆಚ್.ಸಿ.ಮಹದೇವಪ್ಪ, ರಾಮಲಿಂಗಾ ರೆಡ್ಡಿ, ಈಶ್ವರ್ ಖಂಡ್ರೆ, ಕೆ.ವೆಂಕಟೇಶ್, ಶಾಸಕರಾದ ಹೆಚ್.ವಿಶ್ವನಾಥ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮಾಜಿ ಮುಡಾ ಅಧ್ಯಕ್ಷ ಸಿ.ಬಸವೇಗೌಡ, ಎಂ.ತಿಬ್ಬೇಗೌಡ, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಮೆಡಿಕಲ್ ಕಾಲೇಜು, ಜೆ.ಕೆ.ಮೈದಾನ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಭೀಮ್ ಸೇನೆ :** ನಗರ ಸಮಿತಿ ಘಟಕದ ಉದ್ಘಾಟನಾ ಸಮಾರಂಭ, ಸ್ಥಳ: ಜಲದರ್ಶಿನಿ ಅತಿಥಿ ಗೃಹ, ಬೆಳಗ್ಗೆ 11ಕ್ಕೆ

■ **ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ಸಂಘದ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಅಧ್ಯಕ್ಷ ಸಿ.ವಿ. ಪಾರ್ಥಸಾರಥಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಆರಾಧ್ಯ ಮಹಾಸಭಾ:** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಆರಾಧ್ಯ ಮಹಾಸಭಾ ಅಧ್ಯಕ್ಷ ಪಿ.ನಾಗಭೂಷಣಾರಾಧ್ಯ, ಪ್ರತಿಭಾ ಪುರಸ್ಕಾರ ಪ್ರದಾನ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಸ್ಥಳ: ಆರಾಧ್ಯ ಮಹಾಸಭಾ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪ್ರತಿಭಾ ಪುರಸ್ಕಾರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಸಾನ್ನಿಧ್ಯ: ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಜೆಎಸ್‌ಎಸ್ ಮಾಧ್ಯಮ ಸಂಸ್ಥೆ ಅಧ್ಯಕ್ಷ ಶ್ರೀಹರಿ ದ್ವಾರಕಾನಾಥ್ ಯೋಗಾತ್ಮ, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘ:** ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಹೆಚ್.ವಿ.ಎಲ್.ಎನ್. ಆಚಾರ್, ಸ್ಥಳ: ರೋಟರಿ ಮೈಸೂರು ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ರಾಷ್ಟ್ರೀಯ ಭಾಷೆಗಳ ಪ್ರಚಾರ ಸಮಿತಿ:** ಪ್ರಾದೇಶಿಕ ಭಾಷೆಗಳ ಪ್ರಚಾರ ಸಪ್ತಾಹದ ಅಂಗವಾಗಿ ಮಲೆನಾಡಿನ ಮಳೆ, ಮಣ್ಣು, ಭೂಕುಸಿತ–ಮಿಥ್ಯ ಮತ್ತು ಸತ್ಯಗಳ ನಡುವೆ ಕುರಿತು ಡಾ. ಯದುಪತಿ ಪುಟ್ಟಿ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 11.30ಕ್ಕೆ.

■ **ಎಸ್.ಆರ್.ಎಸ್. ಪ್ರಕೃತಿ ನಗರ :** ಗೌರವ ಸಮರ್ಪಣಾ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ವಿಶೇಷ ಆಹ್ವಾನಿತರು : ಮಾಜಿ ಶಾಸಕ ಎಸ್.ಎ. ರಾಮದಾಸ್, ಅಧ್ಯಕ್ಷತೆ: ಪ್ರಕೃತಿ ನಗರ ಅಧ್ಯಕ್ಷ ಪದ್ಮನಾಭ, ಸ್ಥಳ: ನಿವೇಶನ ಸಂಖ್ಯೆ 86, ಜೆ.ಪಿ.ನಗರ, ಸಂಜೆ 5ಕ್ಕೆ.

■ **ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಐಸಿರಿ:** ಮಿಸ್ಟರ್, ಮಿಸಸ್ ಅಂಡ್ ಮಿಸ್ಟರ್ಸ್ ಮೈಸೂರು –2023, ಸ್ಥಳ: ಶ್ರೀ ವೆಂಕಟಕೃಷ್ಣ ಸಭಾಂಗಣ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ, ಕೃಷ್ಣಮೂರ್ತಿಪುರಂ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು:** ಶತೋತ್ತರ ಸುವರ್ಣ–ರಜತ ಮಹೋತ್ಸವ–2023, ವಿದುಷಿ ಡಾ.ಜಯಂತಿ ಕುಮರೇಶ್ ಅವರಿಂದ ವೀಣಾ ವಾದನ ಕಾರ್ಯಕ್ರಮ, ವಿದ್ವಾನ್ ಕುಮರೇಶ್–ವಯೋಲಿನ್, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಗುರುಪ್ರಸನ್ನ–ಖಂಜಿರ, ಸ್ಥಳ: ಟಿ.ಪಿ. ಕೈಲಾಸಂ ರಂಗಮಂಟಪ, ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣ, ಸಂಜೆ 6ಕ್ಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಕು.ಪ್ರೇರಣಾ ಪ್ರವೀಣ್ ಅವರಿಂದ ಗಾಯನ, ಅಮೋಘ್ ನಡದೂರ್–ಪಿಟೀಲು, ಶುಭಾಂಗ್ ಸಾಮಗ–ಮೃದಂಗ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸನಾತನ ಸಭಾ, ಮೈಸೂರು :** ರಾಮಾಯಣ ಪ್ರವಚನ ಮಾಲಿಕೆ ಏಳನೇ ಸರಣಿ, ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಕುರಿತು ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ.ವಾಸುದೇವಾಚಾರ್ಯ ಭವನ, ಸಂಜೆ 6.30ರಿಂದ 8ರವರೆಗೆ.

■ **ರಂಗಾಯಣ:** ರಂಗಾಯಣದ ರೆಪರ್ಟರಿ ಕಲಾವಿದರಿಂದ ಮುಟ್ಟಿಸಿಕೊಂಡವನು ನಾಟಕ ಪ್ರದರ್ಶನ, ರಂಗರೂಪ ನಿರ್ದೇಶನ : ಕೆ.ಆರ್. ನಂದಿನಿ, ರಂಗವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ನೃತ್ಯ ಸಂಯೋಜನೆ: ಮೈಮ್ ರಮೇಶ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ, ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ ಅವರಿಂದ ವಾಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ:** ಅದಮ್ಯ ರಂಗ ಕಲಾವಿದರಿಂದ ಅಧಿನಾಯಕಿ ನಾಟಕ ಪ್ರದರ್ಶನ, ರಚನೆ, ವಿನ್ಯಾಸ, ನಿರ್ದೇಶನ: ಡಾ. ಬೇಲೂರು ರಘುನಂದನ್, ಸಂಗೀತ ನಿರ್ದೇಶನ: ವೈಷ್ಣವರಾವ್, ಬೆಳಕಿನ ವಿನ್ಯಾಸ : ರವಿಶಂಕರ್, ಸ್ಥಳ: ರಮಾಗೋವಿಂದ ರಂಗಮಂದಿರ, ಸಂಜೆ 6.30ಕ್ಕೆ

■ **ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ:** ವಿದ್ವಾನ್ ಶ್ರೀಪಾದ ಭಟ್ಟ ಅವರಿಂದ ವಿದ್ಯೆ ಮತ್ತು ಕಲೆಗಳು ಕುರಿತು ಪ್ರವಚನ, ಸ್ಥಳ: ಸಭಾ ಭವನ, ಲಕ್ಷ್ಮಿಪುರಂ, ಸಂಜೆ 6.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಶಶಿರೇಖಾ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕುಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಹೆಚ್.ವಿ.ನಾಗರಾಜರಾವ್, 8.30 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ–ಶ್ರೀ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸ್ಥಾಪಕ ಡಾ.ಆರ್.ಬಾಲಸುಬ್ರಹ್ಮಣ್ಯಂ ಅವರೊಡನೆ ಸಂವಾದ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ರಾಷ್ಟ್ರೀಯ ದೃಷ್ಟಿದಾನ ಪಾಕ್ಷಿಕದ ಸಂದರ್ಭದಲ್ಲಿ "ಮಕ್ಕಳಲ್ಲಿ ಕ್ಯಾಟರಾಕ್ಟ್" ಕುರಿತು ಡಾ.ರವಿಶಂಕರ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆಯ ಹಾಡುಗಾರ ಚಾಮರಾಜನಗರದ ಗೌತಮ್‌ನ ಪರಿಚಯ, ಪ್ರಸ್ತುತಿ–ಎಂ.ಎಸ್.ಭಾರತಿ, 11.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಯವರ ಮನದ ಮಾತು, ನಂತರ ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.30 ದೇವರನಾಮ–ಕೆ.ಎಸ್. ಸುರೇಖ, ರಘು ಹೆಗಡೆ, 12.45 ಜನಪದ ಸಂಗೀತ–ಚಿಕ್ಕಮಾದಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ವೀಣಾ ಶ್ರೀನಿವಾಸ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ ಮತ್ತು ಕೆ.ಬಿ. ಮೀನಾ, 3.15 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಮೋಕ್ಷ ಮೋಹರ, ಪ್ರಸ್ತುತಿ–ಉಚ್ಚಿಲ ಸೋಮೇಶ್ವರದ ಕಲಾಗಂಗೋತ್ರಿ ಯಕ್ಷಗಾನ ಕೇಂದ್ರದ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50ಕೃಷಿರಂಗ, ನಾಟಕ ತಬ್ಬಲಿಗಳು, ರಚನೆ–ಮಿರ್ಜಾ ಬಶೀರ್, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, ಪಶುರಂಗ ಪಶು ವೈದ್ಯಕೀಯ ಶಿಕ್ಷಣದ ಮಹತ್ವ ಕುರಿತು ಮಾತನಾಡುತ್ತಾರೆ ಡಾ.ಎನ್. ಶಿವಕುಮಾರ್, 8.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 10.00 ರವಿ ವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿತ್ ವಸಂತ್ ಕಾಬ್ರಾ–ಸರೋಡ್ ವಾದನ.

ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆಗೆ ಬೇಕಿದೆ ಪೂರ್ಣ ಪರಿಷ್ಕರಣೆ

ತಮಿಳುನಾಡು ತಿರುವಳ್ಳೂರು ಸಂಸದ ಡಾ.ಕೆ.ಜಯಕುಮಾರ್ ಅಭಿಮತ

ಮೈಸೂರು,ಆ.26(ಪಿಎಂ)–ಜನಸಂಖ್ಯೆ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಾದಲ್ಲಿ ದಕ್ಷಿಣ ರಾಜ್ಯಗಳ ಕ್ಷೇತ್ರಗಳಲ್ಲಿ ಸಂಖ್ಯೆ ಇಳಿಮುಖವಾಗಲಿದ್ದು, ಉತ್ತರ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆಯಲ್ಲಿ ಹೆಚ್ಚಳವಾಗಲಿದೆ. ಇದರಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದ್ದು, ಹೀಗಾಗಿ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಯ ಮಾನದಂಡಗಳನ್ನು ಸಂಪೂರ್ಣವಾಗಿ ಪರಿಷ್ಕರಿಸಬೇಕಿದೆ ಎಂದು ತಮಿಳುನಾಡು ತಿರುವಳ್ಳೂರು ಸಂಸದ ಡಾ.ಕೆ.ಜಯಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಮೈಸೂರು ವಿವಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ಪೀಠ ಮತ್ತು ಇಂಡಿಯನ್ ಪಾಲಿಟಿ ಫೋರಂನ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ಕ್ಷೇತ್ರ ಪುನರ್ ವಿಂಗಡಣೆ ; ಅಂತರ ರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಶನಿವಾರ 'ಕ್ಷೇತ್ರ ಪುನರ್ ವಿಂಗಡಣಾ ಪ್ರಕ್ರಿಯೆ ಮತ್ತು ಅಸಮತೆ' ಕುರಿತು ಅವರು ಮಾತನಾಡಿದರು.

ಪ್ರತಿ 10 ವರ್ಷಕ್ಕೊಮ್ಮೆ ಜನಗಣತಿ ಆಗಲಿದ್ದು, ಇದರ ಆಧಾರದಲ್ಲಿ ಲೋಕಸಭೆ ಮತ್ತು ವಿಧಾನ ಸಭೆ ಕ್ಷೇತ್ರಗಳ ಪುನರ್ ವಿಂಗಡಣೆ ಆಗಬೇಕೆಂಬ ವ್ಯವಸ್ಥೆ ನಮ್ಮಲ್ಲಿದೆ. ಆದರೆ ಅನೇಕ ಕಾರಣಗಳಿಂದ ಹಲವು ದಶಕಗಳಿಂದ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಆಗಿಲ್ಲ. ಇದೀಗ ಇದು ಜನಸಂಖ್ಯೆ ಆಧಾರದಲ್ಲಿ ಆದಲ್ಲಿ ಉತ್ತರ ಮತ್ತು ದಕ್ಷಿಣ ರಾಜ್ಯಗಳ ನಡುವೆ



ಮಾನಸಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ನಡೆದ 'ಕ್ಷೇತ್ರ ಪುನರ್ ವಿಂಗಡಣೆ; ಅಂತರ ರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ತಮಿಳುನಾಡು ತಿರುವಳ್ಳೂರು ಸಂಸದ ಡಾ.ಕೆ. ಜಯಕುಮಾರ್ ಮಾತನಾಡಿದರು.

ತಾರತಮ್ಯ ಹೆಚ್ಚಳವಾಗಲಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆ ನಿಯಂತ್ರಣದಲ್ಲಿದೆ. ಆದರೆ ಉತ್ತರ ಭಾರತದಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ಉತ್ತರ ಪ್ರದೇಶದಲ್ಲಿ ಮೂರು ದಶಕಗಳಲ್ಲಿ ಶೇ.52ರಷ್ಟು ಜನಸಂಖ್ಯೆ ಹೆಚ್ಚಳಗೊಂಡಿದೆ. ಹಾಗಾಗಿ ಯಾವುದೇ ಕಾರಣಕ್ಕೂ ಈ ಪ್ರಕ್ರಿಯೆ ಜನಸಂಖ್ಯೆ ಆಧಾರದಲ್ಲಿ ನಡೆಯಬಾರದು ಎಂದು ಹೇಳಿದರು.

ವೈಯಕ್ತಿಕ ಅಭಿಪ್ರಾಯ: ತಮಿಳುನಾಡಿನಿಂದ ಕೇಂದ್ರ ಸರ್ಕಾರಕ್ಕೆ ಸಂದಾಯವಾಗುವ ಸಾರ್ವಜನಿಕರ ತೆರಿಗೆ ಪ್ರಮಾಣವೇ ಹೆಚ್ಚಿದ್ದು, ಇದಕ್ಕೆ ಪ್ರತಿಯಾಗಿ ರಾಜ್ಯಕ್ಕೆ ಪಡೆಯುವ ಅನುದಾನ ಅದಕ್ಕಿಂತಲೂ ಕಡಿಮೆಯಿದೆ. ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಒಪ್ಪಲಾಗದು. ಇದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದ್ದು, ಪಕ್ಷಕ್ಕೆ ಸಂಬಂಧಿಸಿದ್ದಲ್ಲ ಎಂದು ಡಾ.ಕೆ.ಜಯಕುಮಾರ್ ಸ್ಪಷ್ಟಪಡಿಸಿದರು.

ಮತ್ತೊಂದು ಗೋಷ್ಠಿಯಲ್ಲಿ 'ಸಂಸತ್‌ನಲ್ಲಿ ಪ್ರಾತಿನಿಧ್ಯ' ಕುರಿತು ಎನ್‌ಐಟಿಟಿಇ ಶಿಕ್ಷಣ ಟ್ರಸ್ಟ್‌ನ ಶೈಕ್ಷಣಿಕ ನಿರ್ದೇಶಕರು, ಲೋಕ್‌ನೀತಿ ನೆಟ್‌ವರ್ಕ್‌ನ ರಾಷ್ಟ್ರೀಯ ಸಂಯೋಜಕರೂ ಆದ ರಾಜಕೀಯ ವಿಶ್ಲೇಷಕ ಡಾ.ಸಂದೀಪ್‌ಶಾಸ್ತ್ರಿ ಮಾತನಾಡಿ, ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆಯಲ್ಲಿ ದಕ್ಷಿಣ ರಾಜ್ಯಗಳ ಕ್ಷೇತ್ರಗಳು ಕಡಿಮೆಯಾಗದಂತೆ ನೋಡಿಕೊಳ್ಳಲು ನಾವು ಪ್ರಯತ್ನಿಸಬೇಕು ಎಂದರು.

ಜನಸಂಖ್ಯೆ ಆಧಾರದಲ್ಲಿ ಪುನರ್ ವಿಂಗಡಣೆಯಾದರೆ, ಕರ್ನಾಟಕ, ಆಂದ್ರಪ್ರದೇಶ, ತೆಲಂಗಾಣ, ತಮಿಳುನಾಡು ರಾಜ್ಯಗಳು ಸೇರಿದಂತೆ ಸುಮಾರು 26 ಕ್ಷೇತ್ರಗಳು ರದ್ದಾಗುವ ಸಾಧ್ಯತೆ ಇದೆ. ಇದೇ ವೇಳೆಗೆ ಉತ್ತರ ಭಾರತ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಳವಾಗಲಿವೆ. ಅದೇ ವಿಷಯ ಕುರಿತಂತೆ ವಿಚಾರ ಮಂಡಿಸಿದ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಗಡೆ, ಕ್ಷೇತ್ರ ವಿಂಗಡಣೆ ಆಯೋಗದ ಪ್ರಕ್ರಿಯೆ ಕ್ರಮಗಳು ಅಂತಿಮಗೊಂಡಲ್ಲಿ ಅದನ್ನು ಪ್ರಶ್ನೆ ಮಾಡಲು ಕಷ್ಟಸಾಧ್ಯವಿದೆ. ಕೇವಲ ನ್ಯಾಯಮೂರ್ತಿಗಳು ಹಾಗೂ ಸಂಸದರು ಅಭಿಪ್ರಾಯಕ್ಕೆ ಸೀಮಿತವಾಗಿ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಆಗಬಾರದು. ದೇಶದ ಜನತೆಯ ವಿಶ್ವಾಸದೊಂದಿಗೆ ಈ ಪ್ರಕ್ರಿಯೆ ನಡೆಯಬೇಕು. ಉತ್ತರದ ರಾಜ್ಯಗಳಿಗೆ ಹೋಲಿಸಿದರೆ ದಕ್ಷಿಣ ರಾಜ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕತೆಯ ಕೊಡುಗೆಯನ್ನು ಕೇಂದ್ರ ಸರ್ಕಾರಕ್ಕೆ ನೀಡುತ್ತಿವೆ ಎಂದರು. ನಿವೃತ್ತ ಮೇಜರ್ ಜನರಲ್ ಆದ ಇಂಡಿಯನ್ ಪಾಲಿಟಿ ಫೋರಂನ ಡಾ.ಎಸ್.ಜಿ. ಒಂಬತ್ಕೆರೆ, ನಿವೃತ್ತ ಪ್ರಾಧ್ಯಾಪಕ ಪ್ರೊ.ಮುಜಫರ್‌ ಅಸ್ಸಾದಿ, ಡಾ.ಅಂಬೇಡ್ಕರ್ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್, ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್, ಡಾ.ಬಿ.ಆರ್.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಆರ್. ಇಂದಿರಾ ಮತ್ತಿತರರು ಹಾಜರಿದ್ದರು.

ದಕ್ಷಿಣ ಭಾರತದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯ ಅಗತ್ಯ

"ದಕ್ಷಿಣ ಭಾರತದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯ ದೇಶದ ಹಿತ ದೃಷ್ಟಿಯಿಂದ ಪ್ರಮುಖ ಪಾತ್ರ ವಹಿಸಲಿದೆ. ಹಾಗಾಗಿ ದಕ್ಷಿಣ ರಾಜ್ಯಗಳ ಲೋಕಸಭಾ ಕ್ಷೇತ್ರಗಳು ಕಡಿಮೆಯಾಗದಂತೆ ನೋಡಿಕೊಳ್ಳುವುದು ಅಗತ್ಯ. ಯಾವುದೇ ಕಾರಣಕ್ಕೂ ದಕ್ಷಿಣ ಮತ್ತು ಉತ್ತರ ರಾಜ್ಯಗಳ ನಡುವೆ ಅಸಮತೆ ಸೃಷ್ಟಿಯಾಗಬಾರದು. ಜನಸಂಖ್ಯೆ ಆಧಾರಿತ ಕ್ಷೇತ್ರ ಪುನರ್ ವಿಂಗಡಣೆಗೆ ಆದ್ಯತೆ ನೀಡಿದರೆ, ಹೊಸ ರಾಜಕೀಯ ಪ್ರಾಬಲ್ಯದ ಪರಿಣಾಮಗಳನ್ನು ದೇಶ ಎದುರಿಸಲಿದೆ.

–ಡಾ.ಸಂದೀಪ್‌ಶಾಸ್ತ್ರಿ, ರಾಜಕೀಯ ವಿಶ್ಲೇಷಕರು.

ಭಾರತದ ಆರ್ಥಿಕ ನೀತಿಗಳು ಸಮಗ್ರವಾಗಿ ಬದಲಾಗಬೇಕು: ದೇವನೂರು ಮಹಾದೇವ



ಮೈಸೂರು,ಆ.26(ಸಿಎನ್)–ಭಾರತದ ಒಕ್ಕೂಟ ವ್ಯವಸ್ಥೆ ಭಾಗವಾದ ರಾಜ್ಯಗಳು ತಮ್ಮ ಆದಾಯದ ಹಣಕಾಸನ್ನು ತಮ್ಮ ರಾಜ್ಯ ವ್ಯಾಪ್ತಿಯ ಹಿಂದುಳಿದ ಪ್ರದೇಶಗಳಿಗೆ ಕರ್ತವ್ಯ ದೃಷ್ಟಿಯಿಂದ ನೀಡುತ್ತಿವೆ. ಅದೇ ರೀತಿ ಒಕ್ಕೂಟದಲ್ಲಿನ ಹಿಂದುಳಿದ ರಾಜ್ಯಗಳಿಗೆ ಒಂದು ಸೀಮಿತ ಅವಧಿಯವರೆಗೆ ಕೇಂದ್ರದಿಂದ ಆರ್ಥಿಕ ಅನುದಾನ ನೀಡುವ ಕೆಲಸ ಆಗಬೇಕಿದೆ ಎಂದು ನಾಡೋಜ ದೇವನೂರು ಮಹದೇವ ಅವರು ಅಭಿಪ್ರಾಯಿಸಿದರು.

ನಗರದ ಮಾನಸಗಂಗೋತ್ರಿಯಲ್ಲಿರುವ ವಿಶ್ವಜ್ಞಾನಿ ಭವನದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ಪೀಠ, ಮಾನಸಗಂಗೋತ್ರಿ ಮತ್ತು ಇಂಡಿಯನ್ ಪಾಲಿಟಿ ಫೋರಂ ವತಿಯಿಂದ ಶನಿವಾರ ಆಯೋಜಿಸಿದ್ದ 'ಕ್ಷೇತ್ರ ಪುನರ್ವಿಂಗಡಣೆ, ಅಂತರರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ವಿಷಯ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅನುದಾನ ಎಲ್ಲಿಯವರೆಗೆ ನೀಡಬೇಕು ಎಂದರೆ ಎಲ್ಲೆಡೆ ಸಬಲೀಕರಣ ಆಗುವವರೆಗೆ ನೀಡಬೇಕು. ಅದಕ್ಕೆ ಸಮರ್ಪಕ ಉತ್ತರ ನಮ್ಮಲ್ಲಿಲ್ಲ. ಭಾರತದ ಆರ್ಥಿಕ ನೀತಿಗಳು 'ಹುಲಿಗೆ ಹುಣ್ಣು ಬಂದ ಕಥೆಯಾಗಿವೆ' ಅಂದರೆ ಹುಲಿ ತನ್ನ ದೇಹದ ಮೇಲೆ ಇರುವಂತಹ ಗಾಯದ ಜೊತೆಗೆ ಮತ್ತೊಂದು ಹುಣ್ಣು ಮಾಡಿಕೊಂಡಂತಿದೆ ನಮ್ಮ ಭಾರತದ ಆರ್ಥಿಕ ನೀತಿಗಳು ಎಂದರು.

ಎಸ್‌ಆರ್ ಹಿರೇಮಠ್ ಅವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ 1968ರಲ್ಲಿ ಅಮೇರಿಕಾದಲ್ಲಿದ್ದಾಗ, ಎಡ್ಗರ್ ಓವೆನ್ ಅವರು ಬರೆದ ಅಭಿವೃದ್ಧಿ ಮರುಪರಿಶೀಲನೆ (DEVELOPMENT RECONSIDER) ಪುಸ್ತಕದ ಬಗ್ಗೆ ಎಡ್ಗರ್ ಓವೆನ್ಸ್ ಹಾಗೂ ಭಾರತೀಯ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡಿದ್ದರು. ಆ ಸಂವಾದದಲ್ಲಿ 'ಟ್ರಿಕಲ್ ಡೌನ್ ಥಿಯರಿ' ಬಗ್ಗೆ ಎಡ್ಗರ್ ಅವರು ಪ್ರಸ್ತಾಪಿಸಿ, ಆಳ್ವಿಕೆಯ ಮೇಲ್ವರ್ಗದ ಜನರಿಗೆ ಸಂಪಾದನೆಯ ಉತ್ತೇಜನವನ್ನು ಕೊಟ್ಟರೆ, ಆಗುವ ಅಭಿವೃದ್ಧಿಯು ಕೆಳಗೆ ತೊಟ್ಟಿಕ್ಕುತ್ತಾ, ತಳಮಟ್ಟದ ಬಡವರಿಗೂ ತಲುಪಿ ಒಟ್ಟಾರೆ ಏಳಿಗೆಯಾಗುತ್ತದೆ ಎಂದು ಬರೆದಿದ್ದೆ. ಆದರೆ ನನ್ನ ಸುದೀರ್ಘ ಅನುಭವದಲ್ಲಿ ಈ ಥಿಯರಿ ಆಚರಣೆಗೆ ಬಂದ ನಿದರ್ಶನಗಳಿಲ್ಲ. ಇದೊಂದು ಸೋತ ಥಿಯರಿಯಾಗಿದೆ ಎಂದು ಹೇಳಿದ್ದರು. ಆದರೆ ಭಾರತ ಇದೇ ಥಿಯರಿಗೆ ಜೋತು ಬಿದ್ದ ಆರ್ಥಿಕತೆ ಹಾಗೂ ಅಸಮರ್ಥ ನಾಯಕತ್ವ ಕಾರಣದಿಂದಾಗಿ, ತಳ ಸಮುದಾಯಕ್ಕೆ ಬಂದಿದ್ದು ಕೇವಲ ಶೇ.3% ಮಾತ್ರವೇ ಆಗಿದೆ. ಈ ರೀತಿ ಕಾರ್ಪೋರೇಟ್ ವ್ಯವಸ್ಥೆಯು ಉಳ್ಳವರಿಂದ ವಿದೇಶಿ ಪಾಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮಸ್ಯೆಯಾಗುತ್ತಿರುವುದು ಒಂದು ರಾಜ್ಯಕ್ಕೆ ಹೆಚ್ಚು ಅನುದಾನ ಕಡಿಮೆ ಅನುದಾನ ಎನ್ನುವುದಲ್ಲ, ಈ ರೀತಿ ಕಾರ್ಪೋರೇಟ್ ಕಂಪನಿ ಪಾಲಾಗುತ್ತಿರುವುದೇ ದೊಡ್ಡ ಆರ್ಥಿಕ ಹೊಡೆತವಾಗಿದೆ. ಹೀಗೆ ಮುಂದುವರಿದಲ್ಲಿ ರಾಜ್ಯಗಳ ಅಭಿವೃದ್ಧಿ ಹೇಗೆ ಆಗಲೂ ಸಾಧ್ಯ, ರಾಜ್ಯಗಳ ಸಬಲೀಕರಣವಾಗದೇ ಅವುಗಳ ನಡುವೆ ಇರುವ ಅಸಮತೋಲನ ನೀಗುವ ಬಗೆ ಹೇಗೆ ಎಂದು ದೇವನೂರ ಮಹದೇವ ಅವರು ಪ್ರಶ್ನಿಸಿದರು.

ಇಂತಹ ಜ್ವಲಂತ ಸಮಸ್ಯೆಯಿಂದ ಭಾರತ ಹೊರಬೇಕಾದರೆ "ಟ್ರಿಕಲ್ ಡೌನ್" ನೀತಿಯಿಂದ ಹೊರಬಂದು, ಒಂದು ಮಧ್ಯಮ ಹಾದಿ ಕಂಡುಕೊಂಡು, ರಾಜ್ಯಗಳು ಹೆಚ್ಚು ಸ್ವಾಯತ್ತವಾಗಿ ವಿಕೇಂದ್ರಿಕರಣದ ಕಡೆ ಚಲಿಸಬೇಕು. ಅಲ್ಲದೇ ಸ್ಥಳೀಯ ಗುಡಿ ಕೈಗಾರಿಕೆ ಅದಕ್ಕೆ ಮಾರುಕಟ್ಟೆ, ಸಣ್ಣಸಣ್ಣ ಕೈಗಾರಿಕೆಗಳು ವಿಫಲವಾದಾಗ ಅಲ್ಲಲ್ಲೇ ಕೈಗಾರಿಕೆಗಳು ಹುಟ್ಟಿಕೊಳ್ಳುತ್ತವೆ. ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ. ಮುಖ್ಯವಾಗಿ ಅರಣ್ಯ ಸಂಪತ್ತು ಲೂಟಿ ನಿಲ್ಲಬೇಕು. ಸ್ವಾಯತ್ತೆ ಸಂಸ್ಥೆಗಳು ಸ್ವಾಯತ್ತೆ ಪಡೆಯಬೇಕು. ಸಾರ್ವಜನಿಕ ಸಂಪತ್ತು ಸಾರ್ವಜನಿಕವಾಗೇ ಉಳಿಯಬೇಕು. ಜೊತೆಗೆ ಸಾಮಾಜಿಕ ನ್ಯಾಯ ನಡೆಯುತ್ತಿರಬೇಕು. ಹೀಗಾದಾಗ ಭಾರತ ತನ್ನ ಎಲ್ಲಾ ರಾಜ್ಯಗಳಿಗೆ ಸಮೀಪ ಆಗಬಹುದು, ಅಸಮತೆ ತೊಡೆದು ಹಾಕಬಹುದು. ಸಮಸ್ಯೆಗಳಿಂದ ಹೊರ ಬರಬಹುದು ಎಂದರು.

ಲೋಕಸಭೆ ಪುನರ್‌ವಿಂಗಡಣೆ ವಿಚಾರವಾಗಿ ಮಾತನಾಡಿ, ಇಂಡಿಯಾ ಒಕ್ಕೂಟಕ್ಕೂ ಮೊದಲು 560ಕ್ಕೂ ಹೆಚ್ಚು ರಾಜ ಮನೆತನಗಳು ಆಳ್ವಿಕೆ ನಡೆಸುತ್ತಿದ್ದವು. ಅವು ಭಾರತದ ಒಕ್ಕೂಟ ಸೇರಲು ಅನೇಕ ಕಸರತ್ತು ನಡೆಸಿವೆ. ಹಲವು ಸವಾಲುಗಳನ್ನು ಎದುರಿಸಿವೆ. ಕೆಲವು ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡಿ ಒಕ್ಕೂಟಕ್ಕೆ ಸೇರಿಸಿಕೊಳ್ಳಲಾಗಿದೆ. ಹೀಗೆ ರಾಜಾಡಳಿತ, ಪಾಳೆಪಟ್ಟು, ಬ್ರಿಟೀಷ್ ಆಳ್ವಿಕೆ ಕೊನೆಗೊಳಿಸಿ ಒಂದು ರಾಜ್ಯವಾಗಿ, ಭಾರತದ ಒಕ್ಕೂಟಕ್ಕೆ ಸೇರಿಕೊಂಡಿದೆ. ಹೀಗೆ ರೂಪಿತಗೊಂಡ ರಾಜ್ಯಗಳಿಗೆ, ವಿವೇಚನೆಯಿಂದ ಆಯಾ ರಾಜ್ಯದ ಭಾಷೆಯನ್ನು ಎಲ್ಲೆ ಮಾಡಿದ್ದಾರೆ. ಹಾಗೇ ಮಾಡಿದ್ದು ಒಕ್ಕೂಟ ರಾಜ್ಯವನ್ನು ಯಾವುದೇ ಒಂದು ಭಾಷೆಯವರು ಆಳ್ವಿಕೆ ನಡೆಸಬಾರದು ಎಂಬ ಆಲೋಚನೆ ಅಡಗಿದೆ. ಆದರೆ ಇಂದು ಆ ಎಚ್ಚರಿಕೆ ಗಂಟೆ ಬಡಿದುಕೊಳ್ಳುತ್ತಿದೆ. ಭಾಷೆಯ ಎಲ್ಲೆ ಮೀರಿ ಒಂದು ಭಾಷೆ ತನ್ನ ಪಾರುಪತ್ಯ ಸ್ಥಾಪಿಸಲು ಅವಣಿಸುತ್ತಿದೆ ಎಂದರು.

ಸಂವಾದದಲ್ಲಿ ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮಕುಮಾರ್, ನವದೆಹಲಿ ಜೆಎನ್‌ಯು ಇತಿಹಾಸ ವಿಭಾಗದ ವಿ. ಪ್ರಾಧ್ಯಾಪಕ ಪ್ರೊ. ಜಾನಕಿ ನಾಯರ್, ಚೆನ್ನೈ ಎಂಐಡಿಎಸ್ ವಿ.ಪ್ರಾಧ್ಯಾಪಕ ಪ್ರೊ.ನಾಗರಾಜು, ಹಂಪಿ ಕನ್ನಡ ವಿವಿ ವಿ.ಪ್ರಾಧ್ಯಾಪಕ ಟಿ.ಆರ್ ಚಂದ್ರಶೇಖರ್, ಮೈಸೂರು ಯುವರಾಜ ಕಾಲೇಜು ವಿ. ಸಹ ಪ್ರಾಧ್ಯಾಪಕ ಡಾ.ಸ್ವರ್ಣಮಾಲಾ ಸಿರಸಿ, ಮೈಸೂರು ಎನ್‌ಇಐ ಮಾಜಿ ನಿರ್ದೇಶಕ ಯು.ಎನ್.ರವಿಕುಮಾರ್, ಡಾ.ಶ್ರೀನಿವಾಸನ್ ಇನ್ನಿತರರು ಉಪಸ್ಥಿತರಿದ್ದರು.

> ಲೋಕಸಭಾ ಸದಸ್ಯರ ಸಂಖ್ಯೆ 543 ರಿಂದ 888ಕ್ಕೆ ಏರಿಕೆ ಮಾಡುತ್ತಿರುವುದರ ಹಿಂದೆ ಬೇರೆ ವಿಷಯವಿದೆ. ಕೇವಲ ಮೂರು ಮತ್ತು 4 ಹಿಂದಿ ಭಾಷೆಗಳ ರಾಜ್ಯಗಳೇ ಕೂಡಿಕೊಂಡು, ಕೇಂದ್ರದಲ್ಲಿ ಬಹುಮತ ಪಡೆಯಲು ಸುಲಭ ಹಾದಿಯಾಯಿತಷ್ಟೆ, ಆಗ ಹಿಂದಿ ಭಾಷೆಯೂ, ಉಳಿದ ಶ್ರೀಮಂತ ಭಾಷೆಗಳ ಮೇಲೆ ಸವಾರಿ ಮಾಡುಬಹುದು. ಉತ್ತರ ಭಾರತವು ಕೇಂದ್ರದಲ್ಲಿ ಬಹುಮತ ಪಡೆದು ದೇಶವನ್ನು ಆಳ್ವಿಕೆ ಮಾಡಬಹುದು. ಈ ಆಳ್ವಿಕೆಗೆ ಉಳಿದ ರಾಜ್ಯಗಳು ಸಾಮಂತ ರಾಜ್ಯಗಳಾಗಿ ಉಳಿಯುತ್ತವೆ. ಉತ್ತರದ ಹಿಂದಿ ಚಕ್ರವರ್ತಿಗೆ ಕಪ್ಪ ಕಟ್ಟುವ ಹಾಗೇ ಆಗುತ್ತದೆ.
> **–ದೇವನೂರು ಮಹಾದೇವ, ಹಿರಿಯ ಸಾಹಿತಿ**



ಮೈಸೂರಿಗೆ ಆಗಮಿಸಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಇತರರು ಸ್ವಾಗತಿಸಿದರು.



ಮೈಸೂರಿನ ಲಕ್ಷ್ಮಿತಾಯಿ ದೇವಾಲಯ ಸೇವಾ ಸಮಿತಿ ವತಿಯಿಂದ ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಅನ್ನದಾನ ಏರ್ಪಡಿಸಲಾಗಿತ್ತು. ಈ ವೇಳೆ ಸಮಿತಿ ಅಧ್ಯಕ್ಷ ಬಿ.ಸಿದ್ದಯ್ಯ, ಪ್ರಧಾನ ಕಾರ್ಯದರ್ಶಿ ಜೆ.ಎಸ್.ಹೋಮದೇವ, ರವಿಕುಮಾರ್, ಎಂ.ಎಸ್.ಮಂಜುನಾಥೇಶ್ವರ, ಚಿಕ್ಕಪಾಪಣ್ಣ ಇನ್ನಿತರರಿದ್ದರು.


'ಟೋಬಿ' ಚಿತ್ರದ ಬಗ್ಗೆ ಮಾತನಾಡಿದ ಯುವತಿ ಮೇಲೆ ಅಬ್ಬರಿಸಿದ ಯುವಕ

ಚಿತ್ರದ ನಾಯಕ ರಾಜ್ ಬಿ.ಶೆಟ್ಟಿ ಕ್ಷಮೆಯಾಚನೆ

ಬೆಂಗಳೂರು,ಆ.26–'ಟೋಬಿ' ಚಿತ್ರ ಚೆನ್ನಾಗಿಲ್ಲ ಎಂದು ಹೇಳಿದ ಯುವತಿಗೆ, ಯುವಕನೊಬ್ಬ ಅವಾಚ್ಯ ಶಬ್ಧಗಳಿಂದ ನಿಂದಿಸಿರುವ ವಿಡಿಯೋ ವೈರಲ್ ಆಗಿದ್ದು, ಈ ಸಂಬಂಧ ಚಿತ್ರನಟ ರಾಜ್ ಬಿ.ಶೆಟ್ಟಿ ಕ್ಷಮೆ ಕೋರಿದ್ದಾರೆ.



ರಾಜ್ ಬಿ.ಶೆಟ್ಟಿ ನಟನೆಯ 'ಟೋಬಿ' ಚಿತ್ರ ಶುಕ್ರವಾರ ರಾಜ್ಯಾದ್ಯಂತ ಬಿಡುಗಡೆಯಾಗಿದ್ದು, ಚಿತ್ರದ ಬಗ್ಗೆ ಹಲವರು ಅಭಿಪ್ರಾಯ ಹಂಚಿಕೊಳ್ಳುತ್ತಿದ್ದಾರೆ. ಚಿತ್ರಮಂದಿರವೊಂದರ ಬಳಿ ಯೂಟ್ಯೂಬ್ ಚಾನೆಲ್‌ಗೆ ಪ್ರತಿಕ್ರಿಯಿಸಿರುವ ಯುವತಿ, 'ಟೋಬಿ' ಚಿತ್ರ ಚೆನ್ನಾಗಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಇದನ್ನು ಕೇಳಿಸಿಕೊಂಡ ಯುವಕರಿಬ್ಬರು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾರೆ. 'ಚಿತ್ರ ಚೆನ್ನಾಗಿರಲಿಲ್ಲ ಅದಕ್ಕೆ ಚೆನ್ನಾಗಿಲ್ಲ ಎಂದೆ' ಎಂದು ಯುವತಿ ತನ್ನ ಹೇಳಿಕೆ ಸಮರ್ಥಿಸಿಕೊಂಡಿದ್ದಾರೆ. ಆದರೂ ಆ ಯುವಕ 'ಕನ್ನಡ ಚಿತ್ರ ಚೆನ್ನಾಗಿಲ್ಲ ಎಂದು ಹೇಳ್ತಿಯಾ?' ಎಂದು ಮತ್ತೆ ತರಾಟೆಗೆ ತೆಗೆದುಕೊಂಡಿದ್ದಾನೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಯುವಕನ ವರ್ತನೆಯನ್ನು ನೆಟ್ಟಿಗರು ಖಂಡಿಸಿದ್ದಲ್ಲದೆ ಈ ಬಗ್ಗೆ ಸೋಶಿಯಲ್ ಮೀಡಿಯಾ ಪೇಜ್‌ಗಳಲ್ಲಿ ಪೋಸ್ಟ್ ಮಾಡಿ ರಾಜ್ ಬಿ ಶೆಟ್ಟಿ ಅವರನ್ನು ಪ್ರಶ್ನಿಸಿದ್ದಾರೆ.



ಈ ಮೂಲಕ ವಿಷಯ ತಿಳಿದ ರಾಜ್ ಬಿ.ಶೆಟ್ಟಿ ದೌರ್ಜನ್ಯಕ್ಕೀಡಾದ ಯುವತಿಯ ಕ್ಷಮೆ ಕೇಳುತ್ತೇನೆ ಎಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 'ಸಿನಿಮಾ, ವಿಮರ್ಶೆಗೆ ಒಳಪಡುವ ಮಾಧ್ಯಮ. ಹಣ ಕೊಡುವ ವೀಕ್ಷಕರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಇದೆ. ಅದನ್ನು ಒಪ್ಪಿಕೊಳ್ಳುವ ಅಥವಾ ಒಪ್ಪಿಕೊಳ್ಳದೇ ಇರುವ ಸ್ವಾತಂತ್ರ್ಯ ಅವರಿಗಿದೆ. ಅಭಿಪ್ರಾಯ ಹೇಳಿದ ಕಾರಣಕ್ಕೆ ಜನರಿಗೆ ಯಾವುದೇ ರೀತಿಯಲ್ಲಿ ನಾವು ಕಿರುಕುಳ ನೀಡಲು ಪ್ರಯತ್ನಿಸ ಬಾರದು. ವಿಡಿಯೋದಲ್ಲಿರುವವರು ನಮ್ಮ ಸಿನಿಮಾಗೆ ಸಂಬಂಧಪಟ್ಟವರಲ್ಲ. ಆದರೂ ನಾನು ಕಿರುಕುಳಕ್ಕೊಳಗಾದ ಯುವತಿಯ ಜತೆ ಕ್ಷಮೆ ಕೇಳುತ್ತೇನೆ. ನಮ್ಮನ್ನು ಕ್ಷಮಿಸಿ' ಎಂದು ಬರೆದುಕೊಂಡಿದ್ದಾರೆ.

ಸರ್ಕಾರದ ಕೇಸ್ ಜನರ ಕೇಸ್‌ಗಳು; ಗಂಭೀರವಾಗಿ ಪರಿಗಣಿಸಿ

ಸರ್ಕಾರಿ ವಕೀಲರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು

ಬೆಂಗಳೂರು, ಆ.26(ಕೆಎಂಶಿ)–ಸರ್ಕಾರಿ ವಕೀಲರು ಮತ್ತು ಅಧಿಕಾರಿಗಳ ವೈಫಲ್ಯದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ವ್ಯಾಜ್ಯ ಸಣ್ಣದಿರಲಿ, ದೊಡ್ಡದಿರಲಿ ಅದನ್ನು ಗಂಭೀರವಾಗಿ ಪರಿಗಣಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಕೀಲರು ಹೋಂ ವರ್ಕ್ ಮಾಡಬೇಕು. ನಮಗೆ ಹಣ ಕೊಡುವುದು ಜನರು. ಜನರ ಹಣದಲ್ಲಿ ನಮಗೆ ಸವಲತ್ತುಗಳು ಸಿಗುತ್ತಿವೆ. ಈ ಬಗ್ಗೆ ನಮಗೆ ಪ್ರಜ್ಞೆ, ಕರ್ತವ್ಯ ಪ್ರಜ್ಞೆ ಹಾಗೂ ಧನ್ಯತೆ ಇರಬೇಕು ಎಂದರು.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಹಾಗೂ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಸಹಯೋಗದಲ್ಲಿ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣಾ ಅಧಿನಿಯಮ–2023ರ ಸಭೆಯಲ್ಲಿ ಮಾತನಾಡಿದ ಅವರು, ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿದ್ದು, ಪರಿಣಾಮಕಾರಿಯಾಗಿ ಜಾರಿಯಾಗಬೇಕು ಎಂದು ಹೇಳಿದರು.

ಸರ್ಕಾರಿ ವಕೀಲರಿಗೆ ಸರ್ಕಾರದ ಕೇಸು ಎಂದರೆ ಅಸಡ್ಡೆ ಇರಬಾರದು. ಸರ್ಕಾರದ ಕೇಸುಗಳು ಎಂದರೆ ಜನರ ಕೇಸುಗಳು. ಜನರಿಗೆ ನ್ಯಾಯ ಸಿಗುವ ಪ್ರಮಾಣ ಇನ್ನೂ ಹೆಚ್ಚಾಗಬೇಕು. ಬಡವರಿಗೆ ಮೇಲಿನ ನ್ಯಾಯಾಲಯಗಳಿಗೆ ಹೋಗುವ ಶಕ್ತಿ ಇರುವುದಿಲ್ಲ. ಬಡವರಿಗೆ ನ್ಯಾಯ ಸಿಗದಿದ್ದರೆ ಸರಕಾರಿ ವಕೀಲರನ್ನು ನೇಮಿಸಿಕೊಂಡಿದ್ದು ಸಾರ್ಥಕ ಆಗುವುದಿಲ್ಲ ಎಂದರು.



ಪ್ಲೀಡಿಂಗ್ಸ್ ಸರಿಯಾಗಿ, ಪರಿಣಾಮಕಾರಿಯಾಗಿ ಬರೆಯುವುದು ಬಹಳ ಮುಖ್ಯ. ಈ ಹಂತದಲ್ಲೇ ಅಸಡ್ಡೆ, ಉಡಾಫೆತನ ಪ್ರದರ್ಶಿಸಿದರೆ ನ್ಯಾಯ ಪ್ರಕ್ರಿಯೆಯ ಮುಂದಿನ ಎಲ್ಲಾ ಹಂತಗಳಲ್ಲಿ ವೈಫಲ್ಯ ಆಗುತ್ತದೆ. ಆದ್ದರಿಂದ ಬಹಳ ಜವಾಬ್ದಾರಿಯುತವಾಗಿ ಸರ್ಕಾರಿ ವಕೀಲರು ವರ್ತಿಸಬೇಕು ಎಂದು ಸೂಚಿಸಿದರು.

ಕೆಲವು ನ್ಯಾಯಾಧೀಶರು ಮುಖ ನೋಡಿ ಮಣೆ ಹಾಕುತ್ತಾರೆ ಎನ್ನುವ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿದೆ. ಇದನ್ನು ಎಲ್ಲರೂ ಒಟ್ಟಾಗಿ ಅಳಿಸಬೇಕು. ಪ್ರಕರಣಗಳಲ್ಲಿ ಅನಗತ್ಯವಾಗಿ ದಿನಾಂಕ ಪಡೆಯಬಾರದು. ಕೇಸು ನಡೆಸಬೇಕು. ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ನೀಡುವುದನ್ನು ಪರಿಣಾಮಕಾರಿಯಾಗಿ ವಿರೋಧಿಸಬೇಕು. ಅಲ್ಲೇ ನಿಮ್ಮಗಳ ಅರ್ಹತೆ ಗೊತ್ತಾಗುತ್ತದೆ ಎಂದು ಸೂಚ್ಯವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನ್ಯಾಯಾಂಗ ನಿಂದನೆ ಆಗದಂತೆ ವೃತ್ತಿಪರತೆ ಪ್ರದರ್ಶಿಸುವ ಹೊಣೆಗಾರಿಕೆ ನಿಮ್ಮ ಮೇಲಿದೆ. ಸರ್ಕಾರವೇ ನಿಮ್ಮ ಕಕ್ಷಿದಾರ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಕರ್ತವ್ಯ ಪ್ರಜ್ಞೆ ಮೆರೆಯಬೇಕು. ಸರ್ಕಾರ ಮತ್ತು ಜನರ ಹಿತ ಕಾಪಾಡುವ ಮತ್ತು ಸರ್ಕಾರದ ಆಸ್ತಿ ಉಳಿಸುವ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಎಂದು ಸರ್ಕಾರಿ ವಕೀಲರಿಗೆ ಸೂಚಿಸಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಇವತ್ತು ಬರಬೇಕಾದರೆ ಬಸ್ ಮಿಸ್ ಆಯ್ತು ಕಣೇ. ಕ್ಯಾಚ್ ಮಾಡೋಣಾಂತ ಹಿಂದೇನೇ ಓಡಿ ಬಂದ್ರೆ ನಮ್ಮನೆ ಸ್ಟಾಪ್ ಬಂದು ಬಿಡ್ತು. ಸುಮಾರು 10 ರೂ.ಗಳು ಉಳಿತಾಯವಾಯ್ತು.

ಗುಂಡನ ಹೆಂಡತಿ : ನಿಮಗೆ ಒಂಚೂರೂನೂ ಬುದ್ಧಿ ಇಲ್ಲ ಕಣ್ರೀ. ಅಲ್ಲಾ ಓಡೋದು ಓಡಿದ್ರಿ, ಒಂದು ಟ್ಯಾಕ್ಸಿ ಹಿಂದೆ ಓಡಿ ಬರಬಾರದಿತ್ತೇ. ಹತ್ರ ಹತ್ರ 50 ರೂ. ಉಳಿಸಬಹುದಿತ್ತು.

ಮೈಸೂರು ಮಿತ್ರ

ಭಾನುವಾರ, 27 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ದುಃಖ ಬಂದೊಡನೆಯೇ ಜೀವನವನ್ನು ತಿರಸ್ಕರಿಸಬಾರದು. ಜೀವನ ಅಮೂಲ್ಯವಾದುದು –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇತ್ತಿತ್ತ ಬಾ ಅಂದ್ರೆ ಇದ್ದ ಮನೆ ಕಿತ್ಕೊಂಡ್ರಂತೆ

ನಿಮ್ಮ ಪತ್ರಗಳು

ಮೇಯರ್‌ಗೊಂದು ಬಹಿರಂಗ ಪತ್ರ

ಮಾನ್ಯರೆ,

ಮೈಸೂರು ನಗರದ ಮೇಯರ್ ಶಿವಕುಮಾರ್ ಅವರು, ಕಳೆದ ನಾಲ್ಕು ತಿಂಗಳ ಹಿಂದೆ ನಡೆದ ಕೌನ್ಸಿಲ್ ಸಭೆಯ ಬಳಿಕ ಇನ್ನು ಸ್ವಲ್ಪ ದಿನಗಳ ನಂತರ ಅರಸು ರಸ್ತೆ ಸೇರಿದಂತೆ ಮೈಸೂರಿನ ನಾಲ್ಕು ಪ್ರಮುಖ ರಸ್ತೆಗಳಲ್ಲಿ 'ಪೇ ಅಂಡ್ ಪಾರ್ಕಿಂಗ್' ವ್ಯವಸ್ಥೆಯನ್ನು ಯಾರು ಎಷ್ಟೇ ವಿರೋಧ ಮಾಡಿದರೂ ಯಾವುದೇ ರೀತಿಯ ಒತ್ತಡಕ್ಕೂ ಮಣಿಯದೇ ಟೆಂಡರ್ ಕರೆದು ಜಾರಿಗೆ ತಂದೇ ತರುತ್ತೇವೆ ಎಂದು ಮಾಧ್ಯಮಗಳ ಮೂಲಕ ಹೇಳಿದ್ದರು.

ಈ ರೀತಿಯ ಹೇಳಿಕೆ ನೀಡಿ ನಾಲ್ಕು ತಿಂಗಳಾದರೂ ಇತ್ತೀಚೆಗೆ ನಡೆದ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪವೇ ಇಲ್ಲ. ಈ ರೀತಿ ಕಳೆದ ಹತ್ತು ವರ್ಷಗಳಿಂದಲೂ ಕೆಲವು ಮೇಯರ್‌ಗಳು ಹೇಳಿಕೊಂಡು ಬಂದರೇ ವಿನಃ ಯಾರೂ ಸಹ ಇದನ್ನು ಜಾರಿಗೆ ತರಲು ತಮ್ಮ ಬದ್ಧತೆಯನ್ನು ತೋರಲಿಲ್ಲ. ಕಾಣದ "ಲಾಬಿ"ಗಳಿಗೆ ಮಣಿಯುತ್ತಾರೆ. ಜೊತೆಗೆ ಇದನ್ನು ಸಾರ್ವಜನಿಕರು ಸಹ ಮರೆಯುತ್ತಾರೆ.

ನಗರದ ಅರಸು ರಸ್ತೆಯಲ್ಲಿ ಅಂಗಡಿಗಳ ಕೆಲವು ಮಾಲೀಕರಂತೂ ತಮ್ಮ ಅಂಗಡಿಗಳ ಮುಂದೆ ಬೆಳಗ್ಗೆ ಯಿಂದ ರಾತ್ರಿ ತನಕವೂ ತಮ್ಮ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಸಾರ್ವಜನಿಕರು ತಮ್ಮ ವೈಯಕ್ತಿಕ ಕೆಲಸಗಳಿಗೆ ಹೋದರೆ ವಾಹನಗಳನ್ನು ಪಾರ್ಕಿಂಗ್ ಮಾಡುವುದು ಎಲ್ಲಿ? ಮಾನ್ಯ ಮೇಯರ್‌ರವರೆ, ನಿಮ್ಮ ಮಾತಿಗೆ ಬದ್ಧರಾಗಿರಿ, ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದು, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಲಾಂಗ್ ತೋರಿಸಿದ ವಿದ್ಯಾರ್ಥಿ ನಡೆ ಖಂಡನೀಯ!

ಮಾನ್ಯರೆ,

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕಾಲೇಜೊಂದರಲ್ಲಿ ಬುದ್ಧಿ ಹೇಳಿದ ಉಪನ್ಯಾಸಕರಿಗೆ ಲಾಂಗ್ ತೋರಿಸಿ ಬೆದರಿಸಿದ ಕಾಲೇಜು ವಿದ್ಯಾರ್ಥಿ ಪ್ರಕರಣ ವಿಷಾದಕರ ಸಂಗತಿಯಾಗಿದೆ.

ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಸಂಬಂಧವು ಒಂದು ಅನನ್ಯ ಬಂಧವಾಗಿದೆ. ಇದು ಗೌರವ, ನಂಬಿಕೆ ಮತ್ತು ಪರಸ್ಪರ ಕಲಿಕೆಯ ಮಿಶ್ರಣವಾಗಿದೆ. ವಿದ್ಯಾರ್ಥಿಯ ಬೆಳವಣಿಗೆಗೆ ಶಿಕ್ಷಕ–ವಿದ್ಯಾರ್ಥಿ ಸಂಬಂಧವು ನಿರ್ಣಾಯಕವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಅವರ ಮನಸ್ಸು ಮತ್ತು ಭವಿಷ್ಯವನ್ನು ರೂಪಿಸುತ್ತಾರೆ. ಇಂತಹ ಪವಿತ್ರ ವೃತ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಅವರಿಂದ ವಿದ್ಯೆ ಕಲಿತ ವಿದ್ಯಾರ್ಥಿಯೇ ಲಾಂಗ್ ತೋರಿಸಿ ಹೆದರಿಸುತ್ತಾನೆ ಅಂದರೆ ನಮ್ಮ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ವಿಚಾರವಾಗಿದೆ.

ಈಗಿನ ಕಾಲದ ವಿದ್ಯಾರ್ಥಿಗಳೆಲ್ಲರೂ ಮುಗ್ಧರು. ಅವರಿಗೆ ಕಲಿಸುವ ಶಿಕ್ಷಕ, ಉಪನ್ಯಾಸಕರಷ್ಟೇ ಎಲ್ಲದಕ್ಕೂ ಕಾರಣ ಎಂಬ ಮನೋಭಾವ ಸಾಮಾನ್ಯವಾಗಿದೆ. ಆದರೆ ಇದು ತಪ್ಪು ಭಾವನೆ. ಇದನ್ನು ಬಿಡಬೇಕಿದೆ. ಆದರೆ ಇತ್ತೀಚಿನ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆಗುತ್ತಿರುವ ಈ ಬಗೆಯ ಬದಲಾವಣೆಗೆ ಕಾರಣಗಳು? ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತಿರುವ ಹತ್ತಾರು ಸಂಗತಿಗಳು... ಇವುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ನಾವುಗಳು ಮಾಡಬೇಕಿದೆ. ಇಂತಹ ಅತಿರೇಕದ ವರ್ತನೆ ತೋರುವಲ್ಲಿನ ನಿರ್ಭಯತೆಗೆ ಕಾರಣವಾದ ಇತರೆ ಅಂಶಗಳ ವಿಮರ್ಶೆ ನಡೆಸುವುದು ಕೂಡ ಅವಶ್ಯಕವಾಗಿದೆ.

ಅಲ್ಲದೇ ವಿದ್ಯಾರ್ಥಿಗಳು ಈ ರೀತಿಯ ಗಂಭೀರ ಅಪರಾಧಗಳನ್ನು ಮಾಡಿ ತದನಂತರ ತಪ್ಪೊಪ್ಪಿಕೊಳ್ಳುವುದು. ವಿದ್ಯಾರ್ಥಿಗಳು ತಪ್ಪು ಮಾಡಿದರೂ ಶಿಕ್ಷೆ ನೀಡದೇ ಬರೀ ಬುದ್ಧಿ ಹೇಳಿ ಕಳಿಸುವಂಥ ಕ್ರಮಗಳು ಇದಕ್ಕೆ ಪರಿಹಾರವಾಗಬಲ್ಲುದೇ ಎಂಬುದರ ಮೇಲೆ ಬೆಳಕು ಚೆಲ್ಲುವಂಥ ವಿಷಯಗಳ ಮೇಲೂ ಚಿಂತನಮಂಥನ ನಡೆಸುವುದು ಅವಶ್ಯಕವಾಗಿದೆ. ಒಟ್ಟಾರೆಯಾಗಿ ಪವಿತ್ರ ವೃತ್ತಿಯಲ್ಲಿ ನಿರತರಾಗಿರುವ ಪೂಜ್ಯ ಶಿಕ್ಷಕರಿಗೆ ವಿದ್ಯಾರ್ಥಿಯೊಬ್ಬ ಲಾಂಗ್‌ನಿಂದ ಎಚ್ಚರಿಕೆ ನೀಡಿದ ವರ್ತನೆ ನಿಜಕ್ಕೂ ಖಂಡನೀಯ. ಇನ್ಮುಂದೆ ಈ ರೀತಿಯಂತಹ ಪ್ರಕರಣಗಳು ಮರುಕಳಿಸದಿರಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿ

ಮಾನ್ಯರೆ,

ಅಕ್ಕಪಕ್ಕದ ಚಾಮರಾಜನಗರ ಜಿಲ್ಲೆ, ಮಂಡ್ಯದ ಕೆ. ಆರ್.ಪೇಟೆ, ಕೊಡಗಿನ ಕುಶಾಲನಗರದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿವೆ. ಆದರೆ, ಮೈಸೂರಿನಲ್ಲಿ ಸಾಕಷ್ಟು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿದ್ದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಇಲ್ಲ. ಅಂದರೆ, ಇಲ್ಲಿ ಯಾರ ಪ್ರಭಾವ ಕೆಲಸ ಮಾಡುತ್ತಿದೆ? ತಾತ್ಕಾಲಿಕ ನಾನಾ ಗ್ಯಾರಂಟಿ, ಭಾಗ್ಯಗಳನ್ನು ಕೈಬಿಟ್ಟು, ಶಾಶ್ವತ ಹೆಸರು ತರುವ ಕೆಲಸ ಮಾಡಬೇಕಾಗಿದೆ. ಜಿಲ್ಲೆಯವರೇ ಆದ ಮುಖ್ಯಮಂತ್ರಿಗಳಿಗೆ ಇದು ಕಷ್ಟವೇ ಅಲ್ಲ. ಆದ್ದರಿಂದ ಶೀಘ್ರ ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇವೆ. ಲಕ್ಷಾಂತರ ಜನರಿಗೆ ಆಸರೆಯಾಗಿರುವ ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಹೊಸ ಮಹಾರಾಣಿ ಕಾಲೇಜ್ ಇನ್ನೂ ಹಲವು ಯೋಜನೆಗಳಂತೆ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ.

– ಸಂತೋಷ, ಮೈಸೂರು

ಮೂಲಸೌಕರ್ಯಗಳನ್ನು ಕಲ್ಪಿಸಿ

ಮಾನ್ಯರೆ,

ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರನ್ನು ಹೊಂದಿರುವ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹೊಸಮಾಲಂಗಿ ಗ್ರಾಮದಲ್ಲಿ ಸರಿಯಾದ ಮೂಲಸೌಕರ್ಯಗಳಿಲ್ಲದೆ ಪರದಾಡುವಂತಾಗಿದೆ. ಮೊನ್ನೆಯಷ್ಟೇ ನಡೆದ ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಹೊಸಮಾಲಂಗಿ ಗ್ರಾಮದವರು ಅಧ್ಯಕ್ಷರಾಗಿದ್ದಾರೆ. ಅವರಿಗೆ ಅಭಿನಂದನೆಗಳು. ಸುಮಾರು 2000ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಈ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವಿಲ್ಲ. ಕೇವಲ 500ರಿಂದ 1000 ಜನಸಂಖ್ಯೆ ಹೊಂದಿರುವ ಪಕ್ಕದ ಕನ್ನಳ್ಳಿ ಗ್ರಾಮದಲ್ಲಿ ಎರಡು ಶುದ್ಧ ನೀರು ಕುಡಿಯುವ ಘಟಕಗಳಿದ್ದು, ಜನರು ನೀರು ತರಲು ಸೈಕಲ್ ಅಥವಾ ಬೈಕುಗಳಲ್ಲಿ ಪಕ್ಕದ ಗ್ರಾಮಕ್ಕೆ ಹೋಗುತ್ತಿದ್ದಾರೆ. ಅಲ್ಲದೆ ಗ್ರಾಮಕ್ಕೆ ಬೆಳಗ್ಗೆ 8 ಗಂಟೆಗೆ ಒಂದು ಬಸ್, ಸಂಜೆ 6 ಗಂಟೆಗೆ ಒಂದು ಬಸ್‌ನಂತೆ ಕೇವಲ ಎರಡು ಬಸ್‌ಗಳು ಮಾತ್ರ ಬರುತ್ತಿವೆ. ಸರಿಯಾದ ಸಮಯಕ್ಕೆ ಬಸ್ ಸಿಗದೆ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು, ಗ್ರಾಮದ ಜನರು ಪರದಾಡುವಂತಾಗಿದೆ. ಜನಸಾಮಾನ್ಯರು ತುರ್ತು ಸಂದರ್ಭಗಳಲ್ಲಿ 8 ಗಂಟೆಯ ನಂತರ ಪಟ್ಟಣಕ್ಕೆ ತೆರಳಲು ಆಟೋ ಅಥವಾ 5 ಕಿ.ಮೀ ನಡೆದುಕೊಂಡು ಟಗರುಪುರದ ಮುಖ್ಯ ರಸ್ತೆಯಲ್ಲಿ ನಿಂತು ಬಸ್ ಹಿಡಿದು ಹೋಗುತ್ತಾರೆ. ಆದ್ದರಿಂದ ದಯಮಾಡಿ ಮುಂದಿನ ದಿನಗಳಲ್ಲಿ ನಮ್ಮೂರಿನ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಜಾತಿಭೇದ, ಪಕ್ಷ ಭೇದಗಳನ್ನು ಮರೆತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವಂತೆ ಮನವಿ.

–ಅಂಕರಾಜು ಎನ್ ಹೊಸಮಾಲಂಗಿ, ಕೊಳ್ಳೇಗಾಲ ತಾ



ಕಾರ್ಕಳ ಆನಂದ ಭಟ್
ಫ್ಲಾಟ್ ನಂ. 204, 3ನೇ ಮಹಡಿ, ಏಕದಂತ
ಅಪಾರ್ಟ್‌ಮೆಂಟ್, ಪೆರ್ವಾಜೆ ರಸ್ತೆ, ಕಾರ್ಕಳ–574 104
ಮೊ. 7676554198

ದಿಕ್ಕುದೆಸೆ

ತ್ಯಾಜ್ಯದಿಂದ ಅಮೂಲ್ಯ ಖನಿಜ...!

ದುರಸ್ತಿಯಾಗದ ನಿರುಪಯುಕ್ತ ಟೆಲಿವಿಜನ್, ಮೊಬೈಲ್‌ಗಳು, ಸ್ಮಾರ್ಟ್‌ಫೋನ್‌ಗಳು, ಫ್ರಿಡ್ಜ್, ವಾಷಿಂಗ್ ಮೆಷಿನ್‌ಗಳು, ಓವನ್, ಪ್ರಿಂಟರ್, ಕೀ ಬೋರ್ಡ್‌ಗಳು, ಏರ್ ಕಂಡಿಷನರ್, ಜೆರಾಕ್ಸ್‌ಗಳು ಸೇರಿದಂತೆ 23 ನಮೂನೆಯ ಎಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ಇ–ತ್ಯಾಜ್ಯವೆಂದು ಪರಿಗಣಿಸಲಾಗಿದೆ. ಇತ್ತೀಚಿನವರೆಗೆ ಚಿನ್ನ, ಬೆಳ್ಳಿ, ಅಲ್ಯೂಮಿನಿಯಂ, ತಾಮ್ರ ಮೊದಲಾದವುಗಳನ್ನು ಬೆಲೆ ಬಾಳುವ ಲೋಹಗಳೆಂದು ತಿಳಿಯಲಾಗಿತ್ತು. ಪ್ರಸ್ತುತ ಇ–ತ್ಯಾಜ್ಯಗಳಲ್ಲಿನ ಎಲ್ಲವೂ ಮರುಬಳಕೆಗೆ ಯೋಗ್ಯವೆಂದು ಸಾಬೀತಾಗಿದೆ. ಇ–ತ್ಯಾಜ್ಯ ಸಂಸ್ಕರಿಸುವುದರಿಂದ ಲಿಥಿಯಂ, ಕೊಬಾಲ್ಟ್, ತಾಮ್ರ, ಅಲ್ಯೂಮಿನಿಯಂ, ಚಿನ್ನ, ಬೆಳ್ಳಿ, ಪೈಲೆಡಿಯಂನಂತಹ ಬೆಲೆ ಬಾಳುವ ಲೋಹ ಧಾತುಗಳು ಲಭಿಸುವುದರೊಂದಿಗೆ ಇವುಗಳ ಮರುಬಳಕೆಯಿಂದ ಪರಿಸರಕ್ಕೆ ಆಗುವ ಹಾನಿಯನ್ನು ತಡೆಗಟ್ಟುವುದು, ಆಧುನಿಕಯುಗದಲ್ಲಿ ಜಲಜನಕದ ವಾಹನಗಳು, ವಿದ್ಯುನ್ಮಾನ ಸಾಧನಗಳಲ್ಲಿನ ಸೆಮಿ ಕಂಡಕ್ಟರ್‌ಗಳು, ಲಿಥಿಯಂ ಅಯಾನ್ ಬ್ಯಾಟರಿಗಳು, ಸೌರಫಲಕಗಳು, ವಿಂಡ್ ಟರ್ಬೈನ್‌ನಂತಹ ಎಲ್ಲಾ ಸಾಧನಗಳು ಖನಿಜಗಳನ್ನು ಅವಲಂಬಿಸಿವೆ. ಪ್ರಸ್ತುತ ವಿದ್ಯುಚ್ಛಕ್ತಿಯ ಖನಿಜಗಳು ಎರಡು ಪ್ರಕಾರದಲ್ಲಿವೆ. ಮೊದಲ ಮಾದರಿಯಲ್ಲಿ ಬ್ಯಾಟರಿ ಖನಿಜಗಳು; ಇವುಗಳಲ್ಲಿ ಲಿಥಿಯಂ, ಕೊಬಾಲ್ಟ್, ನಿಕ್ಕಲ್ ಮತ್ತು ಗ್ರಾಫೈಟ್‌ಗಳಿದ್ದರೆ, ಎರಡನೇ ಪ್ರಕಾರದಲ್ಲಿ ಹದಿನೇಳು ದುರ್ಲಭ ಭೂಧಾತುಗಳಿದ್ದು, ಇವುಗಳಲ್ಲಿ ನಿಯೊಡಿಮಿಯಂ, ಪ್ರಚೊಡಿಯಂ, ಡಿಸ್ಪ್ರೋಸಿಯಂ, ಲೈಥಿನಂ, ಟೆರಿಬಿಯಂ, ಯೆಟ್ರಿಯಂ, ಸ್ಕಂಡಿಯಂ, ಸೊರಿಯಂ, ಯೂರೋಪಿಯಂ, ಗೈಡೊಲಿನಿಯಂ, ಹೊಲ್ಮಿಯಂ, ಥೈಲಿಯಂ ಮತ್ತು ಯೆಟೆರಬಿಯಂ ಮೊದಲಾದವು ಸೇರಿವೆ.



ಅಮೇರಿಕಾದ ಪರ್ಯಾವರಣ ಸುರಕ್ಷಾ ಏಜೆನ್ಸಿಯ ಪ್ರಕಾರ ಪರಂಪರಾಗತ ಚಿನ್ನದ ಅದಿರಿನಿಂದ ಪ್ರತಿ ಟನ್‌ಗೆ ಕೇವಲ ಎರಡರಿಂದ ಐದು ಗ್ರಾಂವರೆಗೆ ಚಿನ್ನ ದೊರೆತರೆ, ಒಂದು ಮೆಟ್ರಿಕ್ ಟನ್ ನಿರುಪಯುಕ್ತ ಮೊಬೈಲ್ ಫೋನ್‌ಗಳಿಂದ ಮುನ್ನೂರು ಗ್ರಾಂವರೆಗೆ ಚಿನ್ನ ಪಡೆಯಬಹುದು.

ಸ್ವದೇಶಿ ತಂತ್ರಜ್ಞಾನ ಬಳಕೆ

ಪ್ರಸಕ್ತ ವಿಶ್ವಾದ್ಯಂತ ದೇಶಗಳು ಕಾರ್ಬನ್ ಹೊರಸೂಸುವಿಕೆ ಪ್ರಮಾಣವನ್ನು ಶೂನ್ಯಕ್ಕೆ ತರುವ ಒತ್ತಡದಲ್ಲಿವೆ. ಭಾರತವು 2070ರ ವೇಳೆಗೆ ಇದನ್ನು ಸಾಧಿಸುವ ಲಕ್ಷ್ಯ ಹೊಂದಿದೆ. ಇದನ್ನು ಸಾಧಿಸಲು ಭಾರತವು ಭಾರಿ ಪರಿಶ್ರಮ ಪಡಬೇಕಾಗಿದೆ. ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಜೂನ್ ಎರಡರಂದು ಒಂಬತ್ತು ಪುನರ್‌ಬಳಕೆ ಉದ್ಯಮ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಸ್ವದೇಶಿ ತಂತ್ರಜ್ಞಾನವನ್ನು ನೀಡಿದೆ. ಈ ತಂತ್ರಜ್ಞಾನದಿಂದ ಮಿಶ್ರ ಪ್ರಕಾರದ ಲಿಥಿಯಂ ಅಯಾನ್ ಬ್ಯಾಟರಿಗಳನ್ನು ಸಂಸ್ಕರಿಸಿ ಶೇ. 95ಕ್ಕಿಂತ ಹೆಚ್ಚು ಲಿಥಿಯಂ, ಕೊಬಾಲ್ಟ್, ಮ್ಯಾಂಗನೀಸ್ ಮತ್ತು ನಿಕ್ಕಲ್‌ನಂತಹ ಧಾತುಗಳನ್ನು ಶೇ. 98 ರಷ್ಟು ಶುದ್ಧತೆಯೊಂದಿಗೆ ಮರುಬಳಕೆ ಮಾಡಬಹುದು. ಕಡಿಮೆ ಖರ್ಚಿನ ಈ ತಂತ್ರಜ್ಞಾನವನ್ನು ಇ–ತ್ಯಾಜ್ಯ ನಿರ್ವಹಣೆಯಲ್ಲಿ ಉತ್ಕೃಷ್ಟ ಸಂಸ್ಥೆಯಾಗಿರುವ ಹೈದರಾಬಾದ್‌ನ ಸಿ–ಮೆಟ್ ವಿಕಸಿತಗೊಳಿಸಿದೆ.

ಇ–ತ್ಯಾಜ್ಯ ಭಾರತಕ್ಕೆ 5ನೇ ಸ್ಥಾನ

ಇ–ತ್ಯಾಜ್ಯ ಉತ್ಪಾದನೆಯಲ್ಲಿ ಭಾರತವು ಅಮೇರಿಕ, ಚೀನಾ, ಜಪಾನ್ ಮತ್ತು ಜರ್ಮನಿಯ ನಂತರದ ಐದನೇ ಸ್ಥಾನದಲ್ಲಿದೆ. ಜಾಗತಿಕ ಇ–ತ್ಯಾಜ್ಯ ಮಾನಿಟರ್‌ನ 2017ರ ವರದಿಯಂತೆ ಭಾರತದಲ್ಲಿ ವಾರ್ಷಿಕ ಸುಮಾರು ಹದಿನೆಂಟೂವರೆಯಿಂದ ಇಪ್ಪತ್ತು ಲಕ್ಷ ಟನ್ ಇ–ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಆದರೆ ಸಂಸ್ಕರಣೆ ಮತ್ತು ಮರುಬಳಕೆ ಕೇವಲ 47810 ಟನ್‌ನಷ್ಟು ಮಾತ್ರ ಆಗುತ್ತಿದೆ. ಭಾರತದಲ್ಲಿ ಅತೀ ಹೆಚ್ಚು ಇ–ತ್ಯಾಜ್ಯ ಮಹಾರಾಷ್ಟ್ರದಲ್ಲಿ ಶೇ. 19.8 ಉತ್ಪತ್ತಿಯಾಗುತ್ತದೆ. ಆ ನಂತರದ ಸ್ಥಾನಗಳಲ್ಲಿ ತಮಿಳುನಾಡು ಶೇ. 13, ಉತ್ತರ ಪ್ರದೇಶ ಶೇ. 10.1, ಪಶ್ಚಿಮ ಬಂಗಾಳದಲ್ಲಿ ಶೇ.9.8, ದಿಲ್ಲಿ ಶೇ. 9.5, ಕರ್ನಾಟಕ ಶೇ. 8.9, ಗುಜರಾತ್‌ನಲ್ಲಿ ಶೇ. 8.8 ಹಾಗೂ ಮಧ್ಯಪ್ರದೇಶದಲ್ಲಿ ಶೇ. 7.6 ಇ–ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ನಗರಗಳಲ್ಲಿ ಅನುಕ್ರಮವಾಗಿ ಮುಂಬೈ ಒಂದನೇ, ದಿಲ್ಲಿ ಎರಡನೇ ಹಾಗೂ ಬೆಂಗಳೂರು ಮೂರನೇ ಸ್ಥಾನದಲ್ಲಿದೆ. 2018ರ ಆರ್ಥಿಕ ಸರ್ವೇಕ್ಷಣೆಯಂತೆ ನಗರ ಗಣಿಗಾರಿಕೆ ದ್ವಾರಾ ಇ–ತ್ಯಾಜ್ಯದಿಂದ 6900 ಕೋಟಿ ರೂ. ಮೌಲ್ಯದ ಚಿನ್ನವನ್ನು ಪಡೆಯುವ ಅವಕಾಶವಿದೆ.

ಅಮೇರಿಕಾದ ಪರ್ಯಾವರಣ ಸುರಕ್ಷಾ ಏಜೆನ್ಸಿಯ ಪ್ರಕಾರ ಪರಂಪರಾಗತ ಚಿನ್ನದ ಅದಿರಿನಿಂದ ಪ್ರತಿ ಟನ್‌ಗೆ ಕೇವಲ ಎರಡರಿಂದ ಐದು ಗ್ರಾಂವರೆಗೆ ಚಿನ್ನ ದೊರೆತರೆ, ಒಂದು ಮೆಟ್ರಿಕ್ ಟನ್ ನಿರುಪಯುಕ್ತ ಮೊಬೈಲ್ ಫೋನ್‌ಗಳಿಂದ ಮುನ್ನೂರು ಗ್ರಾಂವರೆಗೆ ಚಿನ್ನ ಪಡೆಯಬಹುದು.

ಕಚ್ಚಾ ವಸ್ತುಗಳ ಲಭ್ಯತೆ–ಪರಿಹಾರಕ್ಕೆ ಲಾಭ

ನಗರ ಗಣಿಗಾರಿಕೆಯಿಂದ ನಿರುಪಯುಕ್ತ ಸಾಧನ ಸಾಮಗ್ರಿಗಳ ಮರು ಬಳಕೆಯಿಂದ ಕಚ್ಚಾ ವಸ್ತುಗಳಿಗಾಗಿ ಗಣಿಗಾರಿಕೆ ಕಡಿಮೆಯಾಗಿ ಪರಂಪರಾಗತ ಗಣಿಗಳ ಮೇಲಿನ ಅವಲಂಬನೆ ಹಾಗೂ ಪರಿಸರಕ್ಕೆ ಹಾನಿಯೂ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ಇದರಿಂದ ಭೂಗರ್ಭದೊಳಗಿನ ಸಂಪತ್ತು ಮುಂದಿನ ಪೀಳಿಗೆಗೆ ಉಳಿಸಿದಂತಾಗುತ್ತದೆ. ನಗರ ಗಣಿಗಾರಿಕೆ (Urban Mining) ಎಂದರೆ ವಿದ್ಯುತ್ ಮತ್ತು ವಿದ್ಯುನ್ಮಾನ ತ್ಯಾಜ್ಯಗಳಿಂದ ಖನಿಜ ಮತ್ತು ಧಾತುಗಳನ್ನು ಪ್ರತ್ಯೇಕಿಸಿ ಪಡೆಯುವುದು.

ಜಲ–ವಾಯು ಪರಿವರ್ತನೆ ವಿಚಾರದಲ್ಲಿ 2015ರ ಪ್ಯಾರಿಸ್ ಒಪ್ಪಂದದಲ್ಲಿ ಉಲ್ಲೇಖಿಸಿದಂತೆ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಭೂಗರ್ಭದಲ್ಲಿರುವ ಖನಿಜಗಳ ಬೇಡಿಕೆಯಲ್ಲಿ ನಾಲ್ಕು ಪಟ್ಟು ಏರಿಕೆಯಾಗಲಿದೆ. ವಿದ್ಯುತ್ ಸಂಪರ್ಕ ತಂತಿಗಳಿಗೆ ತಾಮ್ರ, ಇ–ವಾಹನಗಳಿಗೆ ಲಿಥಿಯಂ, ಸೌರ ವಿದ್ಯುತ್ ಫಲಕಗಳಿಗೆ ಸಿಲಿಕಾನ್ ಮತ್ತು ಗಾಳಿ ಯಂತ್ರಗಳ ಟರ್ಬೈನ್‌ಗಳಿಗೆ ಬೇಕಾದ ಝಿಂಕ್ ಲೋಹ ಧಾತುಗಳ ಪೂರೈಕೆ ಒಂದು ಸವಾಲಾಗಲಿದೆ. ಲಿಥಿಯಂ ಅಯಾನ್ ಬ್ಯಾಟರಿಗಳು ಸ್ಮಾರ್ಟ್‌ಫೋನ್‌ನಿಂದ ವಿದ್ಯುತ್ ಚಾಲಿತ ವಾಹನಗಳಿಗೆ ಅತ್ಯಾವಶ್ಯಕವಾಗಿದೆ. ಇದಕ್ಕೆ ಪರಿಹಾರವಾಗಿ ನಗರ ಗಣಿಗಾರಿಕೆ ದ್ವಾರಾ ಬೆಲೆ ಬಾಳುವ ಖನಿಜಗಳನ್ನು ಪುನರ್‌ಬಳಕೆ ಮಾಡಿ ಪರಿಸರ ಹಾಗೂ ಪ್ರಕೃತಿ ಸಂಪತ್ತನ್ನು ಉಳಿಸಬಹುದು.

ಕೇಂದ್ರೀಯ ಪರ್ಯಾವರಣ ಸಚಿವಾಲಯವು ಕಳೆದ ವರ್ಷ ನೂತನ ಬ್ಯಾಟರಿ ತ್ಯಾಜ್ಯ ನಿರ್ವಹಣಾ ನಿಯಮ–2022 ಜಾರಿಗೊಳಿಸಿತು. ಈ ನಿಯಮವು ಉತ್ಪಾದಕರು, ಮಾರಾಟಗಾರರು ಹಾಗೂ ಗ್ರಾಹಕರ ಹೊಣೆಗಾರಿಕೆ ನಿಗದಿಪಡಿಸಿದೆ. ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಲಿಯ ಉಸ್ತುವಾರಿಯಲ್ಲಿ ವಿಸ್ತಾರಿತ ಉತ್ಪಾದಕ ಉತ್ತರದಾಯಿತ್ವ (EPR) ನೀತಿಯನ್ನು ರೂಪಿಸಿದೆ. ಈ ನೀತಿಯೂ ಬ್ಯಾಟರಿ ಉತ್ಪಾದಕ ಕಂಪನಿಯು ಉತ್ಪಾದಿಸುವ ಬ್ಯಾಟರಿ ಪ್ರಮಾಣ ಮತ್ತು ಮರುಬಳಕೆ ಅನುಪಾತವೆಷ್ಟು ಎಂಬಂತಹ ಅನೇಕ ಮಾಹಿತಿಗಳನ್ನು ನೀಡುತ್ತಿದೆ. ಈ ನೀತಿಯು ನಗರ ಗಣಿಗಾರಿಕೆಗೆ ಉತ್ತೇಜನ ನೀಡುತ್ತಿದೆ.

ರಾಷ್ಟ್ರೀಯ ಲೋಹಶಾಸ್ತ್ರ ಪ್ರಯೋಗಾಲಯವು (ಎನ್‌ಎಂಎಲ್) ವಿಕಾಸಗೊಳಿಸಿರುವ ತಂತ್ರಜ್ಞಾನದಿಂದ ಲಿಥಿಯಂ ಅಯಾನ್ ಬ್ಯಾಟರಿಯಿಂದ ಶೇ.95ರಷ್ಟು ಶುದ್ಧ ಕೊಬಾಲ್ಟ್ ಲೋಹ ಪಡೆಯಬಹುದಾಗಿದೆ. ಭಾರತವು ಬ್ಯಾಟರಿಗಳಲ್ಲಿರುವ ಖನಿಜ ಧಾತುಗಳನ್ನು ಪ್ರತ್ಯೇಕಿಸಲು 14 ಬಿಲಿಯನ್ ರೂ. ವ್ಯಯಿಸಿದೆ. ಅಮೆರಿಕ, ಆಸ್ಟ್ರೇಲಿಯಾ ಹಾಗೂ ಕೆನಡಾಗಳು ಇದೇ ಉದ್ದೇಶಕ್ಕೆ ಸುಮಾರು 82 ಬಿಲಿಯನ್ ರೂ. ಖರ್ಚು ಮಾಡುತ್ತಿವೆ.

ಲಿಥಿಯಂ ಲಭ್ಯತೆ

ಪ್ರಸ್ತುತ ಚೀನಾ ದೇಶವು ಪರಿಷ್ಕರಣೆ ಮತ್ತು ಸುಧಾರಿತ ಸಂಸ್ಕರಣಾ ತಂತ್ರಜ್ಞಾನ ಆಧಾರಿತ ನಗರ ಗಣಿಗಾರಿಕೆಯ ಉತ್ತಮ ವ್ಯವಸ್ಥೆ ರೂಪಿಸುವ ಮೂಲಕ ಇ–ತ್ಯಾಜ್ಯದಿಂದ ಬ್ಯಾಟರಿ ಖನಿಜವನ್ನು ಪಡೆಯುತ್ತಿದೆ. ಇದರಿಂದ ಜಗತ್ತಿನ ಬ್ಯಾಟರಿ ಖನಿಜ ಬೇಡಿಕೆಯ ಶೇ. 75 ರಷ್ಟು ಪ್ರಮಾಣ ಚೀನಾ ಪೂರೈಸುವುದರ ಹಿಂದೆ ನಗರ ಗಣಿಗಾರಿಕೆ ಮಹತ್ವದ ಪಾತ್ರ ವಹಿಸಿದೆ. ಮಧ್ಯ ಅಮೇರಿಕಾದ ದೇಶ ಕೊಸ್ಟಾರಿಕಾದಲ್ಲಿ ಲಿಥಿಯಂ ನಿಕ್ಷೇಪವಿಲ್ಲ. ಆದರೂ ನಗರ ಗಣಿಗಾರಿಕೆಯಿಂದ ಪ್ರಮುಖ ಲಿಥಿಯಂ ರಫ್ತು ಮಾಡುವ ದೇಶವಾಗಿದೆ. ಇದೇ ರೀತಿ ಜಪಾನ್ ಕೂಡ ಪರಿತ್ಯಕ್ತ ವಾಹನಗಳಿಂದ ವಿಭಿನ್ನ ಖನಿಜ, ಧಾತುಗಳನ್ನು ಉತ್ಪಾದಿಸುತ್ತಿದೆ. ನಗರ ಗಣಿಗಾರಿಕೆಯ ಲಾಭವನ್ನು ಗ್ರಹಿಸಿದ ನಂತರ ಸಮೃದ್ಧ ಜಿ7 ದೇಶಗಳ ಗುಂಪು ಖನಿಜ ಸುರಕ್ಷಾ ಒಪ್ಪಂದ ಮಾಡಿಕೊಂಡಿವೆ.

ಭಾರತದ ಪರಿಸ್ಥಿತಿ

ಲಿಥಿಯಂ ಅಯಾನ್ ಬ್ಯಾಟರಿಯ ಪ್ರಮುಖ ಧಾತುವಾಗಿರುವ ಕೊಬಾಲ್ಟ್ ಭಾರತದಲ್ಲಿ ನಗಣ್ಯ ಪ್ರಮಾಣದಲ್ಲಿರುವ ಕಾರಣ 2021 ರಲ್ಲಿ 250 ಕೋಟಿ ರೂ.ಗೂ. ಅಧಿಕ ಮೌಲ್ಯದ ಕೊಬಾಲ್ಟ್ ಆಮದು ಮಾಡಿಕೊಂಡಿದೆ. ಕೊಬಾಲ್ಟ್ ಉತ್ಪಾದನೆಯಲ್ಲಿ ಭಾರತವು ಕಾಂಗೋ ದೇಶದಲ್ಲಿ ಶೇ. 48, ಆಸ್ಟ್ರೇಲಿಯಾದಲ್ಲಿ ಶೇ.18 ಮತ್ತು ಕ್ಯೂಬಾದಲ್ಲಿ ಶೇ. 7ರಷ್ಟು ಪಾಲುದಾರಿಕೆ ಹೊಂದಿದೆ. ಗ್ಯಾಸ್ ಟರ್ಬೈನ್, ರಾಕೆಟ್ ಇಂಜಿನ್, ಲಿಅಯಾನ್ ಬ್ಯಾಟರಿ ಮತ್ತು ವಿದ್ಯುತ್ಕಾಂತೀಯ ಸಾಧನ ಮೊದಲಾದವುಗಳಲ್ಲಿ ಬಳಸಲ್ಪಡುವ ನಿಕ್ಕಲ್ ಉತ್ಪಾದನೆಯು ಭಾರತದಲ್ಲಿ ನಾಮಮಾತ್ರವಾಗಿದೆ. ದೇಶದಲ್ಲಿ ಉತ್ಕೃಷ್ಟ ಗುಣಮಟ್ಟದ ಗ್ರಾಫೈಟ್ ನಿಕ್ಷೇಪ 35 ಸಾವಿರ ಕಿಲೋ ಟನ್‌ನಷ್ಟಿದೆಯಾದರೂ ಬೇಡಿಕೆ ಇದರ ಆರು ಪಟ್ಟು ಅಧಿಕವಾಗಿರುವುದರಿಂದ ಇದನ್ನು ಆಮದು ಮಾಡಲಾಗುತ್ತಿದೆ. ಇತ್ತೀಚಿನ ಆಶಾದಾಯಕ ಬೆಳವಣಿಗೆಯೆಂದರೆ ಜಮ್ಮುವಿನ ರಿಯಾಸಿ ಜಿಲ್ಲೆಯಲ್ಲಿ 59 ಲಕ್ಷ ಟನ್ ಲಿಥಿಯಂನ ವಿಶಾಲ ಭಂಡಾರ ದೊರೆತಿರುವುದು. ಅದೇ ರೀತಿ ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ 1600 ಟನ್ ಲಿಥಿಯಂ ನಿಕ್ಷೇಪವಿದೆಯೆಂದು ತಿಳಿದು ಬಂದಿದೆ. ಇವುಗಳ ಗಣಿಗಾರಿಕೆ ವ್ಯವಸ್ಥಿತ ರೀತಿಯಲ್ಲಿ ಆರಂಭವಾದಲ್ಲಿ ಭಾರತವು ಬಿಳಿ ಚಿನ್ನವೆಂದು ಕರೆಯಲ್ಪಡುವ ಲಿಥಿಯಂ ರಫ್ತು ಮಾಡುವ ದೇಶವೆನಿಸುವುದು. ವೈಶ್ವಿಕವಾಗಿ ಚಿಲಿಯಲ್ಲಿ ಶೇ. 36, ಆಸ್ಟ್ರೇಲಿಯಾದಲ್ಲಿ ಶೇ. 24 ಮತ್ತು ಅರ್ಜೆಂಟೀನಾದಲ್ಲಿ ಶೇ. 10 ರಷ್ಟು ಲಿಥಿಯಂ ನಿಕ್ಷೇಪಗಳಿವೆ.

ಇಲೆಕ್ಟ್ರಾನಿಕ್ ಸಾಧನಗಳು ಮುದ್ರಿತ ಸರ್ಕಿಟ್ ಬೋರ್ಡ್‌ಗಳಲ್ಲಿ ಸೀಸ, ಕೆಡ್ಮಿಯಂ ಮೊದಲಾದ ಧಾತುಗಳ ಲೇಪನವಿರುತ್ತದೆ. ಇನ್ನೂ ಕೆಲವು ಸಾಧನಗಳಲ್ಲಿ ಪಾದರಸವಿರುತ್ತದೆ. ಈ ಸಾಧನಗಳು ನಿರುಪಯುಕ್ತವಾದ ಮೇಲೆ ನಾವು ಎಲ್ಲೆಂದರಲ್ಲಿ ಎಸೆಯುತ್ತೇವೆ. ಭೂಮಿಗೆ ಸೇರುವ ಈ ವಿಷಕಾರಿ ಧಾತುಗಳು, ಲೋಹಗಳು, ಮಣ್ಣನ್ನು, ಅಂತರ್ಜಲವನ್ನು ವಿಷಯುಕ್ತ ಮಾಡುವುದಲ್ಲದೆ ಮಾನವನ ಆರೋಗ್ಯಕ್ಕೂ ಅಪಾಯಕಾರಿಯಾಗಿದೆ. ಈ ದೃಷ್ಟಿಯಿಂದ ಇ–ತ್ಯಾಜ್ಯಗಳ ಪುನರ್‌ಬಳಕೆ ಮಾಡುವ ನಗರ ಗಣಿಗಾರಿಕೆ ಲಾಭದಾಯಕ ಉದ್ಯಮವಾಗಿದೆ. ಯುವಕರು ಈ ಉದ್ಯಮದಲ್ಲಿ ತೊಡಗಿದಲ್ಲಿ ಪರ್ಯಾವರಣ ಸುರಕ್ಷೆ, ದೇಶಕ್ಕೆ ಹಾಗೂ ವೈಯಕ್ತಿಕವಾಗಿ ಉದ್ಯಮಿಗಳಿಗೂ ಲಾಭ ತರಲಿದೆ. ಇ–ತ್ಯಾಜ್ಯ ಸಂಸ್ಕರಣೆ ಎಂದರೆ ಆದಾಯದೊಂದಿಗೆ ಪರಿಸರ ಸಂರಕ್ಷಣೆ ಎನ್ನಬಹುದು. ಇನ್ನೊಂದು ರೀತಿಯಲ್ಲಿ Waste to wealth creation ಎನ್ನಬಹುದು.

ಗುರು, ಶಿಷ್ಯರ ನಡುವೆ ಪರಸ್ಪರ ಗೌರವ ವಾತ್ಸಲ್ಯವಿರಬೇಕು

ಪೊಲೀಸ್ ವರಿಷ್ಠಾಧಿಕಾರಿ ಡಾ.ಧರಣೀದೇವಿ ಮಾಲಗತ್ತಿ ಅಭಿಮತ



ಮೈಸೂರು, ಆ.26(ಬಿಎಲ್‌ಯು)– ಶಿಷ್ಯರ ಬಗ್ಗೆ ಗುರುಗಳಿಗೆ ವಾತ್ಸಲ್ಯವಿರಬೇಕು, ಹಾಗೆಯೇ ಶಿಷ್ಯರಿಗೆ ಗುರುಗಳ ಬಗ್ಗೆ ಗೌರವ ಇರಬೇಕು ಎಂದು ಬರಹಗಾರರೂ ಆದ ಐಪಿಎಸ್ ಅಧಿಕಾರಿ ಡಾ.ಧರಣೀದೇವಿ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ಡಾ.ಡಿ.ಕೆ.ರಾಜೇಂದ್ರ ಅವರ ಆತ್ಮಕಥೆ 'ನನ್ನ ಜೀವ ನನ್ನ ಭಾವ' ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಗುರು ಹಿರಿಯರ ಬಗ್ಗೆ ಕಿರಿಯರು ಗೌರವ ನೀಡುವ ಪರಿಪಾಠ ಮುಂದುವರೆಯಬೇಕು ಎಂದು ಹೇಳಿದರು.

ಡಾ.ರಾಜೇಂದ್ರ ಅವರು ಜೀವನಕ್ಕೆ ಸೂತ್ರ ಹಾಕಿಕೊಂಡಿದ್ದಾರೆ. ಅದರಂತೆ ಆದರ್ಶ ಬದುಕು ಸಾಗಿಸುತ್ತಿದ್ದಾರೆ. ಈ ಆತ್ಮಕಥೆ ಡಾ.ರಾಜೇಂದ್ರ ಅವರ ವ್ಯಕ್ತಿತ್ವಕ್ಕೆ ದರ್ಪಣವಾಗಿದೆ. ತಮ್ಮ ಜೀವನದ ಸುಖ, ದುಃಖ ಹಾಗೂ ಕಹಿ ಘಟನೆಗಳನ್ನು ಬಹಳ ಸೂಕ್ಷ್ಮವಾಗಿ ತಿಳಿಸಿದ್ದಾರೆ. ನಾಲಿಗೆ ಚೆನ್ನಾಗಿದ್ದರೆ ಊರು ಚೆನ್ನಾಗಿರುತ್ತದೆ, ಊರು ಚೆನ್ನಾಗಿದ್ದರೆ ಲೋಕ ಚೆನ್ನಾಗಿರುತ್ತದೆ ಎಂಬ ಡಾ.ರಾಜೇಂದ್ರ ಅವರ ಮಾತು ಪ್ರಸ್ತುತ ಎಂದು ಡಾ.ಧರಣೀ ದೇವಿ ಮಾಲಗತ್ತಿ ಹೇಳಿದರು. ವಿಶ್ವವಿದ್ಯಾನಿಲಯಗಳಲ್ಲಿ ಇರುವ ಪ್ರಸಾರಾಂಗಗಳು ಲಾಭ ನಷ್ಟವನ್ನು ಲೆಕ್ಕ ಹಾಕಬಾರದು. ಜ್ಞಾನಾರ್ಜನೆಗೆ ಜ್ಞಾನದ ಬುತ್ತಿಯಂತೆ ಹಂಚುವಂತಿರಬೇಕು. ಈಗಿನ ಸ್ಥಿತಿಯಲ್ಲಿ ಆದರ್ಶವಾದಕ್ಕಿಂತಲೂ ಮುಕ್ತ ಚಿಂತನೆ ಬಹಳ ಮುಖ್ಯ. ಮೊದಲು ನಾವು ಬದಲಾಗಬೇಕು, ತರುವಾಯ ಸಮಾಜದ ಬದಲಾವಣೆಗೆ ಮುಂದಾಗಬೇಕು ಎಂದು ಅವರು ಕರೆ ನೀಡಿದರು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್, ಡಾ.ಸಿ.ನಾಗಣ್ಣ, ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅತಿಯಾದ ಮೊಬೈಲ್, ಇಂಟರ್‌ನೆಟ್ ಪ್ರಭಾವದಿಂದ ಮಕ್ಕಳಲ್ಲಿ ಕೆಟ್ಟ ಚಿಂತನೆ

ಧರಣೀದೇವಿ ಮಾಲಗತ್ತಿ ವಿಷಾದ

ಮೈಸೂರು, ಆ.26(ಬಿಎಲ್‌ಯು)– ಮಂಡ್ಯದ ನಾಗಮಂಗಲದ ಬಿ.ಜಿ.ನಗರದ ಡಿಪ್ಲೋಮಾ ಕಾಲೇಜಿನ ವಿದ್ಯಾರ್ಥಿ, ಪಾಠ ಹೇಳಿದ ಗುರುವಿಗೆ ಲಾಂಗ್ ಹಿಡಿದು ಬೆದರಿಕೆ ಹಾಕಿದ ಬಗ್ಗೆ ಐಪಿಎಸ್ ಅಧಿಕಾರಿ ಧರಣೀದೇವಿ ಮಾಲಗತ್ತಿ ಬೇಸರ ವ್ಯಕ್ತಪಡಿಸಿದ್ದಾರೆ. ವಿವೇಚನೆಯ ಕೊರತೆ ಹಾಗೂ ಭಾವನಾತ್ಮಕತೆಯ ಮೌಲ್ಯ ಅರಿಯದ ಕೆಲವು ಮಕ್ಕಳಿಂದ ಇಂತಹ ಕೃತ್ಯಗಳು ನಡೆಯುತ್ತವೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಅಭಿಪ್ರಾಯಪಟ್ಟರು. ಮೊಬೈಲ್ ಹಾಗೂ ಇಂಟರ್‌ನೆಟ್ ಪ್ರಭಾವದಿಂದ ಕೂಡ ಮಕ್ಕಳು ಕೆಲವು ಕೆಟ್ಟ ಚಿಂತನೆಗಳನ್ನು ತಲೆಗೆ ಹೊತ್ತಿಸಿಕೊಳ್ಳುತ್ತಾರೆ. ಯಾವುದೇ ತಳಹದಿ ಇಲ್ಲದ ವರ್ಚ್ಯುವಲ್ ಪ್ರಪಂಚ ಕೂಡ ಕೆಟ್ಟ ಚಿಂತನೆಗೆ ಮಕ್ಕಳನ್ನು ತಳ್ಳುತ್ತದೆ. ಹಿಂದೆ ಗುರುಗಳಿಂದ ಮಕ್ಕಳು ಜ್ಞಾನ ಪಡೆಯುತ್ತಿದ್ದರು. ಆದರೆ ಈಗ ಮಕ್ಕಳು ಗುರುಗಳಿಂದ ಜ್ಞಾನ ಪಡೆಯುವುದು ಕಡಿಮೆಯಾಗಿರುವ ಕಾರಣ ಕೆಲವು ಮಕ್ಕಳಿಂದ ಇಂತಹ ಬೆಳವಣಿಗೆಗಳಾಗುತ್ತದೆ ಎಂದು ಧರಣೀದೇವಿ ಮಾಲಗತ್ತಿ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಿಂಗ್ ರಸ್ತೆಯಲ್ಲಿ ವ್ಹೀಲಿಂಗ್: ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಪುತ್ರನ ಬಂಧನ

ಮೈಸೂರು,ಆ.26(ಆರ್‌ಕೆ)–ಮೈಸೂರಿನ ರಿಂಗ್ ರಸ್ತೆಯಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಮಹಿಳಾ ಸಬ್‌ಇನ್ಸ್‌ಪೆಕ್ಟರ್‌ವೊಬ್ಬರ ಮಗನನ್ನು ಬಂಧಿಸಿರುವ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು, ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯ ತಾಲೂಕು ಕೇಂದ್ರದ ಸಂಚಾರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಪುತ್ರ ಸೈಯ್ಯದ್ ಐಮಾನ್(18) ವ್ಹೀಲಿಂಗ್ ಮಾಡಿ ಸಿಕ್ಕಿ ಬಿದ್ದಿರುವ ಯುವಕ. ಮೈಸೂರಿನ ರಾಜೀವ್‌ನಗರ 2ನೇ ಹಂತದ ವಾಟರ್ ಟ್ಯಾಂಕ್ ಸಮೀಪ ರಿಂಗ್ ರಸ್ತೆಯಲ್ಲಿ ಸುಜುಕಿ ಆಕ್ಸೆಸ್ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡಿ, ಅದರ ವೀಡಿಯೋ ಹಾಗೂ ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಿಗೆ ಅಪ್‌ಲೋಡ್ ಮಾಡಿದ್ದ. ಅಲ್ಲಿಂದ ಡೌನ್‌ಲೋಡ್ ಮಾಡಿದ ವೀಡಿಯೋ ದೃಶ್ಯಗಳನ್ನು ಕೆಲವರು ವೈರಲ್ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರಿನ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು, ಸೈಯ್ಯದ್ ಐಮಾನ್‌ನನ್ನು ಬಂಧಿಸಿ ನಿಯಮಾನುಸಾರ ಪ್ರಕ್ರಿಯೆ ನಡೆಸಿದ ಬಳಿಕ ಬಿಡುಗಡೆ ಮಾಡಿದ್ದಾರೆ. ವ್ಹೀಲಿಂಗ್‌ಗೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆಯಲಾಗಿದೆ ಎಂದು ಇನ್ಸ್‌ಪೆಕ್ಟರ್ ಯೋಗೇಶ್ ತಿಳಿಸಿದ್ದಾರೆ.

ಹುಡುಗಿ ನೋಡಲು ವಿದೇಶದಿಂದ ಬರುವುದಾಗಿ ಹೇಳಿ ವಧುವಿನ ತಂದೆಗೆ 1.41 ಲಕ್ಷ ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಆ.26– ಮ್ಯಾಟ್ರಿಮೋನಿ ಜಾಹೀರಾತಿಗೆ ಸ್ಪಂದಿಸಿ ಹುಡುಗಿ ನೋಡಲು ವಿದೇಶದಿಂದ ಭಾರತಕ್ಕೆ ಬರುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 1.41 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಹೆಬ್ಬಾಳು 2ನೇ ಹಂತದ ನಿವಾಸಿ ಎನ್.ಸೋಮಣ್ಣ ವಂಚನೆಗೊಳಗಾದವರಾಗಿದ್ದು, ಇವರು ತಮ್ಮ ಪುತ್ರಿಗೆ ವರ ಬೇಕಾಗಿದ್ದಾನೆ ಎಂದು ಮ್ಯಾಟ್ರಿಮೋನಿ ಆಪ್‌ನಲ್ಲಿ ಜಾಹೀರಾತು ಪ್ರಕಟಿಸಿದ್ದರು. ಈ ಜಾಹೀರಾತಿಗೆ ಸ್ಪಂದಿಸಿದ ವ್ಯಕ್ತಿಯೋರ್ವ ತನ್ನ ವಿವರಗಳನ್ನು ಸೋಮಣ್ಣ ಅವರ ಮೊಬೈಲ್‌ಗೆ ಸಂದೇಶದ ಮೂಲಕ ಕಳುಹಿಸಿದ್ದ. ನಂತರ ಅವರ ಪುತ್ರಿಯ ಮೊಬೈಲ್ ಸಂಖ್ಯೆ ಪಡೆದು ಆಕೆಯೊಂದಿಗೆ ವಾಟ್ಸಾಪ್ ಕಾಲ್‌ನಲ್ಲಿ ಮಾತನಾಡಿದ್ದಲ್ಲದೇ ತಾನು ಭಾರತಕ್ಕೆ ಬರುವುದಾಗಿ ತಿಳಿಸಿದ್ದಾನೆ. ಈ ನಡುವೆ ಕಳೆದ ಜುಲೈ 26ರಂದು 8826223735 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ, ತಾನು ದೆಹಲಿ ಏರ್‌ಪೋರ್ಟ್‌ನಿಂದ ಕರೆ ಮಾಡುತ್ತಿರುವುದಾಗಿ ಪರಿಚಯಿಸಿಕೊಂಡು, "ಇಲ್ಲಿ ಅನೂಜ್ ಕೌಂಡಲ್ ಎಂಬ ವ್ಯಕ್ತಿ ಇದ್ದಾರೆ. ಅವರು 50 ಸಾವಿರ ಡಾಲರ್ ತಂದಿದ್ದಾರೆ, ಅದಕ್ಕಾಗಿ ನೀವು 45,500 ರೂ. ಕಳುಹಿಸಿ ರಿಜಿಸ್ಟರ್ ಮಾಡಬೇಕು" ಎಂದು ತಿಳಿಸಿದ್ದಾನೆ. ಇದನ್ನು ನಂಬಿದ ಸೋಮಣ್ಣ, ಹಣ ವರ್ಗಾವಣೆ ಮಾಡಿದ ನಂತರ ಮತ್ತೆ ಕರೆ ಮಾಡಿದ ವ್ಯಕ್ತಿ ಡಾಲರ್ ಅನ್ನು ಇಂಡಿಯನ್ ಕರೆನ್ಸಿಗೆ ಕನ್ವರ್ಟ್ ಮಾಡಲು 96 ಸಾವಿರ ರೂ. ಕಳುಹಿಸುವಂತೆ ತಿಳಿಸಿ, ಒಟ್ಟಾರೆ 1,41,500 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಭೋಗ್ಯಕ್ಕೆ ನೀಡುವುದಾಗಿ ವ್ಯಕ್ತಿಗೆ 9.70 ಲಕ್ಷ ರೂ. ವಂಚನೆ

ಹಣ ಕೇಳಿದರೆ ಜಾತಿ ನಿಂದನೆ, ಮಹಿಳೆಯೊಂದಿಗೆ ಅಸಭ್ಯ ವರ್ತನೆ ಕೇಸ್ ಹಾಕುವ ಬೆದರಿಕೆ

ಮೈಸೂರು, ಆ.26–ಮನೆ ಭೋಗ್ಯಕ್ಕೆ ಕೊಡುವುದಾಗಿ ನಂಬಿಸಿ ವ್ಯಕ್ತಿಯೋರ್ವನಿಗೆ ದಂಪತಿ 9.70 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೂಲತಃ ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಗ್ರಾಮದವರಾಗಿದ್ದು, ಮೈಸೂರಿನ ಶ್ರೀರಾಂಪುರ ರಿಂಗ್ ರಸ್ತೆ ಬಳಿ ಇರುವ ಅಪರ್ಣಾ ಲೇಔಟ್‌ನಲ್ಲಿ ವಾಸವಿದ್ದ ಪ್ರೇಮದಾಸ(32) ವಂಚನೆಗೊಳಗಾದವರಾಗಿದ್ದು, ಅವರಿಗೆ ಅದೇ ಅಪಾರ್ಟ್‌ಮೆಂಟ್‌ನ ಧರ್ಮರಾಜ್ ಮತ್ತು ಸೌಮ್ಯಾ ದಂಪತಿ ವಂಚಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.

ವಿವರ: ಕಳೆದ 3 ವರ್ಷದ ಹಿಂದೆ ಪ್ರೇಮದಾಸ ಅವರು ಅಪರ್ಣಾ ಲೇಔಟ್‌ನಲ್ಲಿ ವಾಸವಿದ್ದು, ಭೋಗ್ಯಕ್ಕೆ ಮನೆ ಹುಡುಕುತ್ತಿದ್ದಾಗ ಅವರ ಮನೆಯ ಹಿಂಭಾಗದ ಮನೆ ಮಾಲೀಕರಾದ ಧರ್ಮರಾಜ್ ಮತ್ತು ಅವರ ಪತ್ನಿ ಸೌಮ್ಯಾ ಅವರು ತಾವು ವಾಸವಿರುವ ಮನೆಯನ್ನು ಭೋಗ್ಯಕ್ಕೆ ಕೊಟ್ಟು ಬೇರೆ ಕಡೆ ಮನೆ ಮಾಡಿಕೊಂಡು ಹೋಗುತ್ತೇವೆ ಎಂದು ತಿಳಿಸಿ ಪ್ರೇಮದಾಸ ಅವರಿಂದ 15 ಲಕ್ಷ ರೂ.ಗಳನ್ನು ಪಡೆದಿದ್ದಾರೆ. ಆದರೆ, ಮನೆ ನೀಡದೇ ಮತ್ತೆ 5 ಲಕ್ಷ ರೂ. ಕೊಟ್ಟರೆ ಮಾತ್ರ ಭೋಗ್ಯಕ್ಕೆ ಮನೆ ಕೊಡುವುದಾಗಿ ಹೇಳಿದರಂತೆ. ಅಷ್ಟು ಹಣ ಕೊಡಲು ಸಾಧ್ಯವಿಲ್ಲ, ನಮ್ಮ ಹಣ ವಾಪಸ್ ಕೊಡಿ ಎಂದು ಪ್ರೇಮದಾಸ್ ಹೇಳಿದಾಗ ಒಮ್ಮೆ 5 ಲಕ್ಷ ಹಾಗೂ 30 ಸಾವಿರ ರೂ. ನೀಡಿ, ಉಳಿಕೆ 9.70 ಲಕ್ಷ ರೂ.ಗಳನ್ನು ಕೊಡದೇ ಸತಾಯಿಸಿದ್ದಾರೆ. ಹಣಕ್ಕಾಗಿ ಮತ್ತೇ ಕೇಳಿದಾಗ, ಮನೆ ಬಳಿ ಬಂದರೆ ನಾಯಿಯನ್ನು ಬಿಟ್ಟು ಕಚ್ಚಿಸುವುದಾಗಿಯೂ, ಜಾತಿ ನಿಂದನೆ ಹಾಗೂ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾಗಿ ಪೊಲೀಸರಿಗೆ ದೂರು ನೀಡುವುದಾಗಿ ಹೆದರಿಸುತ್ತಿದ್ದಾರೆ ಎಂದು ಪ್ರೇಮದಾಸ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವೃದ್ಧರೊಬ್ಬರಿಗೆ ಬೆದರಿಸಿ ಆನ್‌ಲೈನ್‌ನಲ್ಲಿ 3.53 ಲಕ್ಷ ವರ್ಗಾಯಿಸಿಕೊಂಡು ವಂಚನೆ

ಮಹಿಳಾ ಪ್ರಾಧ್ಯಾಪಕಿಗೆ 2.73 ಲಕ್ಷ ಮೋಸ

ಮೈಸೂರು,ಆ.26–ಮನಿಲ್ಯಾಂಡ ರಿಂಗ್ ಕೇಸ್‌ನಲ್ಲಿ ನಿಮ್ಮ ಆಧಾರ್ ಕಾರ್ಡ್ ಬಳಕೆಯಾಗಿದೆ ಎಂದು ಹೆದರಿಸಿ ವೃದ್ಧರೊಬ್ಬರಿಂದ 3.53 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮೈಸೂರಿನ ಶ್ರೀರಾಂಪುರ ನಿವಾಸಿ ವಿ.ರಘುನಾಥ್ ಶರ್ಮ(70) ವಂಚನೆಗೊಳಗಾಗಿದ್ದು, ಆ.24ರಂದು ಆರ್‌ಟಿಓದಿಂದ ಮಾತನಾಡುತ್ತಿರುವುದಾಗಿ ಇವರ ಮೊಬೈಲ್‌ಗೆ ಕರೆ ಬಂದಿದೆ. ಕರೆ ಮಾಡಿದ ವ್ಯಕ್ತಿ ಕರೆಯನ್ನು ಪೊಲೀಸ್ ಠಾಣೆಗೆ ವರ್ಗಾಯಿಸುತ್ತಿರುವುದಾಗಿ ತಿಳಿಸಿದ್ದಾನೆ. ನಂತರ ಮಾತನಾಡಿದ ವ್ಯಕ್ತಿ ನಿಮ್ಮ ಆಧಾರ್ ಕಾರ್ಡ್ ಮನಿ ಲ್ಯಾಂಡರಿಂಗ್ ಕೇಸ್‌ನಲ್ಲಿ ಬಳಕೆಯಾಗಿದೆ ಎಂದು ಹೆದರಿಸಿ ಅವರಿಂದ 3,53,300 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮಹಿಳಾ ಪ್ರಾಧ್ಯಾಪಕಿಗೆ ಮೋಸ: ಮತ್ತೊಂದು ಪ್ರಕರಣದಲ್ಲಿ ಹೈಪ್ರೊಫೈಲ್ ಜಾಬ್ ನೀಡುವುದಾಗಿ ನಂಬಿಸಿ ಮಹಿಳಾ ಪ್ರೊಫೆಸರ್‌ನಿಂದ 2.73 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಮೈಸೂರಿನ ಚಾಮುಂಡಿಪುರಂ ನಿವಾಸಿ ರಮಾ(65) ವಂಚನೆಗೊಳಗಾದವರಾಗಿದ್ದು, ಇವರ ಮೊಬೈಲ್‌ಗೆ 08856734759 ಸಂಖ್ಯೆಯಿಂದ ಕರೆ ಬಂದಿದ್ದು, ಹೈಪ್ರೊಫೈಲ್ ಜಾಬ್ ನೀಡುವುದಾಗಿ ನಂಬಿಸಿ, ರಿಜಿಸ್ಟ್ರೇಷನ್‌ಗೆ 5700 ರೂ. ಮತ್ತು ಸೆಕ್ಯೂರಿಟಿ ಡಿಪಾಸಿಟ್‌ಗೆ ಎಂದು 2,73,060 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಪಾರ್ಟ್‌ಟೈಂ ಜಾಬ್ ಹೆಸರಲ್ಲಿ ಆನ್‌ಲೈನ್‌ನಲ್ಲಿ ಸಾರಿಗೆ ಸಿಬ್ಬಂದಿಗೆ 1.78 ಲಕ್ಷ ರೂ. ವಂಚನೆ

ಚಾಮರಾಜನಗರ,ಆ.26– ಪಾರ್ಟ್ ಟೈಮ್ ಜಾಬ್ ಹೆಸರಿನಲ್ಲಿ ಕೆಎಸ್‌ಆರ್‌ಟಿಸಿ ಡಿಪೋ ಮೆಕ್ಯಾನಿಕ್‌ಗೆ ಆನ್‌ಲೈನ್ ಮೂಲಕ 1.78 ಲಕ್ಷ ರೂ. ವಂಚಿಸಲಾಗಿದೆ. ಚಾಮರಾಜನಗರ ತಾಲೂಕು ಬಂದಿಗೌಡನಹಳ್ಳಿ ಗ್ರಾಮದವರಾಗಿದ್ದು, ಚಾಮರಾಜನಗರ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಮೆಕ್ಯಾನಿಕ್ ಆಗಿರುವ ಎಸ್.ಸುನಿಲ್‌ಕುಮಾರ್(39) ವಂಚನೆಗೊಳಗಾದವರಾಗಿದ್ದು, ಆಗಸ್ಟ್ 7ರಂದು ವರ್ಕ್ ಫ್ರಂ ಹೋಂ ಬಗ್ಗೆ ಇವರ ಟೆಲಿಗ್ರಾಂ ಖಾತೆಗೆ ಸಂದೇಶ ಬಂದಿದೆ. ಅದರಲ್ಲಿ ಪಾರ್ಟ್‌ಟೈಮ್ ಜಾಬ್ ಮಾಡಿದರೆ ದಿನಕ್ಕೆ 1200ರಿಂದ 1800 ರೂ. ಹಾಗೂ ಫುಲ್‌ಟೈಮ್ ಮಾಡಿದರೆ 2200ರಿಂದ 4200 ರೂ. ಸಂಪಾದಿಸಬಹುದು ಎಂದು ಉಲ್ಲೇಖಿಸಲಾಗಿತ್ತು. ಅದನ್ನು ನಂಬಿ ಟೆಲಿಗ್ರಾಂ ಆಪ್‌ನಲ್ಲಿ ಅವರು ಚಾಟ್ ಮಾಡಿದಾಗ ಅಂಜಲಿ ಅದ್ವೈತ್ ಎಂಬಾಕೆಯ ಮೊಬೈಲ್ ಸಂಖ್ಯೆ 8453065017ನಿಂದ ಒಂದು ಲಿಂಕ್ ಬಂದಿದ್ದು, ಅದರ ಮೂಲಕ ಸುನಿಲ್‌ಕುಮಾರ್ ತಮ್ಮ ಹೆಸರಿನಲ್ಲಿ ಅಕೌಂಟ್ ಕ್ರಿಯೇಟ್ ಮಾಡಿಕೊಂಡು ಜಾಬ್ ಆರಂಭಿಸಿದ್ದಾರೆ. ಆಗಸ್ಟ್ 10ರಂದು ಅವರ ಖಾತೆಗೆ 3 ಹಂತಗಳಲ್ಲಿ ಒಟ್ಟು 18 ಸಾವಿರ ರೂ. ಬಂದಿದೆ. ನಂತರ ಅವರು ಹಣ ಹೂಡಿಕೆ ಮಾಡುತ್ತಿದ್ದಂತೆ ಆಗಸ್ಟ್ 12ರಂದು ಮತ್ತೆ ಅವರ ಖಾತೆಗೆ 52,500 ರೂ. ಬಂದಿದೆ. ತಮಗೆ ದೊಡ್ಡ ಮೊತ್ತದ ಹಣ ಬರುತ್ತಿದ್ದುದ್ದರಿಂದ ಅದನ್ನು ನಂಬಿದ ಸುನಿಲ್‌ಕುಮಾರ್, ಒಟ್ಟು 2,48,564 ರೂ.ಗಳನ್ನು ಹೂಡಿಕೆ ಮಾಡಿದ್ದು, ಅವರಿಗೆ ಮತ್ತೆ ಯಾವುದೇ ಹಣ ಬಂದಿಲ್ಲ. ಹಾಗಾಗಿ ಅವರು ತಾವು ಮೋಸ ಹೋಗಿರುವುದು ಮನವರಿಕೆ ಆಗಿದೆ. ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೇ.40 ಕಮಿಷನ್, ಕೋವಿಡ್–19 ಭ್ರಷ್ಟಾಚಾರ ತನಿಖೆಗೆ ಪ್ರತ್ಯೇಕ ವಿಚಾರಣಾ ಆಯೋಗ ರಚನೆ

ಬೆಂಗಳೂರು,ಆ.26–ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಅವರ ಪತ್ರವನ್ನಾಧರಿಸಿ ಶೇ.40ರಷ್ಟು ಕಮಿಷನ್‌ಗೆ ಸಂಬಂಧಿಸಿದಂತೆ ಹಾಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಯನ್ನಾಧರಿಸಿ ಕೋವಿಡ್–19ರ ಸಾಂಕ್ರಾಮಿಕ ರೋಗದ ನಿವಾರಣೆ ಹಾಗೂ ತಡೆಗಟ್ಟುವಿಕೆಗೆ ಕೈಗೊಂಡ ಕಾರ್ಯಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆ ನಡೆಸಲು ರಾಜ್ಯ ಸರ್ಕಾರ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪ್ರತ್ಯೇಕ ವಿಚಾರಣಾ ಆಯೋಗಗಳನ್ನು ರಚಿಸಿದೆ.

ಶೇ.40ರಷ್ಟು ಕಮಿಷನ್ ಆರೋಪದ ಬಗ್ಗೆ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಮತ್ತು ಕೋವಿಡ್ ಸಂದರ್ಭದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿದೆ.

ರಾಜ್ಯದಲ್ಲಿ ಪ್ರಮುಖ ಕಾಮಗಾರಿಗಳನ್ನು ನಡೆಸುವ ಇಲಾಖೆಗಳಲ್ಲಿ ಪ್ಯಾಕೇಜ್ ಪದ್ಧತಿ, ಬಾಕಿ ಮೊತ್ತ ಬಿಡುಗಡೆ ಮತ್ತು ಟೆಂಡರ್ ಪ್ರಕ್ರಿಯೆ ಇತ್ಯಾದಿಗಳಲ್ಲಿ ಶೇ.40ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಪ್ರಮುಖ ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲೇ ಕೆಲವು ಸಾರ್ವಜನಿಕ ಪ್ರತಿನಿಧಿಗಳಿಗೆ ಮತ್ತು ಇತರರಿಗೆ ಶೇ.25ರಿಂದ 30ರಷ್ಟು ಲಂಚ ನೀಡಬೇಕಾಗಿದೆ. ಕಾಮಗಾರಿ ಪೂರ್ಣವಾದ ನಂತರ ಬಾಕಿ ಬಿಲ್‌ಗಳನ್ನು ಮಂಜೂರು ಮಾಡಲು ಶೇ.5ರಿಂದ 6ರಷ್ಟು ಲಂಚ ನೀಡಬೇಕಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಪ್ರಧಾನಮಂತ್ರಿಗಳು ಹಾಗೂ ನಿಕಟಪೂರ್ವ ಮುಖ್ಯಮಂತ್ರಿಗಳಿಗೆ ದೂರು ಸಲ್ಲಿಸಿದ್ದರು.

ಆದರೆ, ಈವರೆವಿಗೂ ಈ ಗಂಭೀರ ಆರೋಪಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವುದೇ ತನಿಖೆ ನಡೆಯದ ಕಾರಣ ಇದೀಗ ತನಿಖೆಗಾಗಿ ವಿಚಾರಣಾ ಆಯೋಗ ರಚಿಸಲು ಸರ್ಕಾರದ ತೀರ್ಮಾನಿಸಿದೆ. ವಿಚಾರಣಾ ಆಯೋಗವು 3 ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು ಎಂದು ಸರ್ಕಾರ ಅಪೇಕ್ಷಿಸುತ್ತದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕೋವಿಡ್–19: ಕೋವಿಡ್–19 ಸಾಂಕ್ರಾಮಿಕ ನಿವಾರಣೆ ಹಾಗೂ ತಡೆಗಟ್ಟುವಿಕೆ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಇತರ ಇಲಾಖೆಗಳು ಹಾಗೂ ಈ ಇಲಾಖೆಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಂಸ್ಥೆಗಳಲ್ಲಿ ಔಷಧಿ, ಉಪಕರಣಗಳು ಹಾಗೂ ಸಾಮಗ್ರಿ ಖರೀದಿ, ಆಮ್ಲಜನಕ ನಿರ್ವಹಣೆ, ಆಮ್ಲಜನಕ ಕೊರತೆಯಿಂದ ಉಂಟಾದ ಸಾವುಗಳು ಇತ್ಯಾದಿ ವಿಷಯಗಳ ಕುರಿತು 2021ರ ಜುಲೈ, ಆಗಸ್ಟ್‌ನಲ್ಲಿ ನಡೆಸ ಸಾರ್ವಜನಿಕ ಲೆಕ್ಕಪತ್ರ ಸಮಿತಿಯೂ ನೀಡಿರುವ ವರದಿಯಲ್ಲಿನ ಗಂಭೀರ ಆರೋಪಗಳ ಬಗ್ಗೆ ತನಿಖೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಲಾಗಿದ್ದು, ಈ ಆಯೋಗಕ್ಕೂ ವರದಿ ಸಲ್ಲಿಕೆಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ.

ಉಚಿತ ಅಣಕು PGCET, DCET ತರಬೇತಿ

ಮೈಸೂರು,ಆ.26–ಮೈಸೂರಿನ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಉಚಿತ ಅಣಕು PGCET (ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ) ಅನ್ನು ಆಯೋಜಿಸಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆಯೋಜಿಸುವ MCA / MBA ಪ್ರವೇಶ ಬಯಸುವ ಪದವೀಧರರಿಗೆ ಅಣಕು ಪರೀಕ್ಷೆ ಸಹಾಯ ಮಾಡುತ್ತದೆ. ಆಸಕ್ತ ವಿದ್ಯಾರ್ಥಿಗಳು ಬೆಳಗ್ಗೆ 10 ಗಂಟೆಗೆ ಸ್ಥಳಕ್ಕೆ ಹಾಜರಾಗತಕ್ಕದ್ದು. ಪೂರ್ವ ನೋಂದಣಿ ಕಡ್ಡಾಯವಾಗಿದೆ. ಸುತ್ತಮುತ್ತಲಿನ ತಾಲೂಕುಗಳಿಂದ ಸಾರಿಗೆ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗುವುದು. MCA ಆಕಾಂಕ್ಷಿಗಳಿಗೆ ನೋಂದಣಿ ಲಿಂಕ್: https://forms.gle/AGUXv jou5cvx REtWA (ಮಾಹಿತಿಗೆ– 9620228107)

MBA ಆಕಾಂಕ್ಷಿಗಳಿಗೆ ನೋಂದಣಿ ಲಿಂಕ್: https://forms.gle/apV2u8jhCyj3t36X9 (ವಿವರಗಳಿಗಾಗಿ - 9886414144)

ಮೈಸೂರು ಸ್ಟಾರ್ಟ್‌ಅಪ್‌ಗಳಿಗೆ 25 ಕೋಟಿ ಕ್ಲಸ್ಟರ್ ಸೀಡ್ ಫಂಡ್



ಮೈಸೂರು, ಆ.26–ಬಿಯಾಂಡ್ ಬೆಂಗಳೂರು ಉಪಕ್ರಮದ ಭಾಗವಾಗಿ ಮೈಸೂರು ಕ್ಲಸ್ಟರ್‌ನ ಸ್ಟಾರ್ಟ್‌ಅಪ್‌ಗಳಿಗೆ 25 ಕೋಟಿ ರೂ. ಮೊತ್ತದ ಕ್ಲಸ್ಟರ್ ಸೀಡ್ ಫಂಡ್ ಸ್ಥಾಪಿಸಲಾಗಿದೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಮೈಸೂರು ಕ್ಲಸ್ಟರ್ ಸೀಡ್ ಫಂಡ್‌ಗಾಗಿ ಉದ್ಯಮಗಳಿಂದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಪತ್ರ ಸ್ವೀಕರಿಸಿದೆ. ಸಭೆಯಲ್ಲಿ ಕೆಲವು ಮಹತ್ವ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ರಾಜ್ಯ ಸರ್ಕಾರ, ಬ್ಯಾಂಕ್ ಹಾಗೂ ಮೈಸೂರು ಉದ್ಯಮಿಗಳ ಸಹಭಾಗಿತ್ವದಲ್ಲಿ ಸೀಡ್ ಫಂಡ್ ಸ್ಥಾಪಿಸಲಾಗಿದ್ದು, ಮೈಸೂರು ವಲಯದಲ್ಲಿ ಸ್ಟಾರ್ಟ್‌ಅಪ್ ಆರಂಭಿಸುವ ಅರ್ಹ ಉದ್ಯಮಿಗಳಿಗೆ ಈ ಫಂಡ್‌ನಿಂದ ಬಂಡವಾಳ ನಿಧಿ ಒದಗಿಸಲಾಗುತ್ತದೆ. ಇದು ಇಂಥ ಮೊದಲ ಸೆಇಬಿಐ ಸಿಎಟಿ1 ನಿಧಿಯಾಗಿದ್ದು, ದೇಶದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಗೇಮ್ ಚೇಂಜರ್ ಆಗುವುದರಲ್ಲಿ ಅನುಮಾನವಿಲ್ಲ.

ಕಳೆದ ಎರಡು ವರ್ಷಗಳಲ್ಲಿ ಮೈಸೂರು ಕ್ಲಸ್ಟರ್ ಉದ್ಯಮವು ವ್ಯಾಪಕ ಬೆಳವಣಿಗೆ ಕಂಡಿದ್ದು, ದೇಶದ ಉದಯೋನ್ಮುಖ ಟೆಕ್ ಹಬ್ ಆಗಿ ಬೆಳೆದಿದೆ. ಇದರ ಹಿಂದೆ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಲ್ಲದೇ ನ್ಯಾಸ್ಕಾಂ, ಐಇಎಸ್‌ಎ, ಅಸೋಚಾಮ್, ಸಿಐಐ, ಟಿಐಇ ಮೈಸೂರು–ಇವುಗಳ ಪಾತ್ರ ದೊಡ್ಡದು.

ಕಳೆದ 18 ತಿಂಗಳುಗಳಿಂದೀಚೆಗೆ ಮೈಸೂರಿನಲ್ಲಿ ಐಬಿಎಂ, ಟ್ರಾವಂಕೂರ್ ಅನಾಲಿಟಿಕಾ, ನಾಗರೋ, ಹೆಚ್‌ಪಿಎಸ್, ಪ್ರೊಕ್ಸೆಲೆರಾ, ಫೋರ್‌ಫ್ರಂಟ್ ಹೆಲ್ತ್‌ಕೇರ್, ಗ್ಲೋಟೆಚ್ ಆಟೋ–ಆಸಮ್ ಮುಂತಾದ ಪ್ರತಿಷ್ಠಿತ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಹಿಂದುಜಾ ಗ್ಲೋಬಲ್ ಸೊಲ್ಯೂಷನ್ಸ್‌ನ ಜಾಗತಿಕ ವಿಸ್ತರಣೆಯ ಭಾಗವಾಗಿ ಮೈಸೂರಿನಲ್ಲಿ ಹೊಸ ಕೇಂದ್ರ ಸ್ಥಾಪಿಸಿದ್ದು, ಮೊದಲ ಹಂತದಲ್ಲಿ ಸಂಸ್ಥೆ 400 ಮಂದಿಯನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳಲು ಯೋಜಿಸಿದೆ.

ಸೇವೆ ಮತ್ತು ಉತ್ಪಾದನೆ ಎರಡನ್ನೂ ಒಳಗೊಂಡಿರುವ ವಲಯಗಳ ಬಲ ಹೆಚ್ಚಿಸುವಲ್ಲಿ ಪ್ರತಿಭಾನ್ವಿತ ಕೆಲಸಗಾರರ ಪಾತ್ರ ಅತ್ಯಂತ ಮುಖ್ಯವಾದುದು. ಇಂಥ ಪ್ರತಿಭಾನ್ವಿತರ ಲಭ್ಯತೆಯಿಂದಾಗಿಯೇ ಮೈಸೂರು ಕ್ಲಸ್ಟರ್ ಈ ಮಟ್ಟದ ಬೆಳವಣಿಗೆ ಸಾಧಿಸಲು ಸಾಧ್ಯವಾಗುತ್ತಿದೆ.

ಮೈಸೂರು–ಉದಯೋನ್ಮುಖ ಸ್ಟಾರ್ಟ್ ಅಪ್ ಹಬ್: ಮೈಸೂರು ಕ್ಲಸ್ಟರ್ ಅನುಕೂಲಕರವಾದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ಹೊಂದಿದ್ದು, ಇನ್ನೂ ಹೆಚ್ಚಿನ ಹೂಡಿಕೆ ಅವಕಾಶಗಳು ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಭರವಸೆ ಮೂಡಿಸಿದೆ. ಬಿಯಾಂಡ್ ಬೆಂಗಳೂರು ಸ್ಟಾರ್ಟ್–ಅಪ್ ಗ್ರಿಡ್‌ನಲ್ಲಿ ಮೈಸೂರು ಕ್ಲಸ್ಟರ್ ಒಂದರಲ್ಲೇ 120 ಸ್ಟಾರ್ಟ್–ಅಪ್‌ಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಈ ಪೈಕಿ ಮಹಿಳಾ ನೇತೃತ್ವದ ಸ್ಟಾರ್ಟ್ ಅಪ್‌ಗಳು ಶೇ.15ರಷ್ಟಿವೆ.

> "ಕರ್ನಾಟಕದ ಉದ್ಯಮ ಸ್ನೇಹಿ ನೀತಿಗಳಿಂದಾಗಿ ನಮ್ಮ ಕ್ಲಸ್ಟರ್‌ಗಳಿಗೆ ಗ್ಲೋಬಲ್ ಕೇಪಬಿಲಿಟಿ ಸೆಂಟರ್ (ಜಿಸಿಸಿ)ಗಳನ್ನು ಆಕರ್ಷಿಸಲು ಸಾಧ್ಯವಾಗುತ್ತಿದೆ. ಈ ನಿಟ್ಟಿನಲ್ಲಿ ನ್ಯಾಸ್ಕಾಂ ಜಿಸಿಸಿ ಸದಸ್ಯರ ಪ್ರಯತ್ನಗಳು ಶ್ಲಾಘನೀಯ. ನಮ್ಮ ರಾಜ್ಯದ ಉದಯೋನ್ಮುಖ ಟೆಕ್ ಕ್ಲಸ್ಟರ್‌ಗಳ ವಿಶೇಷತೆಯನ್ನು ತಿಳಿಯಲು ಖುದ್ದು ಭೇಟಿ ನೀಡುವಂತೆ ಎಲ್ಲಾ ಜಾಗತಿಕ ಉದ್ಯಮಗಳನ್ನು ಸರ್ಕಾರದ ವತಿಯಿಂದ ಆಹ್ವಾನಿಸುತ್ತೇನೆ.
> **–ಏಕರೂಪ್ ಕೌರ್, ಐಟಿ–ಬಿಟಿ, ವಿಜ್ಞಾನ–ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ**

> "ಬಿಯಾಂಡ್ ಬೆಂಗಳೂರು ಪರಿಕಲ್ಪನೆ ಸಾಕಾರಗೊಂಡಿದೆ. ಕಳೆದ 18 ತಿಂಗಳುಗಳಲ್ಲಿ 45ಕ್ಕೂ ಹೆಚ್ಚು ಕಂಪನಿಗಳು ಈ ಕ್ಲಸ್ಟರ್‌ಗಳಲ್ಲಿ ತಮ್ಮ ಕಾರ್ಯಾಚರಣೆಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಟ್ಟಿದ್ದೇವೆ. ಇತ್ತೀಚೆಗೆ ಕೇನ್ಸ್ ಟೆಕ್ನಾಲಜೀಸ್‌ನ ವಿಸ್ತರಣಾ ಯೋಜನೆ ಆರಂಭಕ್ಕೆ ಸಹಕರಿಸಿದ್ದೇವೆ. ಮುಂಬರುವ ದಿನಗಳಲ್ಲಿ ಕ್ಲಸ್ಟರ್‌ಗೆ ಇನ್ನೂ ಹೆಚ್ಚಿನ ಬಂಡವಾಳ ಆಕರ್ಷಿಸುವ ವಿಶ್ವಾಸ ನಮಗಿದೆ. **– ಸಂಜೀವ್ ಗುಪ್ತಾ, ಕೆಡಿಇಎಂನ ಸಿಇಓ**

> "ಜಿಸಿಸಿ 4.0ನ ನೀಲನಕ್ಷೆಯನ್ನು ಮರು ವ್ಯಾಖ್ಯಾನಿಸಲಾಗುತ್ತಿದೆ, ಇಂಥ ಮಹತ್ವದ ಬದಲಾವಣೆಯಲ್ಲಿ ತರುವಲ್ಲಿ ನಾವು ಮುಂಚೂಣಿಯಲ್ಲಿದೆ. ದೇಶದ ಜಿಸಿಸಿ ಪರಿಸರ ವ್ಯವಸ್ಥೆಯಲ್ಲಿ, ವಿವಿಧ ಸಂಸ್ಥೆಗಳು ಪರಿವರ್ತಕ ಉಪಕ್ರಮಗಳನ್ನು ಕೈಗೊಂಡು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಇದರಿಂದಾಗಿಯೇ ಕ್ಲಸ್ಟರ್‌ಗಳು ಇಂದು ನಾವೀನ್ಯತೆ ಕೇಂದ್ರಗಳಾಗುತ್ತಿವೆ.
> **–ಭಾಸ್ಕರ್ ವರ್ಮಾ, ನ್ಯಾಸ್‌ಕಾಂನ ಪ್ರಾದೇಶಿಕ ಮುಖ್ಯಸ್ಥರು**

ಐಟಿ ಪಾರ್ಕ್‌ಗಳಾದ ಗ್ಲೋಬಲ್ ಟೆಕ್ನಾಲಜಿ ಸೆಂಟರ್, ರಿನೈಸಾನ್ಸ್ ಐಟಿ ಇನ್‌ಫ್ರಾ ಪಾರ್ಕ್ ಮತ್ತು ಗೋಪಾಲನ್ ಇನ್‌ಫ್ರಾ ಸಹ ಈ ಕ್ಲಸ್ಟರ್‌ನ ಬೆಳವಣಿಗೆಗೆ ಪೂರಕವಾಗಿದ್ದು, ಇವು ಜಿಸಿಸಿಗಳು ಮತ್ತು ಸ್ಟಾರ್ಟ್ ಅಪ್‌ಗಳನ್ನು ಆಕರ್ಷಿ ಸುತ್ತವೆ. ನ್ಯಾಸ್ಕಾಂನ ಜಿಸಿಸಿ ಸದಸ್ಯರು ಈ ಕ್ಯಾಂಪಸ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಭೆಯಲ್ಲಿ ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ ಕೌರ್, ಕೆಡಿಇಎಂನ ಸಿಇಓ ಸಂಜೀವ್ ಗುಪ್ತಾ, ಕೆಡಿಇಎಂ ಮೈಸೂರು ಕ್ಲಸ್ಟರ್‌ನ ಸುಧನ್ವ ಧನಂಜಯ, ನ್ಯಾಸ್‌ಕಾಂನ ಪ್ರಾದೇಶಿಕ ಮುಖ್ಯಸ್ಥ ಭಾಸ್ಕರ್ ವರ್ಮಾ ಹಾಗೂ ಉದ್ಯಮದ ಮುಖಂಡರು ಪಾಲ್ಗೊಂಡಿದ್ದರು.

ಚಂದ್ರಯಾನ–3 ಯಶಸ್ವಿ: ಮಕ್ಕಳಿಗೆ ವಿಕ್ರಮ್, ಪ್ರಜ್ಞಾನ್ ಎಂದು ನಾಮಕರಣ ಮಾಡಿದ ಪೋಷಕರು

ಯಾದಗಿರಿ,ಆ.26–ಭಾರತದ ಬಹುನಿರೀಕ್ಷಿತ ಚಂದ್ರಯಾನ–3 ಯೋಜನೆ ಯಶಸ್ವಿಯಾಗಿದೆ. ವಿಕ್ರಮ್ ಲ್ಯಾಂಡರ್ ಚಂದ್ರ ಮೇಲ್ಮೈ ಮೇಲೆ ಸಾಫ್ಟ್ ಲ್ಯಾಂಡಿಂಗ್ ಮಾಡಿದೆ. ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲೆ ಇಳಿದ ಕೆಲವೇ ಗಂಟೆಗಳಲ್ಲಿ, ಲ್ಯಾಂಡರ್‌ನಿಂದ ಪ್ರಜ್ಞಾನ್ ರೋವರ್ ಹೊರಬಂದು ಅನ್ವೇಷಣೆ ಪ್ರಾರಂಭಿಸಿದೆ.



ಈ ಸಂಬಂಧ ಇಸ್ರೋ ವಿಜ್ಞಾನಿಗಳ ಸಾಧನೆಯನ್ನು ಇಡೀ ವಿಶ್ವವೇ ಕೊಂಡಾಡುತ್ತಿದೆ. ಈ ಐತಿಹಾಸಿಕ ಚಂದ್ರಯಾನದ ಸವಿನೆನಪಿಗಾಗಿ ಇಬ್ಬರು ಪೋಷಕರು ತಮ್ಮ ನವಜಾತ ಶಿಶುಗಳಿಗೆ ವಿಕ್ರಮ್ ಮತ್ತು ಪ್ರಜ್ಞಾನ್ ಎಂದು ನಾಮಕರಣ ಮಾಡಿದ್ದಾರೆ.

ಯಾದಗಿರಿ ಜಿಲ್ಲೆಯ ವಡಗೇರಾ ಪಟ್ಟಣದಲ್ಲಿ ಒಂದೇ ಕುಟುಂಬದಲ್ಲಿ ಜನಿಸಿದ ಇಬ್ಬರು ಮಕ್ಕಳಿಗೆ ವಿಕ್ರಮ್ ಮತ್ತು ಪ್ರಜ್ಞಾನ್ ಎಂದು ಹೆಸರಿಡಲಾಗಿದೆ. ಬಾಲಪ್ಪ ಹಾಗೂ ನಾಗಮ್ಮ ದಂಪತಿಯ ಮಗುವಿಗೆ ವಿಕ್ರಮ್ ಎಂದು ಹೆಸರಿಡಲಾಗಿದ್ದು, ನಿಂಗಪ್ಪ ಹಾಗೂ ಶಿವಮ್ಮ ದಂಪತಿಯ ಮಗುವಿಗೆ ಪ್ರಜ್ಞಾನ್ ಎಂದು ನಾಮಕರಣ ಮಾಡಲಾಗಿದೆ.

ವಿಕ್ರಮ್ ಹೆಸರಿನ ಮಗು ಜು.28ರಂದು ಹಾಗೂ ಪ್ರಜ್ಞಾನ್ ಹೆಸರಿನ ಮಗು ಆ.14ರಂದು ಜನಿಸಿದೆ. ಈ ಎರಡು ಮಕ್ಕಳ ನಾಮಕರಣವನ್ನು ಆ.24ರಂದು ಮಾಡಲಾಗಿತ್ತು. ಭಾರತದ ಐತಿಹಾಸಿಕ ಸಾಧನೆಯ ಸವಿನೆನಪಿಗಾಗಿ ಮತ್ತು ಚಂದ್ರಯಾನ 3 ಯಶಸ್ವಿಗೊಳಿಸಿದ ಇಸ್ರೋಗೆ ಅಭಿನಂದನೆ ಸಲ್ಲಿಸಲು ಈ ಹೆಸರುಗಳನ್ನು ಇಟ್ಟಿರುವುದಾಗಿ ಪೋಷಕರು ತಿಳಿಸಿದ್ದಾರೆ.

ಇಂದು ಕಾನೂನು ಅರಿವು–ನೆರವು ಕಾರ್ಯಕ್ರಮ

ಹೆಚ್.ಡಿ.ಕೋಟೆ,ಆ.26–ಮೈಸೂರಿನ ವಿಕಾಸ ಟ್ರಸ್ಟ್, ಮೈಸೂರು ವಕೀಲರ ಸಂಘ, ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಮೈಸೂರು ವಿವಿಯ ಸಮಾಜ ಸೇವಾ ಕಾರ್ಯ ಅಧ್ಯಯನ ವಿಭಾಗದ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಮೇಟಿಕುಪ್ಪೆ ಹಾಡಿಯಲ್ಲಿರುವ ಸರ್ಕಾರಿ ಬುಡಕಟ್ಟು ಆಶ್ರಮ ಶಾಲೆಯಲ್ಲಿ ನಾಳೆ (ಭಾನುವಾರ) ಮಧ್ಯಾಹ್ನ 2 ಗಂಟೆಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಅವರು ಉದ್ಘಾಟಿಸಲಿದ್ದು, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಕಾಸ ಟ್ರಸ್ಟ್ ಅಧ್ಯಕ್ಷ ಆ.ಮ.ಭಾಸ್ಕರ್ ಪ್ರಾಸ್ತಾವಿಕ ನುಡಿ ನುಡಿಯಲಿದ್ದಾರೆ. ಶೀಘ್ರಗತಿ ನ್ಯಾಯಾಲಯ 1ರ ನ್ಯಾಯಾಧೀಶರಾದ ಶ್ರೀಮತಿ ಶೈಮಾ ಖಮ್ರೋಜ್ ಅವರು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ ಕುರಿತು ಉಪನ್ಯಾಸ ನೀಡಲಿದ್ದಾರೆ. ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ದಿನೇಶ್, ಹೆಚ್.ಡಿ.ಕೋಡೆ ಜೆಎಂಎಫ್‌ಸಿ ನ್ಯಾಯಾಧೀಶರಾದ ಬಿ.ಸಂದೇಶ್ ಪ್ರಭು, ಮೈಸೂರು ವಿವಿ ಸಮಾಜ ಸೇವಾ ಕಾರ್ಯ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಪಿ.ಜ್ಯೋತಿ, ವಿಶೇಷ ಆಹ್ವಾನಿತರಾಗಿ ಹಾಗೂ ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಹೆಚ್.ಡಿ.ಕೋಟೆ ವಕೀಲರ ಸಂಘದ ಅಧ್ಯಕ್ಷ ಎ.ಸಿ.ರವಿಕುಮಾರ್, ಕಾರ್ಯದರ್ಶಿ ಹೆಚ್.ಎನ್.ದಿನೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಅಧಿಕೃತ ಕಚೇರಿ ಉದ್ಘಾಟನೆ ಸಂದರ್ಭದಲ್ಲಿ ಅವರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಎಸ್.ಆರ್.ರವಿಕುಮಾರ್ ಹಾಗೂ ರವಿ ಡೆಲ್ಲಿ ಮತ್ತಿತರರು ಅಭಿನಂದಿಸಿದರು.

ಆರಗ ಜ್ಞಾನೇಂದ್ರ ಹೇಳಿಕೆ ಖಂಡನೀಯ

ಮೈಸೂರು, ಆ. 26– ಮಾಜಿ ಸಚಿವ ಆರಗ ಜ್ಞಾನೇಂದ್ರ ಈ ಕೂಡಲೇ ಮಲ್ಲಿಕಾರ್ಜುನ ಖರ್ಗೆ ಅವರಲ್ಲಿ ಕ್ಷಮಾಪಣೆ ಕೇಳಬೇಕು ಎಂದು ಜೈ ಭೀಮ್ ಜನ ಸ್ಪಂದನಾ ವೇದಿಕೆ ಅಧ್ಯಕ್ಷ ಕೆ.ಚೇತನ್ ಕಾಂತರಾಜ್ ಆಗ್ರಹಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಪ್ರಸ್ತಾಪಿಸಿ ಮೈಬಣ್ಣದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಇವರು, ದಲಿತ ಸಮುದಾಯದವರನ್ನು ಅವಮಾನಿಸಿದ್ದಾರೆ. ಈ ಕೂಡಲೇ ಅವರು ಕ್ಷಮಾಪಣೆ ಕೇಳಬೇಕು, ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ. ಮಲ್ಲಿಕಾರ್ಜುನ ಖರ್ಗೆ ಅವರು ಈ ದೇಶ ಕಂಡ ಉತ್ತಮ ರಾಜಕಾರಣಿಗಳಲ್ಲಿ ಒಬ್ಬರು. ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು. ಈಗ ರಾಜ್ಯ ಸಭೆಯಲ್ಲಿ ವಿಪಕ್ಷ ನಾಯಕರಾಗಿದ್ದಾರೆ. ಇಂತಹ ವ್ಯಕ್ತಿಯ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆಯಿಂದಿರಬೇಕು. ಆರಗ ಜ್ಞಾನೇಂದ್ರ ಕೂಡ ಸಾಮಾನ್ಯ ವ್ಯಕ್ತಿಯಲ್ಲ ಅವರು ಮಾಜಿ ಸಚಿವರಾಗಿದ್ದಾರೆ. ಇಂತಹ ಜವಾಬ್ದಾರಿ ಸ್ಥಾನದಲ್ಲಿರುವವರು ನಾಲಿಗೆ ಹರಿಬಿಟ್ಟರೆ ಹೇಗೆ? ಎಂದು ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಕೆ.ಚೇತನ್ ಕಾಂತರಾಜ್ ಕಿಡಿಕಾರಿದ್ದಾರೆ.

ಸಿಎಂ ತವರಲ್ಲಿ ಗೃಹಲಕ್ಷ್ಮಿ ಕಾರ್ಯಕ್ರಮ ಯಶಸ್ವಿಗೊಳಿಸಿ

- ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್
- ಕಾಂಗ್ರೆಸ್ ಅಧಿಕಾರಕ್ಕೆ ಬಂದು ಜನ ನೆಮ್ಮದಿಯಾಗಿದ್ದಾರೆ: ಕೆ.ಮರೀಗೌಡ



ಮೈಸೂರು, ಆ.26– ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಿದ್ದು, ಆ.30ರಂದು ನಡೆಯುವ ಗೃಹಲಕ್ಷ್ಮಿ ಯೋಜನೆಯ ಕಾರ್ಯಕ್ರಮವನ್ನು ದೇಶವೇ ತಿರುಗಿ ನೋಡುವಂತೆ ಯಶಸ್ವಿಗೊಳಿಸಬೇಕೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕರೆ ನೀಡಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಗೃಹಲಕ್ಷ್ಮಿ ಯೋಜನೆಯ ಅಧಿಕೃತ ಚಾಲನೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದ ಪಕ್ಷವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ 5 ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಕಾರ್ಯಕರ್ತರ ಶ್ರಮವೇ ಕಾರಣವಾಗಿದ್ದು, ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮಾತನಾಡಿ, ಇದು ಸಂಪೂರ್ಣ ಸರ್ಕಾರಿ ಕಾರ್ಯಕ್ರಮವಾಗಿದ್ದು, ಇದರ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವಹಿಸಲಾಗಿದೆ. ಈ ಕಾರ್ಯಕ್ರಮಕ್ಕೆ 1 ಲಕ್ಷಕ್ಕೂ ಅಧಿಕ ಜನ ಸೇರಲಿದ್ದು, ಪ್ರತೀ ಗ್ರಾಪಂಗೆ 3 ಬಸ್ಸುಗಳಂತೆ ಸರ್ಕಾರ 2 ಸಾವಿರ ಬಸ್ಸುಗಳನ್ನು ನೀಡುತ್ತಿದೆ. ಅಂಗನವಾಡಿ ಕಾರ್ಯಕರ್ತರ ಜೊತೆ ಕಾರ್ಯಕರ್ತರು ಸೇರಿಕೊಂಡು ಮಹಿಳೆಯರನ್ನು ಕಾರ್ಯಕ್ರಮಕ್ಕೆ ಕರೆದುಕೊಂಡು ಬರಬೇಕು. ಸಮಾರಂಭಕ್ಕೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಮಂತ್ರಿಗಳು, ಶಾಸಕರುಗಳು ಭಾಗವಹಿಸಲಿದ್ದಾರೆ. ಆದ್ದರಿಂದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಜನರಿಗೆ ನೆಮ್ಮದಿ: ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಮಾತನಾಡಿ, ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಆಧಾರಸ್ತಂಭವಾಗಿದ್ದು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಆರೂವರೆ ಕೋಟಿ ಜನರು ನೆಮ್ಮದಿಯಾಗಿದ್ದಾರೆ. ಸಿದ್ದರಾಮಯ್ಯನವರು ಜನತೆಗೆ ಮಾತು ಕೊಟ್ಟಂತೆ 5 ಗ್ಯಾರಂಟಿಗಳನ್ನು ಜಾರಿಗೊಳಿಸುತ್ತಿದ್ದಾರೆ. ಈ 5 ಗ್ಯಾರಂಟಿಗಳಿಂದ ರಾಜ್ಯದ ಬಡವರು ನೆಮ್ಮದಿಯಿಂದ ಬದುಕುತ್ತಿದ್ದಾರೆ. ಸಿದ್ದರಾಮಯ್ಯನವರು ವರುಣಾ ಕ್ಷೇತ್ರಕ್ಕೆ ಹೋದ ಮೇಲೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗಟ್ಟಿಯಾಗಿ ನಿಂತು 80 ಸಾವಿರ ಮತಗಳನ್ನು ಪಕ್ಷದ ಅಭ್ಯರ್ಥಿಗೆ ನೀಡಿದ್ದೀರಿ. ನಿಮಗೆ ಅನಂತ ಧನ್ಯವಾದಗಳು ಎಂದ ಅವರು, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕಾರ್ಯಕರ್ತರು ಶ್ರಮಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ರಾಜ್ಯ ಮಹಿಳಾ ಅಧ್ಯಕ್ಷೆ ಪುಷ್ಪಾ ಅಮರನಾಥ್, ಶಾಸಕ ಹರೀಶ್ ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಡಾ. ಬಿ.ಜೆ.ವಿಜಯಕುಮಾರ್, ಹೆಚ್.ಎ.ವೆಂಕಟೇಶ್, ಆರ್.ಮೂರ್ತಿ, ರೋಜಿಖಾನ್, ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಕೋಟೆಹುಂಡಿ ಮಹದೇವ, ಕೃಷ್ಣಕುಮಾರ್ ಸಾಗರ್, ಹಂಚ್ಯಾ ಸಣ್ಣಸ್ವಾಮಿ, ಕರೀಗೌಡ, ಮಾರ್ಬಳ್ಳಿ ಕುಮಾರ್, ಉದ್ಬೂರು ಕೃಷ್ಣ, ಪುಷ್ಪಲತಾ ಚಿಕ್ಕಣ್ಣ, ಲತಾ ಸಿದ್ದಶೆಟ್ಟಿ, ಮೋದಾಮಣಿ, ನಾಡನಹಳ್ಳಿ ರವಿ, ಹೊಸಹುಂಡಿ ರಘು, ಹುಣಸೂರು ಬಸವಣ್ಣ, ಮಂಜುಳಾ ಮಂಜುನಾಥ್, ಹೊನ್ನಪ್ಪ, ಮಂಜುಳಾ, ಛಾಯಾ, ಕಮಲಾ, ಹರೀಶ್ ಮೊಗಣ್ಣ, ರವಿ, ಜಿ.ಕೆ.ಬಸವಣ್ಣ, ಎಂ.ಟಿ.ರವಿಕುಮಾರ್, ಸಿದ್ದರಾಮೇಗೌಡ, ಹಿನಕಲ್ ಪ್ರಕಾಶ್, ಉದಯ್, ಕೆ.ಹೆಬ್ಬಾಳೇಗೌಡ, ಮಾಕಿ ಮಹದೇವ್ ಹಾಜರಿದ್ದರು.

ಕೆಆರ್‌ಎಸ್‌ಗೆ ಮುತ್ತಿಗೆ ಯತ್ನ; ಕನ್ನಡಪರ ಸಂಘಟನೆ ಕಾರ್ಯಕರ್ತರ ಬಂಧನ, ಬಿಡುಗಡೆ

ಶ್ರೀರಂಗಪಟ್ಟಣ,ಆ26– ತಾಲೂಕಿನ ಕೆ.ಆರ್.ಸಾಗರ ಅಣೆಕಟ್ಟೆಯಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕನ್ನಡಿಗರ ರಕ್ಷಣಾ ವೇದಿಕೆ ನೇತೃತ್ವದಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಅಣೆಕಟ್ಟೆ ಮುಖ್ಯದ್ವಾರ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ, ಅಣೆಕಟ್ಟೆ ಒಳ ನುಗ್ಗಲು ಯತ್ನಿಸಿದಾಗ ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.



ಕನ್ನಡಿಗ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ಟಿ. ಕನ್ನಡ ಪ್ರಕಾಶ್ ನೇತೃತ್ವದಲ್ಲಿ, ಕಸ್ತೂರಿ ಕನ್ನಡ ಜನಪರ ಸಂಘಟನೆ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಬಿಮಾನ ಬಣ, ಕರ್ನಾಟಕ ನವ ನಿರ್ಮಾಣ ವೇದಿಕೆ, ಸೇರಿದಂತೆ ವಿವಿಧ ಸಂಘಟೆಗಳ ನೂರಕ್ಕೂ ಹೆಚ್ಚು ಪದಾಧಿಕಾರಿಗಳು ಮುತ್ತಿಗೆ ಮಾಡಲು ಯತ್ನಿಸಿದಾಗ ಬಂಧಿಸಲಾಯಿತು.

ರೈತರಿಗೆ ದ್ರೋಹ ಮಾಡಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮೇಕೆದಾಟು ಯೋಜನೆ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಂಡ್ಯ ಜಿಲ್ಲಾ ಉಸ್ತುವಾರಿ ಕೃಷಿ ಸಚಿವ ಚೆಲುವರಾಯಸ್ವಾಮಿ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ತಮ್ಮ ಅಧಿಕಾರದ ಆಸೆಗಾಗಿ ತಮಿಳುನಾಡಿಗೆ ನೀರು ಹರಿಸುತ್ತಿದ್ದು, ರೈತರಿಗೆ ಮೋಸ ಮಾಡಿದ್ದಾರೆ ಎಂದು ಅವರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೆ.ಆರ್.ಸಾಗರ ಅಣೆಕಟ್ಟೆಯಿಂದ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಂಡು ನೀರು ಬಿಡುವ ಮೂಲಕ ರೈತ ವಿರೋಧಿಯಾಗಿರುವ ರಾಜ್ಯ ಸರ್ಕಾರ ರೈತರಿಗೆ ಮರಣ ಶಾಸನ ಬರೆದಿದೆ. ಕಾವೇರಿ ಕೊಳ್ಳದ ಜಲಾಶಯಗಳು ಭರ್ತಿಯಾಗಿಲ್ಲ, ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ರೈತರು ಬೆಳೆದಿರುವ ಬೆಳೆ ರಕ್ಷಣೆ ಮಾಡಲು ನೀರು ಸಾಲುತ್ತಿಲ್ಲ. ಹೊಸ ಬೆಳೆಗೆ ನೀರಿಲ್ಲದ ಪರಿಸ್ಥಿತಿ ಎದುರಾಗಿದ್ದು, ಇಂತಹ ಸಂದರ್ಭದಲ್ಲಿ ಸತತವಾಗಿ ಸುಮಾರು 15 ಟಿ.ಎಂ.ಸಿ ನೀರು ಹರಿಸಿ ಜಲಾಶಯ ಬರಿದು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀರು ಬಿಡುವಂತೆ ಯಾವುದೇ ಆದೇಶ ನೀಡಿರದಿದ್ದರೂ ತನ್ನ ರಾಜಕೀಯ ಉದ್ದೇಶಕ್ಕಾಗಿ ಕನ್ನಡಿಗರನ್ನು ಬಲಿಕೊಟ್ಟು ತಮಿಳುನಾಡಿನ ಜನರನ್ನು ಒಲೈಸಿಕೊಳ್ಳಲು ನೀರು ಬಿಟ್ಟಿರುವ ಸರ್ಕಾರಕ್ಕೆ ಕನ್ನಡನಾಡಿನ ರೈತರ ಬಗ್ಗೆ ಅಭಿಮಾನ ಇಲ್ಲದಂತಾಗಿದೆ ಎಂದು ಕನ್ನಡಿಗರ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ಟಿ. ಕನ್ನಡ ಪ್ರಕಾಶ ಆಕ್ರೋಶ ವ್ಯಕ್ತಪಡಿಸಿದರು.

ಸುಮಾರು ಒಂದು ತಾಸಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿ, ಅಣೆಕಟ್ಟೆಗೆ ಮುತ್ತಿಗೆ ಹಾಕಿ ಒಳನುಗ್ಗಲು ಯತ್ನಿಸಿದಾಗ ಮಂಡ್ಯ ಜಿಲ್ಲಾ ಅಪರ ಪೊಲೀಸ್ ವರಿಷಾಧಿಕಾರಿ ತಿಮ್ಮಯ್ಯ ನೇತೃತ್ವದಲ್ಲಿ ಪೊಲೀಸರು ಹೋರಾಟಗಾರರನ್ನು ಬಂಧಿಸಿ ಕರೆದೊಯ್ದರು.

ಈ ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳಾದ ಕೃಷ್ಣೇಗೌಡ, ಆನಂದ, ನಿಲೇಶ್‌ಗೌಡ, ನರಸಿಂಹಮೂರ್ತಿ, ಲೊಕೇಶ್ ಗೌಡ, ರಮೇಶ್ ಗೌಡ, ಸುರೇಶ ಗೌಡ, ಶಿವರಾಜೇಗೌಡ ಕನ್ನಡಿಗರ ರಕ್ಷಣಾ ವೇದಿಕೆ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಶಾಂತರಾಜು ಸೇರಿದಂತೆ ಹಲವಾರು ಕಾರ್ಯಕರ್ತರು ಇದ್ದರು.

ಚಂದ್ರಯಾನ–3 ಯಶಸ್ಸಿನಲ್ಲಿ ಕೆ.ಆರ್.ಪೇಟೆ ತಾಲೂಕಿನ ಇಬ್ಬರು ಯುವ ವಿಜ್ಞಾನಿಗಳು

ಕೆಆರ್.ಪೇಟೆ, ಆ.26– ಚಂದ್ರಯಾನ–3ರ ಯಶಸ್ವಿ ಕಾರ್ಯಾಚರಣೆಯಲ್ಲಿ ತಾಲೂಕಿನ ಯುವ ವಿಜ್ಞಾನಿಗಳಾದ ಆಕಾಶ್ ಮತ್ತು ವಿನೋದ್ ರಾಜ್ ಪಾಲ್ಗೊಳ್ಳುವ ಮೂಲಕ ತಾಲೂಕಿನ ಕೀರ್ತಿಯನ್ನು ಬೆಳಗಿದ್ದಾರೆ.



ವಿನೋದ್ ರಾಜ್



ಆಕಾಶ್

ಕೆ.ಆರ್.ಪೇಟೆ ಪಟ್ಟಣದ ಜಯನಗರ ಬಡಾವಣೆಯ ನಿವಾಸಿ ದಿವಂಗತ ಟೈಲರ್ ಬಾಲಾಜಿ ಮತ್ತು ಭಾಗ್ಯಮ್ಮ ದಂಪತಿ ಪುತ್ರ ಆಕಾಶ್ ಇಸ್ರೋದಲ್ಲಿ ತಾಂತ್ರಿಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಪ್ರಾಥಮಿಕ ಶಿಕ್ಷಣವನ್ನು ಹೊಸಹೊಳಲು ಸರ್ಕಾರಿ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾಡಿ, ಕೆಆರ್.ಪೇಟೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಮುಗಿಸಿ, ನಂತರ ಮೈಸೂರಿನ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿದರು. 2008 ಎಪ್ರಿಲ್ ತಿಂಗಳಿನಲ್ಲಿ ಇಸ್ರೋ ಅಂಗಸಂಸ್ಥೆ ಇಸ್ಟ್ರಾಕ್ ಮೂಲಕ ತಾಂತ್ರಿಕ ವಿಭಾಗಕ್ಕೆ ಆಯ್ಕೆಯಾಗಿ ಮಾರ್ಗದರ್ಶಕರ ಸೂಚನೆಯಂತೆ ಕರ್ತವ್ಯ ನಿರ್ವಹಿಸುತ್ತಿರುವ ಆಕಾಶ್, ಪ್ರಸ್ತುತ ಚಂದ್ರಯಾನ–3 ಕಾರ್ಯಾಚರಣೆಯಲ್ಲಿ ತಾಂತ್ರಿಕ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದು ಚಂದ್ರಯಾನ–3 ಯಶಸ್ಸಿನಲ್ಲಿ ಪಾಲು ಪಡೆದಿದ್ದಾರೆ.

ಅದೇ ರೀತಿ ಕೆಆರ್.ಪೇಟೆ ತಾಲೂಕಿನ ಕಸಬಾ ಹೋಬಳಿಯ ತೆರ್ನೇನಹಳ್ಳಿ ಗ್ರಾಮದ ರೈತ ಜಯರಾಂ ಮತ್ತು ರತ್ನಮ್ಮ ದಂಪತಿ ಪುತ್ರ ವಿನೋದ್ ರಾಜ್ ಸ್ವಗ್ರಾಮ ತೆರ್ನೇನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣವನ್ನು ಬೊಮ್ಮೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹಾಗೂ ಪ್ರೌಢ ಶಿಕ್ಷಣವನ್ನು ಹರಿಹರಪುರ ಸರ್ಕಾರಿ ಪ್ರೌಢಶಾಲೆಯಲ್ಲಿ, ತಾಂತ್ರಿಕ ಶಿಕ್ಷಣವನ್ನು ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಹಾಗೂ ಇಂಜಿನಿಯರಿಂಗ್ ಶಿಕ್ಷಣವನ್ನು ಮಂಡ್ಯದ ಪಿಇಎಸ್ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ 2013 ರಲ್ಲಿ ಇಸ್ರೋದಲ್ಲಿ ಕೆಲಸಕ್ಕೆ ಸೇರಿದರು. ಚಂದ್ರಯಾನ–2 ರಲ್ಲಿಯೂ ಇವರು ಭಾಗಿಯಾಗಿದ್ದರು, ಪ್ರಸ್ತುತ ಚಂದ್ರಯಾನ–3 ರಲ್ಲಿ ಡೀಪ್ ಸ್ಪೇಸ್ ನೆಟ್ ವರ್ಕ್ ವಿಭಾಗದಲ್ಲಿ ಆಂಟೇನಾ ಡಿಸೈನಿಂಗ್ ಕ್ಷೇತ್ರದಲ್ಲಿ ತಮ್ಮ ಮಾರ್ಗದರ್ಶಕರ ಹಾಗೂ ತಂಡದ ಸದಸ್ಯರೊಂದಿಗೆ ಕೆಲಸ ನಿರ್ವಹಿಸುತ್ತಿದ್ದಾರೆ.

ಗ್ರಾಮೀಣ ಪ್ರತಿಭೆಗಳಾಗಿ ಕಷ್ಟಪಟ್ಟು ವ್ಯಾಸಂಗ ಮಾಡಿ, ವಿಜ್ಞಾನ ಕ್ಷೇತ್ರದಲ್ಲಿ ಇರುವ ಅವಕಾಶಗಳನ್ನು ಬಳಸಿಕೊಂಡು ಸಾಧನೆ ಮಾಡಿದ ಆಕಾಶ್ ಮತ್ತು ವಿನೋದ್ ರಾಜ್ ಅವರನ್ನು ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ನಾರಾಯಣಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬಿ.ಎಲ್.ದೇವರಾಜ್, ಜಾನಕಿ ರಾಮ್, ಸಮಾಜ ಸೇವಕರಾದ ಆರ್.ಟಿ.ಓ ಅಧಿಕಾರಿ ಮಲ್ಲಿಕಾರ್ಜುನ್, ಮಿತ್ರ ಫೌಂಡೇಷನ್ ಸಂಸ್ಥೆಯ ಅಧ್ಯಕ್ಷ ವಿಜಯ್ ರಾಮೇಗೌಡ, ಮನ್‌ಮುಲ್ ನಿರ್ದೇಶಕ ಡಾಲು ರವಿ, ತಾಲೂಕು ಕುವೆಂಪು ಕನ್ನಡ ಗೆಳೆಯದ ಬಳಗ ಸೇವಾ ಟ್ರಸ್ಟಿನ ಅಧ್ಯಕ್ಷ ಕೆಬಿಸಿ ಮಂಜುನಾಥ್, ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್ ತಾಲೂಕು ಅಧ್ಯಕ್ಷರಾದ ಹೆಚ್.ಕೆ.ಮಂಜುನಾಥ್, ಟಿ.ವೈ.ಆನಂದ್, ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷ ದಿವಿಕುಮಾರ್, ಗ್ರಾಪಂ ಸದಸ್ಯ ಚಿಲ್ಲದಹಳ್ಳಿ ಶ್ರೀನಿವಾಸ್ ಸೇರಿದಂತೆ ಹಲವು ಗಣ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಮಳೆ ಕೊರತೆಯಾದಾಗ ತಮಿಳುನಾಡಿಗೆ ಬಿಡುವ ನೀರಿನ ಬಗ್ಗೆ ಸ್ಪಷ್ಟತೆ ಇಲ್ಲ

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕೃಷ್ಣ

ಮಂಡ್ಯ,ಆ.26– ಮಳೆ ಕೊರತೆಯಾದಾಗ ಎಷ್ಟು ನೀರು ತಮಿಳುನಾಡಿಗೆ ಬಿಡಬೇಕು ಎಂಬ ಸ್ಪಷ್ಟತೆ ಇಲ್ಲದಿರುವುದರಿಂದ ತಮಿಳುನಾಡಿಗೆ ಬಿಡುತ್ತಿರುವ ನೀರಿನ ಬಗ್ಗೆ ರಾಜ್ಯ ಸರ್ಕಾರ ಮರುಪರಿಶೀಲನೆ ಮಾಡಬೇಕು ಎಂದು ಮೈಸೂರು ಸಕ್ಕರೆ ಕಾರ್ಖಾನೆ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಎಸ್.ಕೃಷ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಈಗಾಗಲೇ ತಮಿಳುನಾಡಿಗೆ ನೀರು ಹರಿಸುತ್ತಿದೆ. ಅಲ್ಲದೆ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಬಿಡಲಾಗುತ್ತಿದೆ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ ಸುಪ್ರೀಂ ಕೋರ್ಟ್‌ನಲ್ಲಿ ಜೂನ್‌ನಿಂದ ಜನವರಿ ವರೆಗೆ ಇಂತಿಷ್ಟು ಟಿಎಂಸಿ ನೀರು ಬಿಡುವ ಬಗ್ಗೆ ಆದೇಶವಾಗಿದೆ. ಆದರೆ ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿ ಮಳೆ ಪ್ರಮಾಣ ಕಡಿಮೆಯಾಗಿ ನೀರಿನ ಕೊರತೆ ಇದ್ದಲ್ಲಿ ಎಷ್ಟು ಪ್ರಮಾಣದ ನೀರು ತಮಿಳುನಾಡಿಗೆ ಬಿಡಬೇಕು ಎಂಬ ಸ್ಪಷ್ಟ ಆದೇಶ ಇರುವುದಿಲ್ಲ ಎಂದರು.

ಸರ್ಕಾರ ನೀರು ಬಿಟ್ಟಿರುವುದರಿಂದ ಕಾವೇರಿ ಜಲಾನಯನ ವ್ಯಾಪ್ತಿಯ ರೈತರು ಕಬ್ಬು ಬೆಳೆಯನ್ನೇ ಅವಲಂಬಿಸಿರುವುದ ರಿಂದ ಆರ್ಥಿಕವಾಗಿ ತುಂಬಾ ಸಂಕಷ್ಟಕ್ಕೆ ಒಳಗಾಗಿದ್ದು, ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ರೂ. ಪರಿಹಾರ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ಎಂ.ಜಿ.ನಾಗರಾಜು, ಬಿ.ಮಾದೇಗೌಡ, ಎಂ.ಎಲ್. ತುಳಸೀಧರ್, ಅಶೋಕ್ ಇದ್ದರು.

ಪ್ರಾಣಿಗಳೂ ತಿನ್ನಲು ಯೋಗ್ಯವಲ್ಲದ ಪಡಿತರ ವಿತರಣೆಯೇ ಸರ್ಕಾರದ ಸಾಧನೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ



ನಾಗಮಂಗಲ,ಆ.26– ಪ್ರಾಣಿಗಳೂ ತಿನ್ನಲು ಯೋಗ್ಯವಲ್ಲದ ಪಡಿತರವನ್ನು ರಾಜ್ಯದ ಬಿಪಿಎಲ್ ಕಾರ್ಡ್‌ದಾರರಿಗೆ ವಿತರಣೆ ಮಾಡುತ್ತಿರುವುದೇ ಸರ್ಕಾರದ ಸಾಧನೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಶನಿವಾರ ತಾಲೂಕಿನ ಬೆಳ್ಳೂರು ಕ್ರಾಸ್‌ನಲ್ಲಿ ಮುಖಂಡರೊಬ್ಬರ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಪಡಿತರ ಫಲಾನುಭವಿಯೊಬ್ಬರು ಕಳಪೆ ಗುಣಮಟ್ಟದ ರಾಗಿಯನ್ನು ಪ್ರದರ್ಶಿಸಿದನ್ನು ಪರಿಶೀಲಿಸಿ ನಂತರ ಮಾತನಾಡಿದರು. ರಾಜ್ಯ ಸರ್ಕಾರದಿಂದ ಜನರಿಗೆ 3 ಕೆಜಿ ಅಕ್ಕಿ, 2 ಕೆಜಿ ರಾಗಿ ವಿತರಣೆ ಮಾಡಲಾಗುತ್ತಿದೆ. ಆದರೆ ನಾನು ಕೆಲವು ಹಳ್ಳಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರು ಸರ್ಕಾರದಿಂದ ವಿತರಣೆ ಮಾಡುತ್ತಿರುವ ಕಳಪೆ ಗುಣಮಟ್ಟದ ರಾಗಿಯನ್ನು ತೋರಿಸಿ ಸರ್ಕಾರದ ವಿರುದ್ಧ ದೂರು ಹೇಳುತ್ತಿದ್ದಾರೆ. ಪಡಿತರ ವಿತರಣೆಯಲ್ಲಿ ಪ್ರಾಣಿಗಳೂ ತಿನ್ನಲು ಸಾಧ್ಯವಾಗದಂತಹ ರಾಗಿಯನ್ನು ನೀಡಲಾಗುತ್ತಿದೆ ಎಂದು ಫಲಾನುಭವಿಗಳು ಸರ್ಕಾರದ ನಡವಳಿಕೆ ವಿರುದ್ಧ ಹೇಳುತ್ತಿದ್ದಾರೆ ಎಂದರು.

ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ರೈತರ ಹಸಿವು ನೀಗಿಸುತ್ತೇನೆಂದು ಹೇಳಿ ಈ ರೀತಿಯ ರಾಗಿಯನ್ನು ಜನರಿಗೆ ಕೊಟ್ಟು ಊಟ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ. ಉತ್ತಮ ಗುಣಮಟ್ಟದ ರಾಗಿ, ಅಕ್ಕಿ ನೀಡ ಬೇಕಿರುವುದು ಸರ್ಕಾರದ ಜವಬ್ದಾರಿಯಾಗಿದೆ. ಈ ರೀತಿಯ ಕಳಪೆ ಗುಣಮಟ್ಟದ ಪಡಿತರ ವಿತರಣೆ ಮಾಡಿ ಏನೋ ಸಾಧನೆ ಮಾಡಿದ್ದೇವೆ ಎಂದು ಕೇವಲ ಜಾಹೀರಾತು ಹಾಕಿಕೊಂಡು ಪೋಸ್ ನೀಡುವುದಲ್ಲ. ಜಾಹೀರಾತಿಗೆ ನಾಡಿನ ಜನತೆಯ ಕೋಟ್ಯಾಂತರ ರೂಪಾಯಿ ಹಣವನ್ನು ದುರ್ಬಳಕೆ ಮಾಡುತ್ತಿರುವುದನ್ನು ಮೊದಲು ನಿಲ್ಲಿಸಿ ವಾಸ್ತವಾಂಶದ ಕಡೆ ಸರ್ಕಾರ ಗಮನಹರಿಸಲಿ ಎಂದು ಆಗ್ರಹಿಸಿದರು.

ಕಳಪೆ ಗುಣಮಟ್ಟದ ರಾಗಿ ಪ್ರದರ್ಶನ: ತಾಲೂಕಿನ ಬೆಳ್ಳೂರು ಕ್ರಾಸ್‌ನ ಮುಖಂಡರ ಮನೆಯಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಕಾಳಿಂಗನಹಳ್ಳಿ ಪಿಎಸಿಎಸ್ ಪಡಿತರ ಕೇಂದ್ರದಲ್ಲಿ ವಿತರಣೆ ಮಾಡುತ್ತಿರುವ ಕಳಪೆ ಗುಣಮಟ್ಟ ಹಾಗೂ ಕಲ್ಲು–ಮಣ್ಣು ಮಿಶ್ರಿತ ರಾಗಿಯನ್ನು ಫಲಾನುಭವಿಯೋರ್ವ ಪ್ರದರ್ಶಿಸಿ ಕಾಂಗ್ರೆಸ್ ಸರ್ಕಾರ ಹಾಗೂ ಅಧಿಕಾರಿಗಳ ವಿರುದ್ಧ ದೂರಿದರು.

ತಹಸೀಲ್ದಾರ್ ಹಾಗೂ ಆಹಾರ ನಿರೀಕ್ಷಕರ ಗಮನಕ್ಕೆ: ಕಳಪೆ ಗುಣಮಟ್ಟದ ಪಡಿತರ ವಿತರಣೆ ವಿಚಾರವನ್ನು ತಂದರೆ ವಾಪಸ್ಸು ಕೊಟ್ಟುಹೋಗಿ ಎಂದು ಉಢಾಫೆಯಾಗಿ ಉತ್ತರಿಸುತ್ತಾರೆ ಎಂದು ಫಲಾನುಭವಿ ಸುರೇಶ್ ತಮ್ಮ ಅಳಲನ್ನು ವ್ಯಕ್ತಪಡಿಸಿದರು. ಇದಕ್ಕೆ ಮಾಜಿ ಶಾಸಕ ಸುರೇಶ್ ಗೌಡ ಧ್ವನಿಗೂಡಿಸಿ ಕಳೆದ 3 ತಿಂಗಳಿನಿಂದಲೂ ಇದೇ ರೀತಿಯ ಪಡಿತರ ವಿತರಣೆ ಮಾಡುತ್ತಿದ್ದಾರೆ ಎಂದು ಅನೇಕ ರೈತರು ಪ್ರತಿನಿತ್ಯ ದೂರು ಹೇಳುತ್ತಿದ್ದಾರೆ. ಈ ವಿಚಾರವಾಗಿ ಜಿಲ್ಲಾಧಿಕಾರಿ ಜತೆ ಮಾತನಾಡಿದ್ದೇನೆ ಎಂದರು. ನಂತರ ಕಳಪೆ ಗುಣಮಟ್ಟದ ರಾಗಿಯನ್ನು ಫಲಾನುಭವಿಯಿಂದ ಕುಮಾರಸ್ವಾಮಿ ಪಡೆದು ಪರಿಶೀಲನೆ ಮಾಡಿ, ಈ ರೀತಿಯ ರಾಗಿಯನ್ನು ಕೋಳಿಗೆ ತಿನ್ನಲು ಬಳಸುತ್ತಾರೆ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭ ಮಾಜಿ ಶಾಸಕ ಸುರೇಶ್‌ಗೌಡ, ಮುಖಂಡರಾದ ಗೌರೀಶ್, ಯೋಗೇಶ್, ಸುರೇಶ್, ಲೋಹಿತ್, ಚೇತನ್ ಇದ್ದರು.

ರಾಜ್ಯದ ಇಬ್ಬರಿಗೆ ಅತ್ಯುತ್ತಮ ಶಿಕ್ಷಕ, ಶಿಕ್ಷಕಿ ರಾಷ್ಟ್ರ ಪ್ರಶಸ್ತಿ

ಶಿರಸಿ/ ಮಹಾಲಿಂಗಪುರ, ಆ.26– ರಾಜ್ಯದ ಇಬ್ಬರು ಕೇಂದ್ರ ಸರ್ಕಾರದ 2023ನೇ ಸಾಲಿನ ಅತ್ಯುತ್ತಮ ಶಿಕ್ಷಕ, ಶಿಕ್ಷಕಿ ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಪನಾ ಶ್ರೀಶೈಲ ಅನಿಗೋಳ: ಮಹಾಲಿಂಗಪುರ ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿ ಸಪನಾ ಶ್ರೀಶೈಲ ಅನಿಗೋಳ ಅವರಿಗೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಎಂ.ಎಸ್ಸಿ. ಬಿ.ಇಡಿ ಪದವಿಧರರಾದ ಅನಿಗೋಳ ಅವರು ಕಳೆದ 19 ವರ್ಷಗಳಿಂದ ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆಧುನಿಕತೆಗೆ ತಕ್ಕಂತೆ ಹೊಸ ಬೋಧನಾ ಕೌಶಲ್ಯಗಳನ್ನು ಅಳವಡಿಸಿಕೊಂಡು ಸ್ಮಾರ್ಟ್‌ಕ್ಲಾಸ್, ಶೈಕ್ಷಣೀಕ ಆ್ಯಪ್, ಕಂಪ್ಯೂಟರ್ ಬಳಕೆ ಮಾಡಿಕೊಂಡು ಅತ್ಯಂತ ಕಠಿಣ ವಿಷಯಗಳನ್ನು ಮಕ್ಕಳ ಮನ ಮುಟ್ಟುವಂತೆ ತಿಳಿಸುತ್ತಾ ಸಾವಿರಾರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ವಿಜ್ಞಾನ ಶಿಕ್ಷಕಿಯಾಗಿದ್ದಾರೆ. ಎರಡು ವರ್ಷಗಳ ಹಿಂದೆ (2021) ರಾಜ್ಯ ಸರ್ಕಾರದಿಂದ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪಡೆದುಕೊಂಡಿದ್ದರು.

19 ವರ್ಷಗಳ ಕಾಲ ನಾನು ಸಲ್ಲಿಸಿದ ಶೈಕ್ಷಣೀಕ ಸೇವೆಯನ್ನು ಗುರುತಿಸಿ, ನನಗೆ ಕೇಂದ್ರ ಸರ್ಕಾರದಿಂದ ಪ್ರಸಕ್ತ ಸಾಲಿನ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಬಂದಿದ್ದು ಬಹಳ ಸಂತಸವಾಗಿದೆ. ಈ ಪ್ರಶಸ್ತಿಯು ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಭವಿಷ್ಯದಲ್ಲಿ ಮಕ್ಕಳಿಗೆ ಇನ್ನಷ್ಟು ಉತ್ತಮವಾಗಿ ಶಿಕ್ಷಣ ನೀಡಲು ಹಾಗೂ ಸಾಮಾಜಿಕ ಸೇವೆ ಸಲ್ಲಿಸಲು ಮತ್ತಷ್ಟು ಹುಮ್ಮಸ್ಸು ನೀಡಿದೆ ಎಂದು ಸಪನಾ ಶ್ರೀಶೈಲ ಅನಿಗೋಳ ಸಂತಸ ವ್ಯಕ್ತವಾದಿಸಿದ್ದಾರೆ.

ನಾರಾಯಣ ಭಾಗವತ್: ಶಿರಸಿಯ ಮಾರಿಕಾಂಬಾ ಪ್ರೌಢ ಶಾಲೆಯ ಕನ್ನಡ ಶಿಕ್ಷಕ, ರಂಗಕರ್ಮಿ ನಾರಾಯಣ ಭಾಗವತ್ ಅವರಿಗೆ ರಾಷ್ಟ್ರ ಮಟ್ಟದಲ್ಲಿ ನೀಡಲಾಗುವ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಒಲಿದಿದೆ. ರಂಗಭೂಮಿಯಲ್ಲಿ ಆಸಕ್ತಿ ಹೊಂದಿದ ನಾರಾಯಣ ಭಾಗವತ್ ಅವರು ಅನೇಕ ಶೈಕ್ಷಣಿಕ ಪ್ರಯೋಗಗಳ ಜೊತೆ ಕನ್ನಡ ಭಾಷಾ ಪ್ರಯೋಗದಲ್ಲೂ ಕೆಲಸ ಮಾಡಿ ದ್ದಾರೆ. ಕಳೆದ ವರ್ಷ ಇವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಕೂಡ ಲಭಿಸಿತ್ತು. ರಾಷ್ಟ್ರ ಮಟ್ಟದಲ್ಲಿ ವಿಜ್ಞಾನ ನಾಟಕದಲ್ಲೂ ರಾಷ್ಟ್ರ ಮಟ್ಟದ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಲಭಿಸಿತ್ತು.

ಒಂದನೇ ಪುಟದಿಂದ

ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ಉದ್ಯೋಗ

ಶಿವಕುಮಾರ್ ತಿಳಿಸಿದರು. ಇದೇ ವೇಳೆ ರೇಣುಕಾಚಾರ್ಯ ಭೇಟಿ ವಿಚಾರದ ಕುರಿತು ಮಾತನಾಡಿದ ಅವರು, ನಾನು ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷ. ಹಾಗಾಗಿ ಅವರ ಕ್ಷೇತ್ರದ ಸಮಸ್ಯೆ ಬಗ್ಗೆ ಚರ್ಚಿಸಲು ಬಂದಿದ್ದರು ಎಂದು ಸ್ಪಷ್ಟನೆ ನೀಡಿದರು.

ಪಕ್ಷಕ್ಕೆ ಬರುವವರಿಗೆ ಸ್ವಾಗತ: ನಮಗೆ ಆಪರೇಷನ್ ಹಸ್ತದ ಅವಶ್ಯಕತೆ ಇಲ್ಲ. ಬೇರೆ ಪಕ್ಷದ ನಾಯಕರು ಅಥವಾ ಕಾರ್ಯಕರ್ತರು ನಮ್ಮ ಪಕ್ಷದ ತತ್ವಾದರ್ಶ ಒಪ್ಪಿಕೊಂಡು ಬಂದರೆ ಅವರನ್ನು ಸ್ವಾಗತಿಸುತ್ತೇವೆ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷಕ್ಕೆ ಬಲ ತುಂಬುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಅಶೋಕ್‌ಗೆ ಮಾಹಿತಿಯಿಲ್ಲ: ಮೋದಿ ಭೇಟಿ ವೇಳೆ ಸಿಎಂ–ಡಿಸಿಎಂ ಅವರನ್ನು ಸ್ವಾಗತಿಸದ ಬಗ್ಗೆ ಅಶೋಕ್ ಟೀಕೆಗೆ ಪ್ರತಿಕ್ರಿಯೆ ನೀಡಿ, ಮೋದಿ ಭೇಟಿ ಬಗ್ಗೆ ರಾಜ್ಯ ಬಿಜೆಪಿ ನಾಯಕರಿಗೆ ಪ್ರಧಾನಿ ಕಾರ್ಯಾಲಯದಿಂದ ಮಾಹಿತಿಯನ್ನೇ ನೀಡಿಲ್ಲ. ಆರ್.ಅಶೋಕ್‌ಗೆ ಪ್ರಧಾನಿ ಭೇಟಿಯ ಸರಿಯಾದ ಮಾಹಿತಿಯೇ ಇಲ್ಲ! ಪ್ರಧಾನಿ ಕಾರ್ಯಕ್ರಮಕ್ಕೆ ಯಾರನ್ನು ಕರೆದಿದ್ದಾರೆ ಅನ್ನೋ ಮಾಹಿತಿನೇ ಇಲ್ಲಿನ ಬಿಜೆಪಿ ನಾಯಕರಿಗೆ ಇಲ್ಲ ಎಂದು ಟಾಂಗ್ ನೀಡಿದರು. ಸ್ವಾಗತಕ್ಕೆ ಸಿಎಂ, ಡಿಸಿಎಂ, ರಾಜ್ಯಪಾಲರು ಬರುವುದು ಬೇಡವೆಂದು ಪ್ರಧಾನಮಂತ್ರಿ ಕಚೇರಿಯೇ ಸೂಚಿಸಿದೆ. ಆದರೆ ಇಲ್ಲಿ ಶಿಷ್ಟಾಚಾರ ಪಾಲನೆ ಮಾಡಿಲ್ಲವೆಂದು ಅಶೋಕ್ ಹೇಳುತ್ತಿದ್ದಾರೆ. ಏನೋ ಪ್ರಚಾರಕ್ಕೆ ಮಾತಾಡಬೇಕು ಅಂತ ಮಾಧ್ಯಮದವರ ಮುಂದೆ ಸುಖಾಸುಮ್ಮನೆ ಮಾತನಾಡಿದ್ದಾರೆ ಅಷ್ಟೇ. ನಾವು ಕಾಂಗ್ರೆಸ್‌ನವರು ಎಲ್ಲಾ ರೀತಿಯ ಪ್ರೋಟೊಕಾಲ್ ಪಾಲಿಸುತ್ತೇವೆ ಎಂದರು.

ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಅದ್ಧೂರಿಯಾಗಿ ಸ್ವಾಗತಿಸಿದರು. ಈ ವೇಳೆ ಶಾಸಕರಾದ ಸಿ. ಪುಟ್ಟರಂಗ ಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್, ಎಚ್.ಎಂ.ಗಣೇಶ ಪ್ರಸಾದ್, ಮುಖಂಡರಾದ ಕಾಗಲವಾಡಿ ಶಿವಣ್ಣ, ಮರಿಸ್ವಾಮಿ, ಬಿ.ಕೆ. ರವಿಕುಮಾರ್, ಹೊಂಗನೂರು ಚಂದ್ರು, ಗುರುಸ್ವಾಮಿ, ಉಮೇಶ್, ಚೇತನ್, ಚಿಕ್ಕ ಮಹದೇವು ಸೇರಿದಂತೆ ಕಾಂಗ್ರೆಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.

ವರುಣ ಸರ್ಕಾರಿ ಪ್ರೌಢಶಾಲೆಗೆ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ

ಮೈಸೂರು,ಆ.26(ಎಸ್‌ಬಿಡಿ)– ಮೈಸೂರು ತಾಲೂಕಿನ ವರುಣ ಸರ್ಕಾರಿ ಪ್ರೌಢಶಾಲೆಗೆ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.



ವರುಣದಲ್ಲಿ ನಡೆದ ಕ್ರೀಡಾಕೂಟದಲ್ಲಿ ಹೋಬಳಿ ವ್ಯಾಪ್ತಿಯ ವಿವಿಧ ಶಾಲೆಗಳ ತಂಡಗಳು ಭಾಗವಹಿಸಿದ್ದವು. ಎಲ್ಲಾ ಕ್ರೀಡೆಗಳಲ್ಲೂ ಉತ್ತಮ ಪ್ರದರ್ಶನ ನೀಡಿದ ವರುಣ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಹಲವು ಬಹುಮಾನಗಳನ್ನು ತಮ್ಮದಾಗಿಸಿಕೊಂಡರು.

ಕಬಡ್ಡಿಯಲ್ಲಿ ಬಾಲಕರು ಹಾಗೂ ಬಾಲಕಿಯರ ತಂಡಗಳಿಗೆ ಪ್ರಥಮ ಬಹುಮಾನ ದಕ್ಕಿತು. ಬಾಲಕಿಯರ ತಂಡ ವಾಲಿಬಾಲ್‌ನಲ್ಲಿ ಪ್ರಥಮ, ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಬಹುಮಾನ ಪಡೆದುಕೊಂಡವು. ಈ ಮೂಲಕ ಶಾಲೆಗೆ ಸಮಗ್ರ ಪ್ರಶಸ್ತಿ ಲಭಿಸಿತ್ತಲ್ಲದೆ, ವಿಜೇತ ತಂಡಗಳು ತಾಲೂಕು ಮಟ್ಟದ ಕೀಡಾಕೂಟಕ್ಕೆ ಆಯ್ಕೆಯಾದವು. ಶಾಲೆಯ ದೈಹಿಕ ಶಿಕ್ಷಣದ ಶಿಕ್ಷಕಿ ಶ್ರೀಮತಿ ರುಕ್ಮವ್ವ ಸೋಮಪ್ಪ ಲಮಾಣಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, ಶಿಕ್ಷಣದೊಂದಿಗೆ ಕ್ರೀಡೆಯಲ್ಲೂ ಯಶಸ್ಸು ಪಡೆಯಲಿ ಎಂದು ಮುಖ್ಯೋಪಧ್ಯಾಯ ಶ್ರೀನಿವಾಸ ಅವರು ಆಶಿಸಿದರು. ವಿಜೇತ ತಂಡಗಳಿಗೆ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ಶಾಲೆ ಸಹಶಿಕ್ಷಕರು ಉಪಸ್ಥಿತರಿದ್ದರು.

ಶೋಭಾ ಯಾತ್ರೆಗೂ ಮುನ್ನ ಕೋಮು ಗಲಭೆ ಪೀಡಿತ ನುಹ್‌ನಲ್ಲಿ ಇಂಟರ್ನೆಟ್ ಕಡಿತ; ಸೆಕ್ಷನ್ 144

ಚಂಡೀಗಢ,ಆ.26–ಹರ್ಯಾಣ ಸರ್ಕಾರ ಗಲಭೆ ಪೀಡಿತ ನುಹ್‌ನಲ್ಲಿ ಇಂಟರ್ನೆಟ್ ಕಡಿತಗೊಳಿಸಲಾಗಿದ್ದು, ಸೆಕ್ಷನ್ 144 ಜಾರಿಗೊಳಿಸಿದೆ. ಶೋಭಾಯಾತ್ರೆಗೆ ಕರೆ ನೀಡಲಾಗಿದ್ದು, ಈ ಹಿನ್ನೆಲೆಯಲ್ಲಿ ಆ.28 ರವರೆಗೆ ಮೊಬೈಲ್ ಇಂಟರ್ನೆಟ್ ಸೇವೆಗಳು, ಎಸ್‌ಎಂಎಸ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಸೋಮವಾರದಂದು ರ‍್ಯಾಲಿ ನಡೆಯಲಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ವದಂತಿಗಳು ಹಬ್ಬುವುದನ್ನು ತಡೆಗಟ್ಟಲು ಹರ್ಯಾಣ ಸರ್ಕಾರ ಈ ಕ್ರಮ ಕೈಗೊಂಡಿದೆ. ಜುಲೈನಲ್ಲಿ ಕೋಮುಗಲಭೆಯ ನಂತರ ಆ.28 ರಂದು ಜಿಲ್ಲೆಯಲ್ಲಿ ಧಾರ್ಮಿಕ ಮೆರವಣಿಗೆ ನಡೆಸಲು ನುಹ್ ಅಧಿಕಾರಿಗಳು ಇತ್ತೀಚೆಗೆ ಅನುಮತಿ ನಿರಾ ಕರಿಸಿದ್ದರು. ಜಿಲ್ಲಾಡಳಿತವು ಸಿಆರ್ ಪಿಸಿಯ ಸೆಕ್ಷನ್ 144 ಅನ್ನು ವಿಧಿಸಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಒಂದು ಪ್ರದೇಶದಲ್ಲಿ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಜನರು ಸೇರುವುದನ್ನು ನಿಷೇಧಿಸಿದೆ.

ಮಧುರೈ ಜಂಕ್ಷನ್‌ನಲ್ಲಿ ನಿಂತಿದ್ದ ರೈಲು ಬೋಗಿಗೆ ಬೆಂಕಿ

ಮೂವರು ಮಹಿಳೆಯರು ಸೇರಿ 10 ಮಂದಿ ಸಜೀವ ದಹನ

ಮಧುರೈ, ಆ.26– ಶನಿವಾರ ಮುಂಜಾನೆ ಮಧುರೈ ರೈಲ್ವೆ ಜಂಕ್ಷನ್ ಬಳಿ ನಿಂತಿದ್ದ ಪ್ರವಾಸಿ ಕೋಚ್‌ನಲ್ಲಿ (ಪಾರ್ಟಿ ಕೋಚ್) ಸಂಭವಿಸಿದ ಬೆಂಕಿ ಅವಘಡದಲ್ಲಿ ಮೂವರು ಮಹಿಳೆಯರು ಸೇರಿದಂತೆ ಹತ್ತು ಪ್ರಯಾಣಿಕರು ಸಜೀವ ದಹನಗೊಂಡಿದ್ದಾರೆ.



ಬೆಳಗಿನ ಜಾವ 5.15ರ ಸುಮಾರಿಗೆ ಕೋಚ್‌ನಲ್ಲಿದ್ದ ಪ್ರಯಾಣಿಕರೊಬ್ಬರು ಎಲ್‌ಪಿಜಿ ಸಿಲಿಂಡರ್ ಬಳಸಿ ಟೀ ಮಾಡುತ್ತಿದ್ದಾಗ ಈ ಅವಘಡ ಸಂಭವಿಸಿದ್ದು, ಎಲ್ಲೆಡೆ ಬೆಂಕಿ ಹೊತ್ತಿಕೊಂಡಿದೆ.

ರೈಲ್ವೆ ಅಧಿಕಾರಿಗಳ ಪ್ರಕಾರ, ಈ ಸಮಯದಲ್ಲಿ ಮಲಗಿದ್ದರು ಎಂದು ನಂಬಲಾದ ಐವರು ಪುರುಷರು ಮತ್ತು ಮೂವರು ಮಹಿಳೆಯರು ಸುಟ್ಟು ಕರಕಲಾಗಿದ್ದಾರೆ. ಇನ್ನೂ ಇಬ್ಬರು ಮೃತ ವ್ಯಕ್ತಿಗಳ ಲಿಂಗ ಯಾವುದೆಂದು ತಿಳಿದಿಲ್ಲ. ಮಧುರೈ ಜಿಲ್ಲಾಧಿಕಾರಿ ಎಂ.ಎಸ್. ಸಂಗೀತಾ ಸ್ಥಳಕ್ಕೆ ಧಾವಿಸಿ ವಿಚಾರಣೆ ನಡೆಸಿದ್ದಾರೆ. ರೈಲು ಕಂಪಾರ್ಟ್‌ಮೆಂಟ್‌ನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 10 ಮಂದಿ ಸಾವಿಗೀಡಾಗಿದ್ದು, 20 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕೋಚ್‌ನಿಂದ 55 ಜನರನ್ನು ರಕ್ಷಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರವಾಸಿ ಕೋಚ್ ಅನ್ನು ನಗರ್‌ಕೋಯಿಲ್‌ನಲ್ಲಿ ರೈಲಿಗೆ (16730–ಪುನಲೂರ್–ಮಧುರೈ ಎಕ್ಸ್‌ಪ್ರೆಸ್) ಎಕ್ಸ್‌ಪ್ರೆಸ್ ರೈಲಿನಿಂದ ಬೇರ್ಪಡಿಸಲಾಗಿತ್ತು. ಕೋಚ್‌ನಲ್ಲಿ ಸುಮಾರು 70 ಪ್ರಯಾಣಿಕರಿದ್ದರು ಎಂದು ಹೇಳಲಾಗಿದೆ. ನಂತರ ಈ ಬೇರ್ಪಟ್ಟ ಕೋಚ್ ಅನ್ನು ಮಧುರೈ ಸ್ಟೇಬ್ಲಿಂಗ್ ಲೈನ್ ಟ್ರ್ಯಾಕ್‌ನಲ್ಲಿ ನಿಲ್ಲಿಸಲಾಗಿತ್ತು. ಈ ವೇಳೆ ದುರದೃಷ್ಟವಶಾತ್, ಈ ಕೋಚ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಐಆರ್‌ಸಿಟಿಸಿ ಪೋರ್ಟಲ್ ಬಳಸಿ ಯಾರು ಬೇಕಾದರೂ ಪಾರ್ಟಿ ಕೋಚ್ ಅನ್ನು ಬುಕ್ ಮಾಡಬಹುದಾಗಿದೆ. ಆದರೆ, ಯಾವುದೇ ದಹನಕಾರಿ ವಸ್ತುಗಳನ್ನು ಸಾಗಿಸಲು ಪ್ರಯಾಣಿಕರಿಗೆ ಅನುಮತಿ ಇಲ್ಲ ಎಂದು ಗಣೇಶನ್ ಹೇಳಿದರು. ಈ ಕೋಚ್ ಅನ್ನು ಸಾರಿಗೆ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು. ಆದರೆ, ಈ ಗುಂಪು ಅಕ್ರಮವಾಗಿ ಗ್ಯಾಸ್ ಸಿಲಿಂಡರ್ ಸಾಗಣೆ ಮಾಡಿದೆ ಎನ್ನಲಾಗಿದೆ. ಅವಘಡದ ನಂತರ ಸ್ಥಳದಲ್ಲಿ ಚದುರಿದ ವಸ್ತುಗಳ ಪೈಕಿ ಸಿಲಿಂಡರ್ ಮತ್ತು ಆಲೂಗಡ್ಡೆಯ ಚೀಲ ಸೇರಿದ್ದು, ಆಹಾರ ಬೇಯಿಸಲು ಪ್ರಯತ್ನಗಳು ನಡೆದಿವೆ ಎಂಬುದನ್ನು ಸೂಚಿಸುತ್ತದೆ. ರಾಜ್ಯ ಕಂದಾಯ ಸಚಿವ ಪಿ.ಮೂರ್ತಿ ಹಾಗೂ ಮಧುರೈ ಪೊಲೀಸ್ ಆಯುಕ್ತ ಡಾ.ಜೆ. ಲೋಕನಾಥನ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ಘೋಷಿಸಲಾಗಿದೆ. ಅಗ್ನಿ ಅವಘಡ ಮತ್ತು ದುರಂತಗಳಿಗೆ ಸಂಬಂಧಿಸಿದ ಮಾಹಿತಿಗಾಗಿ ದಕ್ಷಿಣ ರೈಲ್ವೆ ಎರಡು ಸಹಾಯವಾಣಿ ಸಂಖ್ಯೆಗಳನ್ನು ಪ್ರಕಟಿಸಿದೆ. ಅವುಗಳೆಂದರೆ, 9360552608, ಮತ್ತು 8015681915.

ಬೆಂಕಿ ಅವಘಡದಿಂದಾಗಿ ಮಧುರೈನಲ್ಲಿ ಇತರ ರೈಲುಗಳ ಸಂಚಾರದ ಮೇಲೆ ಪರಿಣಾಮ ಬೀರಿದೆ ಕಾರ್ಯಾಚರಣೆ ವಿಳಂಬವಾಗಿದೆ. ಹೆಚ್ಚಿನ ತನಿಖೆಗಳು ನಡೆಯುತ್ತಿವೆ.

ಮುಳ್ಳೂರು ಬಿ.ಸೋಮಶೇಖರ್ ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆ

ಮೈಸೂರು, ಆ. 26– ಸರಗೂರು ತಾಲೂಕಿನ ಕಾಡಂಚಿನ ಗ್ರಾಮವಾದ ಮುಳ್ಳೂರಿನ ರಾಜಮ್ಮ ಲೇ. ಭದ್ರಯ್ಯ ಅವರ ನಾಲ್ಕನೇ ಮಗ ಬಿ.ಸೋಮಶೇಖರ್, ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ.



ಹೆಚ್.ಡಿ.ಕೋಟೆ ಮತ್ತು ಮೈಸೂರಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದ ಸೋಮಶೇಖರ್ ಅವರು ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಜಿಲ್ಲಾ ನ್ಯಾಯಾಧೀಶರ ಹುದ್ದೆಯ ಮುಖ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಇದೀಗ ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಹಳ್ಳಿಗಾಡಿನ ಬಡ ಅನಕ್ಷರಸ್ಥ ರೈತ ಕುಟುಂಬದ ಹಿನ್ನೆಲೆ ಇರುವ ಬಿ.ಸೋಮಶೇಖರ್ ಅವರು ಮುಳ್ಳೂರು ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ, ಎಸ್ ಎಸ್ ಎಲ್ ಸಿ, ಸರಗೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಿಯುಸಿ ಮುಗಿಸಿ ಮೈಸೂರಿನ ಮಹಾರಾಜ ಕಾಲೇಜಲ್ಲಿ ಬಿ.ಎ. ಪದವಿ ನಂತರ ವಿದ್ಯಾವರ್ಧಕ ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿ, ಹೆಚ್.ಡಿ.ಕೋಟೆ ಮತ್ತು ಮೈಸೂರಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳಲ್ಲಿ ಉತ್ತಮ ವಕೀಲರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಸರ್ಕಾರಿ ಶಾಲೆಗಳಿಗೆ ಪುಸ್ತಕ ವಿತರಣೆ

ಮೈಸೂರು,ಆ.26(ಪಿಎಂ)– ಹುಣಸೂರು ತಾಲೂಕು ವಡೇರಹೊಸಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರಿನ ಸಹಾಯ ಟ್ರಸ್ಟ್ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗಾಗಿ 'ಓದಿ ಕಲಿಯಿರಿ' ಕಾರ್ಯಕ್ರಮ ಆಯೋಜಿಸಲಾಗಿತ್ತು.



ಇದೇ ಸಂದರ್ಭದಲ್ಲಿ ಟ್ರಸ್ಟ್ ವತಿಯಿಂದ ಸದರಿ ಶಾಲೆಯ ಗ್ರಂಥಾಲಯಕ್ಕಾಗಿ 300 ಪುಸ್ತಕಗಳನ್ನು ಕೊಡುಗೆಯಾಗಿ ನೀಡಲಾಯಿತು. ಅಲ್ಲದೆ, ಇದೇ ವೇಳೆ ಹುಣಸೂರು ತಾಲೂಕು ಚಿಕ್ಕಬೀಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಾಲಯಕ್ಕಾಗಿ ಬೆಂಗಳೂರಿನ ಮನು ಸೇವಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷಾ ನಿಘಂಟು ಹಾಗೂ ಇತರೆ ಭಾಷಾ ಕಲಿಕಾ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಲಾಯಿತು. ಸಹಾಯ ಟ್ರಸ್ಟ್ ಪದಾಧಿಕಾರಿಗಳಾದ ಅನಂತಪದ್ಮನಾಭ, ಪಿಎಸ್.ನಾಯಕ್, ಜಿ.ಪ್ರಶಾಂತ್, ಬಿಆರ್‌ಪಿ ಮಹದೇವಸ್ವಾಮಿ, ಮನು ಸೇವಾ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಶಿವಶಂಕರ್ ಸೇರಿದಂತೆ ಎರಡೂ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಹಾಜರಿದ್ದರು.

ಕಾವಾ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಆ.26– ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ) ಮೈಸೂರು ಸಂಸ್ಥೆಯಲ್ಲಿ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ–ಎರಡು ವರ್ಷದ ನಾಲ್ಕು ಸೆಮಿಸ್ಟರ್ ಸಿ.ಬಿ.ಎ.ಸಿ ಪದ್ಧತಿ] ದೃಶ್ಯ ಕಲೆಯಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಥಮ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ ಪ್ರವೇಶಾತಿಗಾಗಿ ಚಿತ್ರಕಲೆ ಮತ್ತು ಶಿಲ್ಪಕಲೆ ವಿಭಾಗಕ್ಕೆ ಅರ್ಜಿ ಸಲ್ಲಿಸಲು ಸೆ.2 ಕೊನೆಯ ದಿನಾಂಕವಾಗಿರುತ್ತದೆ. ಸೆ.4ರಂದು ಬೆಳಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಮತ್ತು ಮಧ್ಯಾಹ್ನ 2 ಗಂಟೆಗೆ ವೈಯಕ್ತಿಕ ಸಂದರ್ಶನವನ್ನು ಏರ್ಪಡಿಸಲಾಗಿರುತ್ತದೆ. ಆಸಕ್ತ ಅಭ್ಯರ್ಥಿ ಗಳು www.mysore.ni.in ಅಥವಾ www.cavamysore.karnataka.gov.in ಮೂಲಕ ಅರ್ಜಿ ಸಲ್ಲಿಸ ಬಹುದಾಗಿದ್ದು, ಹೆಚ್ಚಿನ ಮಾಹಿತಿಗೆ ಕಾರ್ಯಾಲಯದ ದೂ.ಸಂ: 0821–2438931 ಸಂಪರ್ಕಿಸಬಹುದು.

ಅಮೃತೇಶ್ವರ ದೇವಸ್ಥಾನದಲ್ಲಿ ಸರ್ಪಸಂಸ್ಕಾರ


ಮೈಸೂರು, ಆ.26– ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಆ.29ರಂದು ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರ ಮತ್ತು ಕಾಲ ಸರ್ಪಶಾಂತಿ, ಆ.30ರಂದು ಬೆಳಗ್ಗೆ 7.39ಕ್ಕೆ ಸರ್ಪಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ ಹಾಗೂ ಕಾಲಸರ್ಪಶಾಂತಿ ಕುಜದೋಷ ನಿವೃತ್ತಿ ಹೋಮ ನೆರವೇರಲಿದೆ ಎಂದು ಜಾತಕ ವಿಮರ್ಶಕ ಮೈ.ಕುಮಾರ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ಸಂ: 9845183392 ಅಥವಾ 9845183399 ಸಂಪರ್ಕಿಸಬಹುದು.

ಎಂ.ಬಿ.ಪವನ್‌ಮೂರ್ತಿ
ಮೊ. 9738845134

ಸುಚೇತ 'ಸಾಹಿತ್ಯ' ಸಾಹಸ



ಮೈಸೂರಿನ ಶ್ರೀರಾಂಪುರದ ತಮ್ಮ ನಿವಾಸದಲ್ಲಿ ಕೆ.ಎಸ್.ಸುಚೇತ ಮತ್ತು ಡಾ.ಸುಚೇತನ ಸ್ವರೂಪ ದಂಪತಿ.



'ಬರಿ ಕತೆಯಲ್ಲ ; ಅಗ್ರಹಾರದ ಕಥನ' ಕೃತಿಯ ಮುಖಪುಟ

> "ನಾನು ಕಾದಂಬರಿಯೊಂದನ್ನು ಬರೆಯುತ್ತಿದ್ದ ಸಂದರ್ಭದಲ್ಲಿ ಜೊತೆಯಲ್ಲಿ ಕೂತು ತನ್ನ ಬಾಲ್ಯದ ನೆನಪುಗಳನ್ನು ಸುಚೇತ ಹಂಚಿಕೊಳ್ಳುತ್ತಿದ್ದರು. ಆಗ ನಾನು, ನೀನೇ ಅದನ್ನೆಲ್ಲಾ ಬರೆದು ಬಿಡು ಎಂದೆ. ಇದು ಅವರಲ್ಲಿ 'ಬರಿ ಕತೆಯಲ್ಲ ; ಅಗ್ರಹಾರದ ಕಥನ' ಕೃತಿ ಬರೆಯಲು ಪ್ರೇರಣೆಯಾಯಿತು. ಇದಕ್ಕೂ ಮುನ್ನ ಅವರು ಬರವಣಿಗೆ ಮಾಡಿದ್ದರೂ ಅವು ಇಷ್ಟು ದೊಡ್ಡ ಕೃತಿ ಆಗಿರಲಿಲ್ಲ. ಎರಡನೇ ಮಗ ಹುಟ್ಟುವ ಮುನ್ನವೇ 'ಯುರೋಪಿನ ಇಪ್ಪತ್ತೊಂದು ಜನಪದ ಕಥೆಗಳು' ಕೃತಿ ಬರೆದಿದ್ದರು. ನಂತರದ 2017ರಲ್ಲಿ ಅನು ಬಂದೋಪಾಧ್ಯಾಯ ಅವರ 'ಬಹುರೂಪಿ ಗಾಂಧಿ' ಇಂಗ್ಲಿಷ್ ಕೃತಿಯನ್ನು 'ನಮ್ಮ ನಿಮ್ಮಂತಿದ್ದ ಈ ಗಾಂಧಿ' ಶೀರ್ಷಿಕೆಯಡಿ ಕನ್ನಡಕ್ಕೆ ಅನುವಾದ ಮಾಡಿದರು. ಸುಚೇತರ ಅನಾರೋಗ್ಯಕ್ಕೆ ಪರಿಹಾರ ಇಲ್ಲ. ಸಹಿಸಿಕೊಂಡು ನಿಯಂತ್ರಣದ ಜೊತೆಗೆ ಜೀವನ ಮಾಡಬೇಕು. ಅವರು ಉತ್ತಮ ಚದುರಂಗ ಆಟಗಾರ್ತಿ, ಗಣಿತ, ವಿಜ್ಞಾನದಲ್ಲಿ ಆಸಕ್ತಿ ಹೊಂದಿದ್ದಾರೆ. ಪ್ರಖರ ವಿಚಾರವಾದಿಯೂ ಹೌದು.
> –ಡಾ.ಸುಚೇತನ ಸ್ವರೂಪ

> "ನನಗೆ ಸಂವಹನ ಸಾಮರ್ಥ್ಯ ಇಲ್ಲ. ತುಟಿ ಚಲನೆ ಮತ್ತು ಆಂಗಿಕ ಚಲನೆಯನ್ನು ಗಮನಿಸಿಯೇ ಮತ್ತೊಬ್ಬರು ಹೇಳುವುದನ್ನು ಗ್ರಹಿಸುತ್ತೇನೆ. ಜಗತ್ತಿನ ಎಲ್ಲಾ ಖಂಡಗಳ ಜಾನಪದ ಕಥೆಗಳನ್ನು ಬರೆಯುವ ಬಯಕೆ ಹೊಂದಿದ್ದೇನೆ. ಆದರೆ ಆರೋಗ್ಯ ಸಹಕರಿಸಬೇಕಷ್ಟೇ. ನನ್ನ ನೆಚ್ಚಿನ ಸಂಗೀತ ಆಲಿಸಲು ಸಾಧ್ಯವಿಲ್ಲ ಆದರೂ ಬಂದುತೆ ಜೀವನವನ್ನು ಸ್ವೀಕರಿಸುತ್ತೇನೆ. ಯಾವುದೇ ಅಂಗವೈಕಲ್ಯದಿಂದ ಬಳಲುತ್ತಿದ್ದರೂ ನಾವು ಯಾವಾಗಲೂ ನಮ್ಮ ಮಿತಿಯಲ್ಲಿ ನಮಗೆ ಬೇಕಾದ್ದನ್ನು ಮಾಡಬಹುದು. ಮೊದಲಿನಿಂದಲೂ ಪತ್ರಿಕೆಗಳಿಗೆ ಮಕ್ಕಳ ಕಥೆಗಳು, ಓದುಗರ ಪತ್ರಗಳನ್ನು ಬರೆಯುತ್ತಿದ್ದೆ. ಇದೀಗ ಒಂದು ಕಾದಂಬರಿ ಬರೆಯುತ್ತಿದ್ದೇನೆ. 'ಬರಿ ಕತೆಯಲ್ಲ; ಅಗ್ರಹಾರದ ಕಥನ' ಕೃತಿಯು ನೈಜ ಘಟನೆಗಳನ್ನು ಒಳಗೊಂಡಿದೆ. ಆದರೆ ಅಲ್ಲಿ ಬರುವ ಪಾತ್ರಗಳ ಹೆಸರು ಬದಲಿಸಿದ್ದೇನೆ. ಹೆಚ್ಚು ಮಾತ್ರೆಗಳನ್ನು ತೆಗೆದುಕೊಳ್ಳುವ ಹಿನ್ನೆಲೆಯಲ್ಲಿ ಕೈ ನಡುಗುತ್ತದೆ. ಕಷ್ಟ ಇದ್ದೇ ಇದೆ. ಏನೂ ಮಾಡಲಾಗದು. ಮಕ್ಕಳು ಬುದ್ಧಿವಂತರು. ಅದೇ ಸಂತೋಷ ನನಗೆ ಹೆಚ್ಚು ಹೆಚ್ಚು ಬರೆಯಬೇಕು ಅನ್ನಿಸುತ್ತೆ ಆದರೆ ಸಂವಹನ ಸಾಮರ್ಥ್ಯ ಇಲ್ಲ. ಓದಿ ಅದರ ಮೇಲೆ ಬರೆಯಬೇಕು ಅಷ್ಟೇ.
> –ಕೆ.ಎಸ್.ಸುಚೇತ

ಶ್ರವಣ ಯಂತ್ರವೂ ಸಹಕರಿಸದೇ ಲೋಕದ ಮಾತು, ಸದ್ದು-ಗದ್ದಲ ಕೇಳಿಸದ ಸನ್ನಿವೇಶ, ಇಂಪಾದ ಸಂಗೀತವನ್ನೂ ಆಲಿಸಲಾಗದ ಪರಿಸ್ಥಿತಿ. ಸಾಲದೆಂಬಂತೆ ನಿರಂತರವಾಗಿ ಬಾಧಿಸುವ ಅನಾರೋಗ್ಯ ಅವರ ಸಾಹಿತ್ಯ ಕೃಷಿಗೆ ಅಡ್ಡಿಯಾಗಲಿಲ್ಲ. ಬರೆಯಬೇಕೆಂಬ ತುಡಿತದಲ್ಲಿ ನಿತ್ಯದ ನೋವನ್ನು ನುಂಗಿದರು. ತದೇಕಚಿತ್ತದಿಂದ 'ಅಕ್ಷರ' ಗುರಿ ಸಾಧನೆ ಮಾಡಿದರು. ಇದು ಮೈಸೂರಿನ ವಿಶೇಷ ಚೇತನ ಮಹಿಳಾ ಲೇಖಕಿಯೊಬ್ಬರ ಯಶೋಗಾಥೆ.

ಹೌದು, 67 ವರ್ಷ ಹಿರಿಯರಾದ ಕೆ.ಎಸ್.ಸುಚೇತ ವಿಶೇಷಚೇತನರು. ಅವರ 'ಬರಿ ಕತೆಯಲ್ಲ ; ಅಗ್ರಹಾರದ ಕಥನ' ಮೂರನೇ ಕೃತಿಯು ವಿಮರ್ಶಕರು, ಚಿಂತಕರು ಹಾಗೂ ಓದುಗರ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. ತಮ್ಮ ಪತಿಯ ಪ್ರೇರಣೆಯಿಂದ ಸುಚೇತ ಅವರು ಹಲವು ಅನಾರೋಗ್ಯ ಸಮಸ್ಯೆಯ ನಡುವೆಯೂ ತಮ್ಮ ಅಂತರಂಗದ ಚೈತನ್ಯವನ್ನು ಅಕ್ಷರ ರೂಪದಲ್ಲಿ ಅಲಂಕರಿಸುತ್ತಿದ್ದಾರೆ. ಮಲೆನಾಡಿನ ಹಳ್ಳಿಯೊಂದರಲ್ಲಿ ಆರೋಗ್ಯಕರ ಮಗುವಾಗಿಯೇ ಜನಿಸಿದ ಸುಚೇತರ ಬದುಕಲ್ಲಿ ಮುಂದೆ ಸಾಲು ಸಾಲು ಅನಾರೋಗ್ಯ ಸಮಸ್ಯೆ ಕಾಡಲಾರಂಭಿಸಿತು. ಶಾಲಾ ಶಿಕ್ಷಣದ ಸಂದರ್ಭದಲ್ಲಿ ಇವರು ಟೈಫಾಯಿಡ್ ಜ್ವರಕ್ಕೆ ತುತ್ತಾಗಿದ್ದರು. ಇದೇ ಸಂದರ್ಭದಲ್ಲಿ ಇವರಿಗೆ ಶ್ರವಣದೋಷ ಕಾಣಿಸಿಕೊಂಡಿತು. ತದನಂತರ ಶ್ರವಣ ಯಂತ್ರದ ಸಹಾಯದಿಂದ ದೂರ ಶಿಕ್ಷಣ ವ್ಯವಸ್ಥೆಯಡಿ ಪದವಿಪೂರ್ವ ಶಿಕ್ಷಣ ಪೂರ್ಣಗೊಳಿಸಿದರು. ಆದರೆ ಮುಂದೆ ಶ್ರವಣ ದೋಷ ತೀವ್ರಗೊಂಡ ಹಿನ್ನೆಲೆಯಲ್ಲಿ ಬಿಎ ಪದವಿ ಪೂರ್ಣಗೊಳಿಸುವ ಅವರ ಬಯಕೆ ಅಂತೂ ಈಡೇರಲಿಲ್ಲ.

ಪ್ರೇಮಾಂಕುರಕ್ಕೆ ಕಾರಣವಾದ ಪತ್ರ: ಡಾ.ಸುಚೇತನ ಸ್ವರೂಪ ಅವರು ಎಂಎ ಓದುತ್ತಿದ್ದ ಕಾಲ (1976). ಆಗ ಅವರು ಪತ್ರಿಕೆಯೊಂದಕ್ಕೆ ಲೇಖನ ಬರೆದಿದ್ದರು. ಇದನ್ನು ಓದಿದ ಸುಚೇತರಿಗೆ ಆ ಬರವಣಿಗೆ ಇಷ್ಟವಾಯಿತು. ಮಾತ್ರವಲ್ಲದೆ, ತಮ್ಮ ಹೆಸರನ್ನೇ ಹೋಲುವ ಸುಚೇತನ ಸ್ವರೂಪ ಅವರ ಬಗ್ಗೆ ಕೌತುಕಗೊಂಡರು. ಜೊತೆಗೆ ಲೇಖನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಸುಚೇತನ ಸ್ವರೂಪರಿಗೆ ಪತ್ರ ಸಹ ಬರೆದಿದ್ದರು. ಈ ಪತ್ರವು ಹಲವು ಪತ್ರ ವ್ಯವಹಾರಗಳಿಗೆ ನಾಂದಿಯಾಗಿ ಇಬ್ಬರ ನಡುವೆ ಪ್ರೇಮಾಂಕುರಕ್ಕೂ ಕಾರಣವಾಯ್ತು. ಅದಾಗಲೇ ಸುಚೇತರು ಶ್ರವಣ ದೋಷ ಹೊಂದಿದ್ದರು. ಆದರೂ ಪ್ರೀತಿಯ ಮುಂದೆ ಇದು ಲೆಕ್ಕಕ್ಕೆ ಬರಲಿಲ್ಲ.

1978ರಲ್ಲಿ ಇಬ್ಬರ ವಿವಾಹವೂ ನೆರವೇರಿತು. 1982ರಲ್ಲಿ ಇವರಿಗೆ ಹಿರಿಯ ಮಗ ಜಿ.ಎಸ್.ಅನುರೂಪ ವರ್ಷ ಜನಿಸಿದರು. 1987ರಲ್ಲಿ ಇವರ ಎರಡನೇ ಪುತ್ರ ಜಿ.ಎಸ್.ನಲಂದ ಜನಿಸಿದ ನಂತರದಲ್ಲಿ ಸುಚೇತರಿಗೆ ಶ್ರವಣ ಸಮಸ್ಯೆ ತೀವ್ರಗೊಂಡಿತು. ಕೊನೆಗೆ ಶ್ರವಣ ಯಂತ್ರವೂ ಅವರ ಸಹಾಯಕ್ಕೆ ಬರಲಿಲ್ಲ. ಇದರೊಂದಿಗೆ ಸುಚೇತರು ಖಿನ್ನತೆಗೂ ಒಳಗಾದರು.

ಮುಂದೆ ಇನ್ನೂ ಅನೇಕ ಮಾನಸಿಕ ಸಮಸ್ಯೆಗಳು ಎದುರಾದರೂ ಪತಿ ಸುಚೇತನ ಸ್ವರೂಪರ ಪ್ರೇರಣೆ, ಅವರಿಂದ ದೊರೆತ ಆತ್ಮಸ್ಥೈರ್ಯದಿಂದ ಸುಧಾರಣೆಯೊಂದಿಗೆ ಸುಚೇತ ಬರವಣಿಗೆಯ ಕಾಯಕ ಮುಂದುವರೆಸಿದರು. ಪತ್ರಕರ್ತರಾಗಿ ಸೇವೆ ಸಲ್ಲಿಸಿ ಬಳಿಕ ಪ್ರಾಧ್ಯಾಪಕರಾಗಿದ್ದ ಸುಚೇತನ ಸ್ವರೂಪರು **ರಾಜ್ಯ ಮಾಹಿತಿ ಆಯೋಗದ ಮುಖ್ಯ ಆಯುಕ್ತರಾಗಿಯೂ** ಸೇವೆ ಸಲ್ಲಿಸಿದವರು. ಪತ್ನಿಯ ಅನಾರೋಗ್ಯದ ಹಿನ್ನೆಲೆಯಲ್ಲಿ ಪತ್ರಕರ್ತ ವೃತ್ತಿಯಿಂದ ಹೊರಬಂದ ಸುಚೇತನ ಸ್ವರೂಪ, ಲೇಖಕರು ಹೌದು. ಏಳು ಕಾದಂಬರಿಗಳ ಕರ್ತೃವೂ ಆದ ಸುಚೇತನ ಸ್ವರೂಪ ಅವರು ಪತ್ನಿಯ ಸಾಹಿತ್ಯ ಕೃಷಿಗೂ ನೀರೆರೆದರು.

ಮಕ್ಕಳಿಗೆ ತಾಯಿಯೇ ಮೊದಲ ಶಿಕ್ಷಕಿ, ಮನೆಯೇ ಮೊದಲ ಪಾಠಶಾಲೆ ಎನ್ನುವಂತೆ ಸುಚೇತ, ತಮ್ಮ ಇಬ್ಬರು ಪುತ್ರರ ಶಿಕ್ಷಣಕ್ಕೆ ಒತ್ತಾಸೆಯಾದರು. ಸೂಕ್ತ ಮಾರ್ಗದರ್ಶನ ನೀಡಿ ಮಕ್ಕಳ ಶಾಲಾ-ಕಾಲೇಜು ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿದರು. ಅವರ ಮೊದಲ ಪುತ್ರ ಅನುರೂಪ ವರ್ಷ, ಐಐಟಿ ಬಾಂಬೆಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿಇ, ಎಂಟೆಕ್ ಪದವೀಧರರಾಗಿ ಇದೀಗ ಜರ್ಮನಿಯಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿಇ ಪದವಿ ಪೂರೈಸಿರುವ ಇವರ ದ್ವಿತೀಯ ಪುತ್ರ ಜಿ.ಎಸ್.ನಲಂದ ಆಸ್ಟ್ರೇಲಿಯಾದಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಬ್ಬರು ಮದುವೆಯಾಗಿದ್ದು, ಇಬ್ಬರೂ, ತಲಾ ಇಬ್ಬರು ಹೆಣ್ಣು ಮಕ್ಕಳ ತಂದೆಯಾಗಿದ್ದಾರೆ.

ನೋವಿನ ಮೇಲೆ ನೋವು...!: ಮೈಸೂರಿನ ಶ್ರೀರಾಂಪುರದಲ್ಲಿ ಸುಚೇತನ ಸ್ವರೂಪ ಮತ್ತು ಸುಚೇತ ದಂಪತಿ ವಾಸವಾಗಿದ್ದಾರೆ. ಇಬ್ಬರು ತಮ್ಮ ಸಾಹಿತ್ಯ ಕೃಷಿಯಲ್ಲಿ ಮುಂದುವರೆದಿದ್ದಾರೆ. ಇದೇ ಜಾಗದಲ್ಲಿ ಇದ್ದ ಇವರ ಹಳೆ ಮನೆಗೆ 2021ರಲ್ಲಿ ಮಳೆ ನೀರು ನುಗ್ಗಿ ಅಪಾರ ಹಾನಿಯಾಯಿತು. ಇದರಿಂದ ಬೇಸರಗೊಂಡಿದ್ದ ಸುಚೇತ, ತೀವ್ರತರ ಖಿನ್ನತೆಗೆ ಒಳಗಾಗಿದ್ದರು. ಕೊನೆಗೆ ಚಿಕಿತ್ಸೆ ಪಡೆದು ಚೇತರಿಸಿಕೊಂಡರು. ಅಲ್ಲದೆ, ಅದೇ ಜಾಗದಲ್ಲಿ ಹೊಸ ಮನೆ ನಿರ್ಮಿಸಿಕೊಂಡಿದ್ದಾರೆ.

ಇತ್ತೀಚೆಗೆ ಬಿಡುಗಡೆಗೊಂಡ ಸುಚೇತರ 'ಬರಿ ಕತೆಯಲ್ಲ ; ಅಗ್ರಹಾರದ ಕಥನ' ಕೃತಿಯು ಮಲೆನಾಡಿನ ಅಗ್ರಹಾರದ ಬ್ರಾಹ್ಮಣರು ಮತ್ತು ಕೆಲ ಕಾಶ್ಮೀರಿ ಪಂಡಿತರ ಜೀವನ ಮತ್ತು ಸಂಸ್ಕೃತಿಯನ್ನು ಕೇಂದ್ರೀಕರಿಸಿದೆ. 'ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಈ ಕೃತಿಯು ಅಗ್ರಹಾರದ ಬ್ರಾಹ್ಮಣರ ಪೇಟೆಯೊಂದರ ದೈನಂದಿನ ಬದುಕಿನ ವಿವಿಧ ಮುಖಗಳ ಒಂದು ಸಮಗ್ರ ಅಧ್ಯಯನ. ಈ ಕೃತಿಯಲ್ಲಿ ಮೂಡಿ ಬಂದಿರುವ ಕಥಾವಸ್ತು ಸ್ವಾನುಭವಗಳನ್ನು ಒಳಗೊಂಡಿರುವ ಹಿನ್ನೆಲೆಯಲ್ಲಿ ಇದೊಂದು ರೀತಿಯಲ್ಲಿ ಆತ್ಮಕಥೆ ಸಾಲಿಗೂ ಸೇರುತ್ತದೆ' ಎಂದು ಸಮಾಜಶಾಸ್ತ್ರಜ್ಞೆ ಪ್ರೊ.ಆರ್. ಇಂದಿರಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಅಕ್ಷರಗಳ ಮೂಲಕ ಗ್ರಹಿಸಿ ಮಾತು... ಕೃತಿಯಲ್ಲಿ ಮೇಲ್ವರ್ಗದ ಮಹಿಳೆಯರ ಸಂಕಷ್ಟ ಅನಾವರಣ

ಶ್ರವಣದೋಷವಿದ್ದರೂ ಬರೆದು ತಿಳಿಸಿದರೆ ಕೆ.ಎಸ್.ಸುಚೇತರು ಸ್ಪಷ್ಟವಾಗಿ ಮಾತನಾಡುತ್ತಾರೆ. ಆ ಮೂಲಕ ಅಕ್ಷರಗಳೇ ಅವರ ಮನದಾಳದ ಮಾತುಗಳನ್ನು ಹೊರಹೊಮ್ಮಿಸಲು ಸಹಕಾರಿಯಾಗಿದ್ದು, ಅಕ್ಷರಗಳೇ ಅವರಿಗೆ ಶ್ರವಣಕ್ಕೆ ಪರ್ಯಾಯವಾಗಿದೆ. 'ನನಗೆ ಸ್ಮರಣಶಕ್ತಿ ಚೆನ್ನಾಗಿದೆ. ಪತಿಯವರು ತಮ್ಮ ಕಾದಂಬರಿ ಪರಿಷ್ಕರಿಸುತ್ತಿದ್ದರು. ಆಗ ನನಗೆ ಬಾಲ್ಯದ ನೆನಪುಗಳು ಬರತೊಡಗಿದವು. ಹೀಗಾಗಿ 'ಬರಿ ಕತೆಯಲ್ಲ; ಅಗ್ರಹಾರದ ಕಥನ' ಮೂಡಿಬಂದಿತು. ಪತಿಯ ಪ್ರೇರಣೆಯಿಂದ 6 ತಿಂಗಳಲ್ಲಿ ಇದನ್ನು ಪೂರ್ಣಗೊಳಿಸಿದೆ. ಸಹಜವಾಗಿ ಬರೆದುಕೊಂಡು ಹೋದೆ. ಮೇಲ್ವರ್ಗದ ಮಹಿಳೆಯರ ಸಂಕಷ್ಟ ಈ ಕೃತಿಯಲ್ಲಿ ಅನಾವರಣಗೊಂಡಿದೆ ಎಂದು ಸುಚೇತ ಉತ್ತರಿಸಿದರು.

ಮಕ್ಕಳ ಚಿತ್ರಕಥೆ

ನಿನಗೇನು ಹುಚ್ಚು ಹಿಡಿದಿದೆಯಾ...?

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ಒಂದು ಊರಲ್ಲಿ ಒಬ್ಬ ಜ್ಞಾನಿ ಇದ್ದ. ಅವನು ಒಂದು ಮನೆ ಕಟ್ಟಿ ಸಾಲ ಮಾಡಿಕೊಂಡಿದ್ದ.




ಇನ್ನೇನು ಗೃಹ ಪ್ರವೇಶ ಮಾಡುವಷ್ಟರಲ್ಲಿ ಜೋರಾಗಿ ಮಳೆ ಬಂದು ಮನೆ ಬಿದ್ದು ಹೋಯ್ತು.



ಆಗ ಎಲ್ಲರೂ "ಅಯ್ಯೋ ಪಾಪ.....!" ಎನ್ನುತ್ತಿದ್ದರು.



ಆದರೆ ಅವನು ಎಲ್ಲರಿಗೂ ಸಿಹಿ ಹಂಚೋಕೆ ಶುರು ಮಾಡಿದ.



ಆಗ ಎಲ್ಲರೂ ಮರುಕದಿಂದ ಕೇಳಿದರು "ನಿನಗೇನು ಹುಚ್ಚು ಹಿಡಿದಿದೆಯಾ...?" ಎಂದು.



ಆಗ ಆ ಜ್ಞಾನಿ ಹೇಳಿದ "ಭಗವಂತ ಕರುಣಾಮಯಿ.....ಗೃಹ ಪ್ರವೇಶದ ಮೊದಲೇ ಮನೆ ಕೆಡವಿದ... ಆಮೇಲೆ ಬಿದ್ದಿದ್ದರೆ ನಾವೆಲ್ಲಾ ಸಾಯುತ್ತಿದ್ದೆವು...!"

ಎಲ್ಲಾ ರೀತಿಯ ನಕಾರಾತ್ಮಕ ವಿಷಯಗಳಲ್ಲೂ ಸಕಾರಾತ್ಮಕ ವಿಷಯಗಳನ್ನು ಹುಡುಕಬೇಕು.



ವಾರಭವಿಷ್ಯ

27.8.2023 ರಿಂದ 2.9.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಧನುಸ್ಸು, ಮಕರ, ಕುಂಭ, ಮೀನ, ಕುಜ-ಕನ್ಯಾ, ಬುಧ-ಸಿಂಹ, ಗುರು-ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಸರ್ಕಾರಿ ಅಧಿಕಾರಿಗಳ ಜೊತೆ ವಿವಾದಗಳಿಂದ ದೂರವಿರುವುದು ಉತ್ತಮ. ಗೃಹ ನಿರ್ಮಾಣ ಕಾರ್ಯಗಳು ನಿಧಾನಗತಿಯಲ್ಲಿ ಸಾಗುತ್ತವೆ. ದ್ವಂದ್ವ ತರಹದ ಆಲೋಚನೆಗಳನ್ನು ಮಾಡಿ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಗುರು-ಚಂಡಾಲ ಯೋಗ ಪ್ರಭಾವದಿಂದ ಅನಾರೋಗ್ಯ ಸಮಸ್ಯೆಯಿಂದ ಕಿರಿಕಿರಿ. ವಾರಾಂತ್ಯಕ್ಕೆ ಧನಲಾಭ. ಶುಭ ಕಾರ್ಯಕ್ಕೆ ಅಪರೂಪದ ಆಹ್ವಾನಗಳು ಬರುತ್ತವೆ.
ಶ್ರೀ ಗಣಪತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸಹೋದರರೊಂದಿಗೆ ಸ್ಥಿರಾಸ್ತಿ ಒಪ್ಪಂದಗಳನ್ನು ಮಾಡಿಕೊಳ್ಳುತ್ತೀರಿ. ವ್ಯಾಪಾರದಲ್ಲಿ ಅನಿರೀಕ್ಷಿತ ಲಾಭ ದೊರಕುತ್ತದೆ. ಬಂಧು-ಮಿತ್ರರೊಡನೆ ಉಂಟಾಗಿದ್ದ ವಿವಾದಗಳು ಬಗೆಹರಿಯುತ್ತವೆ. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು. ಸರ್ಕಾರಿ ಉದ್ಯೋಗಿಗಳಿಗೆ ಹೆಚ್ಚುವರಿ ಜವಾಬ್ದಾರಿಗಳು ಉಂಟಾಗಲಿದೆ. ಸಮಯ ಪ್ರಜ್ಞೆಯ ಕೊರತೆಯಿಂದ ಆಗುವ ಕೆಲಸಗಳಲ್ಲಿ ಅಡಚಣೆ ಉಂಟಾಗುವುದು.
ಶ್ರೀ ಗೌರಿ ಸ್ತುತಿ. ಶುಭ ಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಸ್ಥಿರಾಸ್ತಿ ವಿವಾದಗಳಿಂದ ಮುಕ್ತಿ ದೊರೆಯುತ್ತದೆ. ಬಾಲ್ಯ ಸ್ನೇಹಿತರ ಭೇಟಿ, ಸಹ ಭೋಜನ, ಮನೋರಂಜನಾ ಚಟುವಟಿಕೆಗಳು, ಗೃಹ ನಿರ್ಮಾಣ ಪ್ರಯತ್ನಗಳು ಚುರುಕುಗೊಳ್ಳುವುದು. ವೃತ್ತಿಪರ ವ್ಯವಹಾರಗಳಲ್ಲಿ ಪ್ರಮುಖ ನಿರ್ಧಾರಗಳಿಂದ ಲಾಭವನ್ನು ಪಡೆಯುತ್ತೀರಿ. ಹಳೆಯ ಸಾಲಗಳು ವಸೂಲಿ ಆಗಬಹುದು. ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುವುದರಿಂದ ಧನ್ಯತಾ ಭಾವ. ಆರೋಗ್ಯದಲ್ಲಿ ಸಣ್ಣಪುಟ್ಟ ಸಮಸ್ಯೆ.
ಶ್ರೀ ವಿಷ್ಣುನಾಮ ಜಪ. ಶುಭ ಸಂಖ್ಯೆ-6.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಸಾಮಾಜಿಕವಾಗಿ ನಿಮ್ಮ ಮಾತಿಗೆ ಮೌಲ್ಯ ಹೆಚ್ಚಾಗುತ್ತದೆ. ಸಹ ಉದ್ಯೋಗಿಗಳು ಹಿರಿಯ ಅಧಿಕಾರಿಗಳೊಂದಿಗೆ ರಾಜಿ ಮಾಡಿಕೊಳ್ಳುವುದು ಉತ್ತಮ. ಪ್ರಮುಖ ಕೆಲಸಗಳನ್ನು ಅಪ್ರಯತ್ನವಾಗಿ ಪೂರ್ಣಗೊಳಿಸುತ್ತೀರಿ. ನಿರುದ್ಯೋಗಿಗಳಿಗೆ ಹೊಸ ಉದ್ಯೋಗಾವಕಾಶಗಳು ದೊರೆಯುತ್ತವೆ. ನಿಮ್ಮ ಆಲೋಚನೆಗಳ ಕಾರ್ಯರೂಪಕ್ಕೆ ತರಲು ಶ್ರಮಿಸುವಿರಿ. ವಾರಾಂತ್ಯಕ್ಕೆ ವ್ಯರ್ಥ ಖರ್ಚುಗಳು ಹೆಚ್ಚಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗುವುದು. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಮಕ್ಕಳ ವಿವಾಹ ಪ್ರಯತ್ನಗಳು ವೇಗಗೊಳ್ಳುತ್ತವೆ. ಕಠಿಣ ಪರಿಶ್ರಮದಿಂದ ಉತ್ತಮ ಫಲ ದೊರಕಲಿದೆ. ಸಮಯಕ್ಕೆ ಸರಿಯಾಗಿ ಸ್ನೇಹಿತರ ಸಹಾಯ ಸಹಕಾರ ಒದಗುತ್ತದೆ. ಹೊಸ ಹೂಡಿಕೆಗಳು ಲಾಭದಾಯಕವೆನಿಸುತ್ತದೆ. ದುಬಾರಿ ವಸ್ತು ಹಾಗೂ ವಾಹನ ಖರೀದಿಸುವ ಯೋಗವಿದೆ. ಸಮಾಜದಲ್ಲಿ ನಿಮ್ಮ ಮನ್ನಣೆ ಹೆಚ್ಚುವುದು. ಸಹೋದರರೊಂದಿಗಿನ ಆಸ್ತಿ ವಿವಾದಗಳು ಜಟಿಲವಾಗುವತ್ತ ಸಾಗಿದೆ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಒಳ್ಳೆಯದಲ್ಲ. ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ-3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಆದಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಹಳೆಯ ಸಾಲಗಳು ಇತ್ಯರ್ಥವಾಗುವ ಸಂಭವ. ದೂರ ಪ್ರಯಾಣಗಳು ಲಾಭವನ್ನು ತರುವುದು. ಕೈಗೊಂಡ ಕೆಲಸಗಳು ಯೋಜಿಸಿದಂತೆ ಪೂರ್ಣಗೊಳ್ಳುತ್ತದೆ. ಸ್ಥಿರಾಸ್ತಿ ಒಪ್ಪಂದಗಳು ಮುಂದೂಡಲ್ಪಡುತ್ತದೆ. ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳು ನಿಮ್ಮ ಅನುಕೂಲಕ್ಕೆ ಇರದು. ವಾರಾಂತ್ಯಕ್ಕೆ ಸಂಸಾರ ಸಮೇತ ಟೂರ್‌ಗೆ ತೆರಳುವ ಸಂಭವವಿದೆ. 'ಸೆಲ್ಫಿ' ಗೀಳು ಒಳ್ಳೆಯದಲ್ಲ. ಶ್ರೀ ಲಕ್ಷ್ಮಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಹಣಕಾಸಿನ ಪರಿಸ್ಥಿತಿ ಹಿಂದಿಗಿಂತ ಸುಧಾರಿಸುತ್ತದೆ. ಸಾಲ ಮುಕ್ತರಾಗಲು ಪ್ರಯತ್ನಿಸಿ. ವ್ಯಾಪಾರ ವ್ಯವಹಾರಗಳಲ್ಲಿ ನಿರ್ಣಾಯಕ ಸಮಯದಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಂಡು ಲಾಭವನ್ನು ಪಡೆಯುತ್ತೀರಿ. ವಿದ್ಯಾರ್ಥಿಗಳ ಪ್ರತಿಭೆ ಬೆಳಕಿಗೆ ಬರಲು ಗುರು ಗ್ರಹದ ಅನುಗ್ರಹವಿದೆ. ಸಾಲದ ಒತ್ತಡದಿಂದ ಬರಲು ಸೂಕ್ತ ಸಮಯವಾಗಿದೆ. ದೈವಿಕ ಹಾಗೂ ಉತ್ಸವಾದಿ ಕಾರ್ಯಕ್ರಮಗಳಿಗೆ ಆರ್ಥಿಕ ಬೆಂಬಲ ನೀಡುವುದರಿಂದ ಸಾರ್ಥಕತೆಯನ್ನು ಅನುಭವಿಸುವಿರಿ. ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು
ಪ್ರಮುಖ ಕೆಲಸಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ತುಂಬಾ ಹೆಣಗಾಡಬೇಕಾಗುತ್ತದೆ. ಪ್ರಯಾಣ ಸಮಯದಲ್ಲಿ ಅಪರಿಚಿತರಿಂದ ತೊಂದರೆಗಳು ಉಂಟಾದೀತು. ವ್ಯಯಸ್ಥಿತ ಕೇತುವಿನಿಂದ ಅಪಖ್ಯಾತಿಗೆ ಗುರಿಯಾಗುವ ಸಾಧ್ಯತೆ ಇರುತ್ತದೆ. ವಾರ ಮಧ್ಯಾನಂತರ ಚಂದ್ರಗ್ರಹದ ಶುಭ ಗೋಚರ. ನಿಮ್ಮ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕುತ್ತದೆ. ಇದಕ್ಕೆ ನಿಮ್ಮ ಗುಪ್ತ ಶತ್ರುಗಳು ಅಡ್ಡಗಾಲು ಹಾಕುವುದು ಗ್ಯಾರಂಟಿ.
ಶ್ರೀ ಸುಬ್ರಮಣ್ಯ ಆರಾಧನೆ. ಶುಭ ಸಂಖ್ಯೆ-5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಸಜ್ಜನರ ಸಹವಾಸ ದೊರಕುವುದು. ಕೃಷಿಕರಿಗೆ ಧನ, ಧಾನ್ಯ, ಸಮೃದ್ಧಿ, ಬಿಲ್ಡಿಂಗ್ ಕಂಟ್ರಾಕ್ಟರುಗಳಿಗೆ ದೊಡ್ಡ ಯೋಜನೆಗಳು ದೊರೆಯುವ ಸಾಧ್ಯತೆ. ವಾಹನ ಮಾರಾಟಗಾರರಿಗೆ ಉತ್ತಮ ರೀತಿಯಲ್ಲಿ ಮಾರಾಟವಾಗುವುದು. ಕೆಲ ಸಮಯ ವಿಭಿನ್ನ ರುಚಿಯರ ನಡುವಿನ ಸಂಬಂಧ ಹೆಚ್ಚು ಕಾಲ ಒಟ್ಟಿಗೆ ಇರುವುದಿಲ್ಲ. ಮಕ್ಕಳು ದಾರಿ ತಪ್ಪಿ ನಡೆಯಬಹುದು. ಅವರ ನಡೆಯ ಮೇಲೆ ಗಮನವಿರಲಿ.
ಶ್ರೀ ದತ್ತ ದರ್ಶನ. ಶುಭ ಸಂಖ್ಯೆ-7.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಕಾಲ ಎಲ್ಲವನ್ನೂ ಕಲಿಸುತ್ತದೆ. ಜೀವನ ಕೆಲವೊಮ್ಮೆ ಕಟುವೂ, ಮಧುರವೂ ಅನಿಸೀತು. ಈ ಪರಿಸ್ಥಿತಿಯಲ್ಲಿ ಸೌಜನ್ಯದ ಮತಿನಿಂದ ಮನಗೆಲ್ಲಿರಿ. ವಾರದ ಮಧ್ಯೆ ನಿಮ್ಮ ರಾಶಿಗೆ ಚಂದ್ರಮನ ಆಗಮನದಿಂದ ಮಾನಸಿಕ ಉಲ್ಲಾಸ ಹಾಗೂ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯಲಿದೆ. ಮಾತೃಶ್ರೀಯವರ ಆಶೀರ್ವಾದದಿಂದ ಕಷ್ಟ ನಿವಾರಣೆ ಆಗುವುದು. ಡ್ರೈವಿಂಗ್ ನೆಟ್ಟಗಿರಲಿ. ಅನ್ಯಥಾ ಸರ್ಕಾರಕ್ಕೆ ದಂಡ ಪಾವತಿ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-2

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ವ್ಯಾಪಾರ-ವ್ಯವಹಾರಗಳು ಚುರುಕಾಗಿ ನಡೆಯುವುದು. ಸಮಾಜ ಸೇವೆಯಿಂದ ಮನ್ನಣೆಗೆ ಪಾತ್ರರಾಗುವಿರಿ. ಹೊಸ ಯೋಜನೆಗಳ ಆರಂಭಕ್ಕೆ ಪೂರ್ವಭಾವಿ ಸಿದ್ಧತೆಗಳು ಪರಿಪೂರ್ಣವಾಗಿರಲಿ. ವಿದ್ಯಾರ್ಜನೆ ಕುಂಠಿತವಾಗುವುದು. ದುಂದು ವೆಚ್ಚಗಳಿಂದ ಜೇಬು ಖಾಲಿ. ಜನ್ಮಸ್ಥ ಶನಿದೇವನಿಂದ ದೇಹದಲ್ಲಿ ಶಕ್ತಿಹೀನತೆ ಉಂಟಾಗುವುದು. ವಾಹನ ಚಲಿಸುವಾಗ ಆತುರ ಗಂಡಾಂತರಕ್ಕೆ ಕಾರಣವಾದೀತು.
ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ. ಶುಭ ಸಂಖ್ಯೆ-4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ನಿಮ್ಮ ಭವಿಷ್ಯದಲ್ಲಿ ಸದವಕಾಶಗಳು ಸೃಷ್ಟಿಯಾಗುವ ಸಮಯ ಬಂದಿದೆ. ಮನಸ್ಸಿದ್ದರೆ ಮಾರ್ಗ, ದಾರಿ ತೋರಲು ಬೃಹಸ್ಪತಿಯ ಬಲವಿದೆ. ಹಿರಿಯರ ಮಾತಿಗೆ ಬೆಲೆ ಕೊಡಿ. ವಾರ ಮಧ್ಯೆ, ಧನ, ಧಾನ್ಯ, ಸಂಗ್ರಹ, ಸಮುದ್ರ ಜನ್ಯ ವಸ್ತು ವ್ಯಾಪಾರದಿಂದ ಹೇರಳ ಧನ ಸಂಪಾದನೆ ಆಗುವುದು. ಆರ್ಥಿಕ ಪರಿಸ್ಥಿತಿ ಸುಧಾರಿಸಿ ಋಣ ಭಾರಗಳಿಂದ ಮುಕ್ತರಾಗುವಿರಿ. ದೂರ ಪ್ರಯಾಣಗಳು ಉಂಟಾಗುವುದು, ಡ್ರೈವಿಂಗ್ ಎಚ್ಚರ. ಶ್ರೀ ಮನೆದೇವರ ದರ್ಶನ. ಶುಭ ಸಂಖ್ಯೆ-9.

ಆನೆ–ಮಾನವ ಸಂಘರ್ಷಕ್ಕೆ ಇತಿಶ್ರೀ

ಬಂಬುಕಾಡು ಪೈಸಾರಿಯಲ್ಲಿ ನಿವಾಸಿಗಳಿಂದ ಅಹವಾಲು ಸ್ವೀಕರಿಸಿ ಸಚಿವ ಈಶ್ವರ ಖಂಡ್ರೆ ಭರವಸೆ




ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಅವರು ಬಂಬುಕಾಡು ಪೈಸಾರಿಯಲ್ಲಿ ನಿವಾಸಿಗಳಿಂದ ಅಹವಾಲು ಸ್ವೀಕರಿಸಿದರು. ನಂತರ ಆನೆ ದಾಳಿಯಿಂದ ಸಾವನ್ನಪ್ಪಿದ ಆಯಿಷ್ ಕುಟುಂಬದವರಿಗೆ ಪರಿಹಾರದ ಚೆಕ್ ವಿತರಿಸಿದರು. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಮತ್ತು ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

- ಕೊಡಗು ಜಿಲ್ಲೆಯಲ್ಲಿ ಸಾವಿರಕ್ಕೂ ಹೆಚ್ಚು ಆನೆಗಳಿವೆ
- 60ಕ್ಕೂ ಹೆಚ್ಚು ಆನೆಗಳು ಕಾಡಿನಿಂದ ಹೊರಕ್ಕೆ

ಮಡಿಕೇರಿ,ಆ.26– ಆನೆ–ಮಾನವ ಸಂಘರ್ಷಕ್ಕೆ ಇತಿಶ್ರೀ ಹಾಡಲು ರಾಜ್ಯ ಸರಕಾರ ದಿಟ್ಟಹೆಜ್ಜೆ ಇಟ್ಟಿದೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಅವರ ಮನವಿ ಮೇರೆಗೆ ಜಿಲ್ಲೆಗೆ ಆಗಮಿಸಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಆನೆಚೌಕೂರು ಗೇಟ್ ಬಳಿ ಶಾಸಕ ಪೊನ್ನಣ್ಣ ಮತ್ತು ಕಾಂಗ್ರೆಸ್ ಪಕ್ಷದ ಪ್ರಮುಖರು ಸ್ವಾಗತಿಸಿದರು.

ಬಳಿಕ ತಿತಿಮತಿ ಬಳಿಯ ಬಂಬುಕಾಡು ಪೈಸಾರಿಗೆ ಸಚಿವ ಈಶ್ವರ ಬಿ.ಖಂಡ್ರೆ ಭೇಟಿ ನೀಡಿ ಅಲ್ಲಿನ ನಿವಾಸಿಗಳಿಂದ ಅಹವಾಲು ಸ್ವೀಕರಿಸಿದರು. ತಿತಿಮತಿ ವ್ಯಾಪ್ತಿಯ ಕಾಡಂಚಿನಲ್ಲಿ 100 ಆದಿವಾಸಿ ಕುಟುಂಬಗಳು ನೆಲೆಸಿದ್ದು, ಆನೆಗಳಿಂದ ಸೂಕ್ತ ರಕ್ಷಣೆ ಇಲ್ಲದಾಗಿದೆ. ಈ ಹಿನ್ನೆಲೆಯಲ್ಲಿ ಈಗಿರುವ ಬ್ಯಾರಿಕೇಡ್ ಅನ್ನು ಮತ್ತೆ 5 ಕಿಮೀ ವ್ಯಾಪ್ತಿಗೆ ಅಳವಡಿಸಬೇಕು ಎಂದು ಆದಿವಾಸಿ ಮುಖಂಡರು ಸಚಿವರ ಗಮನ ಸೆಳೆದರು.

ಕಾಡಿನಿಂದ ಹೊರ ಬಂದಿರುವ ಕಾಡಾನೆಗಳನ್ನು ಕೂಡಲೇ ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ಸ್ಥಳಾಂತರಿಸಲು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಾನವ ಜೀವಹಾನಿ ಹಾಗೂ ಜನವಸತಿ ಪ್ರದೇಶಗಳಿಗೆ ಲಗ್ಗೆ ಇಡುತ್ತಿರುವ ಪುಂಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಬೇಕು, ಕಾಡಾನೆ ಸಮಸ್ಯೆಗಳಿರುವ ಪ್ರದೇಶಗಳಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡುವಂತೆ ಸಚಿವರು ಅಧಿಕಾರಿಗಳಿಗೆ ಸ್ಥಳದಲ್ಲೇ ಆದೇಶ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಈಶ್ವರ್ ಖಂಡ್ರೆ, ಕೊಡಗು ಜಿಲ್ಲೆಯಲ್ಲಿ 1000ಕ್ಕೂ ಹೆಚ್ಚು ಆನೆಗಳಿದ್ದು, 250ಕ್ಕೂ ಹೆಚ್ಚು ಆನೆಗಳು ಕಾಡಿನಿಂದ ಹೊರ ಬಂದಿರುವ ಮಾಹಿತಿ ಇದೆ. ವಿರಾಜಪೇಟೆ ವ್ಯಾಪ್ತಿಯಲ್ಲೇ 60ಕ್ಕೂ ಹೆಚ್ಚು ಆನೆಗಳು ಕಾಡಿನಿಂದ ಹೊರಬಂದಿವೆ. ಕಾಡಾನೆ ಮಾನವ ಸಂಘರ್ಷದಲ್ಲಿ ಕಳೆದ 15 ದಿನಗಳ ಅವಧಿಯಲ್ಲೇ 3 ಮಂದಿ ಪ್ರಾಣ ಕಳೆದುಕೊಂಡಿದ್ದು, ತೀವ್ರ ದುಃಖ ತಂದಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾಡಾನೆ ಮಾನವ ಸಂಘರ್ಷ ತಡೆಯಲು ಸರಕಾರ ಬದ್ಧವಾಗಿದೆ. ಮಾನವ ಜೀವ ಮುಖ್ಯವಾಗಿದ್ದು, ಇದಕ್ಕಾಗಿ ಶಾಶ್ವತ ಪರಿಹಾರ ರೂಪಿಸಲು ಸರಕಾರ ದಿಟ್ಟ ಹೆಜ್ಜೆಗಳನ್ನು ಇಟ್ಟಿದೆ. ಪುಂಡಾನೆಗಳನ್ನು ಗುರುತಿಸಿ ರೇಡಿಯೋ ಕಾಲರ್ ಅಳವಡಿಸಲು ಸೂಚಿಸಲಾಗಿದೆ. ತಿತಿಮತಿ ವ್ಯಾಪ್ತಿಯಲ್ಲಿ ಹೆಚ್ಚುವರಿಯಾಗಿ 5 ಕಿಮೀ ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೂ ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು. ಜಿಲ್ಲೆಯಲ್ಲಿ ಖಾಲಿ ಇರುವ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಶೀಘ್ರ ನೇಮಕ ಮಾಡಲಾಗುತ್ತದೆ. ಉತ್ತಮವಾಗಿ ಕಾರ್ಯ ನಿರ್ವಹಿಸುವ ಅಧಿಕಾರಿಗಳನ್ನೇ ಜಿಲ್ಲೆಗೆ ನೇಮಕ ಮಾಡಲು ಕ್ರಮ ಕೈಗೊಳ್ಳುವುದಾಗಿ ಸಚಿವ ಈಶ್ವರ್ ಖಂಡ್ರೆ ಭರವಸೆ ನೀಡಿದರು.

ಕಾಡಾನೆ ಹಾವಳಿ ಸಮಸ್ಯೆಯನ್ನು ಬಗೆಹರಿಸಲು ಕಳೆದ 20 ವರ್ಷಗಳಿಂದ ಮಾಡದ ಕಾರ್ಯವನ್ನು ಈಗಿನ ರಾಜ್ಯ ಸರಕಾರ ಕೈಗೊಳ್ಳುತ್ತಿದೆ. ಕಾಡಾನೆ ಸಮಸ್ಯೆಗೆ ಇತಿಶ್ರೀ ಹಾಡುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಕೊಡಗಿಗೆ ಭೇಟಿ ನೀಡಿದ್ದೇನೆ ಎಂದು ಖಂಡ್ರೆ ಹೇಳಿದರು.

ಪರಿಹಾರ ವಿತರಣೆ: ಇತ್ತೀಚೆಗೆ ಕಾಡಾನೆ ದಾಳಿಯಿಂದ ಮೃತಪಟ್ಟ ಸಿದ್ದಾಪುರ ಬಳಿಯ ಬಾಡಗ–ಬಾಣಂಗಾಲ ಗ್ರಾಮದ ನಿವಾಸಿ ಆಯಿಷ್(63) ಅವರ ಮನೆಗೆ ತೆರಳಿದ ಸಚಿವ ಖಂಡ್ರೆ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಬಳಿಕ ಮೃತರ ಪುತ್ರ ಲತೀಫ್ ಅವರಿಗೆ ಅರಣ್ಯ ಇಲಾಖೆಯ ಪರಿಹಾರದ ಚೆಕ್ ವಿತರಿಸಿದರು. ಈ ಸಂದರ್ಭದಲ್ಲಿ ಶಾಸಕ ಎ.ಎಸ್. ಪೊನ್ನಣ್ಣ, ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಮತ್ತು ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳು, ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಸೇರಿದಂತೆ ಮತ್ತಿತರರು ಹಾಜರಿದ್ದರು.

ಹೃದಯಾಘಾತದಿಂದ ಕೆಎಸ್‌ಆರ್‌ಪಿ ಹೆಡ್ ಕಾನ್ಸ್‌ಟೇಬಲ್ ನಿಧನ

ಕೊಳ್ಳೇಗಾಲದಲ್ಲಿ ಕರ್ತವ್ಯ ನಿರ್ವಹಣೆಗೆ ತೆರಳಿದ್ದಾಗ ಅನಾಹುತ

ಕುಂಜಿಲ ಗ್ರಾಮದಲ್ಲಿ ಸಕಲ ಗೌರವಗಳೊಂದಿಗೆ ಅಂತ್ಯಕ್ರಿಯೆ



ನಾಪೋಕ್ಲು, ಆ.26– ಕೊಳ್ಳೇಗಾಲದಲ್ಲಿ ಕರ್ತವ್ಯ ನಿರ್ವಹಣೆಗೆ ತೆರಳಿದ್ದ ಕೆಎಸ್‌ಆರ್‌ಪಿ ಹೆಡ್ ಕಾನ್ಸ್‌ಟೇಬಲ್ ಮೋಹನ್(44) ಅವರು ಹೃದಯಾಘಾತದಿಂದ ನಿಧನರಾಗಿದ್ದು, ಅವರ ಅಂತ್ಯಕ್ರಿಯೆಯನ್ನು ಪೊಲೀಸ್ ಇಲಾಖೆಯ ಸಕಲ ಗೌರವದೊಂದಿಗೆ ಹುಟ್ಟೂರು ಮಡಿಕೇರಿ ತಾಲೂಕು ಕುಂಜಿಲ ಗ್ರಾಮದಲ್ಲಿ ಶನಿವಾರ ನೆರವೇರಿಸಲಾಯಿತು.

ಕಾವೇರಿ ನೀರು ಬಿಡುಗಡೆ ಸಂಬಂಧ ಬಂದೋಬಸ್ತ್ ಕರ್ತವ್ಯಕ್ಕಾಗಿ ಕೊಳ್ಳೇಗಾಲಕ್ಕೆ ಕೆಎಸ್‌ಆರ್‌ಪಿ ಮೈಸೂರು ಬೆಟಾಲಿಯನ್‌ನ 23 ಸಿಬ್ಬಂದಿಗಳು ಎರಡು ದಿನಗಳ ಹಿಂದೆ ಕರ್ತವ್ಯಕ್ಕೆ ನಿಯೋಜಿಸಿದ್ದು ಇದರಲ್ಲಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮೋಹನ್ ಕೆ.ಎನ್. ಕೂಡ ಇದ್ದರು. ಅಲ್ಲಿನ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ತಂಗಿದ್ದ. ಶುಕ್ರವಾರ ಕರ್ತವ್ಯ ಮುಗಿಸಿ ಹಾಸ್ಟೆಲ್‌ನಲ್ಲಿದ್ದ ಮೋಹನ್ ಹೃದಯಾಘಾತದಿಂದ ಮೃತಪಟ್ಟರು.

ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಶನಿವಾರ ಮೈಸೂರಿನ ಕೆಎಸ್‌ಆರ್‌ಪಿ ಅಧಿಕಾರಿ ಎ.ಬಿ.ಸಂಜೀವ ಅವರ ಸಮ್ಮುಖದಲ್ಲಿ ಸಿಬ್ಬಂದಿ ಕೋವಿಯಿಂದ ಗಾಳಿಯಲ್ಲಿ ಗುಂಡು ಹಾರಿಸುವುದರ ಮೂಲಕ ಅಂತಿಮ ಗೌರವದೊಂದಿಗೆ ಹುಟ್ಟೂರು ಕುಂಜಿಲದಲ್ಲಿ ಅಂತ್ಯಸಂಸ್ಕಾರ ನೆರವೇರಿತು. ಮೃತರು ಕೆಎಸ್‌ಆರ್‌ಪಿ ಪೊಲೀಸ್ ಇಲಾಖೆಯಲ್ಲಿ 24 ವರ್ಷಗಳ ಸೇವೆ ಸಲ್ಲಿಸುತ್ತಿದ್ದರು. ವೀರಪ್ಪನ್ ಕಾರ್ಯಾಚರಣೆಯಲ್ಲಿ ಹಾಗೂ ನಕ್ಸಲೈಟ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು ವಿಶೇಷ ಪ್ರಶಸ್ತಿ ಗೌರವಕ್ಕೆ ಭಾಜನರಾಗಿದ್ದರು.

ಇವರು ಕಕ್ಕಬೆ ಗ್ರಾಮ ಪಂಚಾಯಿತಿಯ ಕುಂಜಿಲ ಗ್ರಾಮದ ದಿವಂಗತ ಕೈಬುಲಿರ ಸಿ.ನಾಣಯ್ಯ ಮತ್ತು ಲಲಿತ ದಂಪತಿ ಪುತ್ರರಾಗಿದ್ದು. ಪತ್ನಿ ಉಷಾ ಬಿ.ಪಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಆ.30, ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಪೌಳಿ ಉದ್ಘಾಟನೆ



ನಾಪೋಕ್ಲು, ಆ.26– ಸಮೀಪದ ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಪೌಳಿ ಉದ್ಘಾಟನಾ ಸಮಾರಂಭ ಆ.30ರಂದು ಬೆಳಗ್ಗೆ 10.30 ಗಂಟೆಗೆ ನಡೆಯಲಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಕೊಡಗು ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ವಿರಾಜಪೇಟೆ ವಿಧಾನಸಭಾ ಶಾಸಕ ಎ.ಎಸ್. ಪೊನ್ನಣ್ಣ,ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂತರ್‌ಗೌಡ, ಮಾಜಿ ಸಂಸದ ಸಿ.ಎಸ್.ಪುಟ್ಟರಾಜು, ದಾನಿ ಹಾಗೂ ಮಾಜಿ ಸಂಸದ ಡಿ.ಕುಪೇಂದ್ರ ರೆಡ್ಡಿ ಪಾಲ್ಗೊಳ್ಳಲಿದ್ದಾರೆ

ಪೌಳಿ ಉದ್ಘಾಟನೆಯ ಅಂಗವಾಗಿ ಮಂಗಳವಾರ ಸಂಜೆ 5 ಗಂಟೆಯಿಂದ ಆಶ್ಲೇಷ ಬಲಿ, ವಾಸ್ತು ಹೋಮ, ಸುದರ್ಶನ ಹೋಮ, ವಾಸ್ತು ಬಲಿ ನಡೆಯಲಿದೆ. ಬುಧವಾರ ಬೆಳಗ್ಗೆ 5 ಗಂಟೆಗೆ ಲಕ್ಷ್ಮಿ ಗಣಪತಿ ಹೋಮ, ರುದ್ರಾಭಿಷೇಕ, ಶತಾರುದ್ರಾಭಿಷೇಕ, ರುದ್ರ ಹೋಮ ಹಾಗೂ ಸುಬ್ರಹ್ಮಣ್ಯ ಹೋಮ ನಡೆಯಲಿದೆ. 10.30ಕ್ಕೆ ಪೌಳಿ ಉದ್ಘಾಟನೆ ನೆರವೇರಲಿದ್ದು ಬಳಿಕ ತುಲಾಭಾರ ಸೇವೆ, ಮಹಾಮಂಗಳಾರತಿ, ದೇವರ ನೃತ್ಯ ಬಲಿ ನಡೆಯಲಿದೆ ಬಳಿಕ ಭಕ್ತಾದಿಗಳಿಗೆ ಅನ್ನದಾನ ನಡೆಯಲಿದೆ ಎಂದು ದೇವಾಲಯದ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಡಾ. ನಾ.ಸು. ಹರ್ಡಿಕರ್ ಪುಣ್ಯಸ್ಮರಣೆ ಆಚರಣೆ



ಮಡಿಕೇರಿ,ಆ.26– ಭಾರತ ಸೇವಾದಳ ಕೊಡಗು ಜಿಲ್ಲಾ ಸಮಿತಿ ವತಿಯಿಂದ ನಗರದ ಸಂತ ಮೈಕಲರ ಶಾಲೆಯಲ್ಲಿ ಡಾ. ನಾ.ಸು ಹರ್ಡಿಕರ್ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಕ ಜಿ.ಇ. ರೇವಣ್ಣ ಮಾತನಾಡಿ, ಭಾರತ ಸೇವಾದಳ ಸೇರಿದಂತೆ ಹಲವು ಸಮಾಜಮುಖಿ ಚಿಂತನೆಯ ಸಂಸ್ಥೆಗಳನ್ನು ಹುಟ್ಟು ಹಾಕುವ ಮೂಲಕ ಸಮಾಜದ ಏಳಿಗೆಗೆ ಶ್ರಮಿಸಿದ ಭಾರತ ಸೇವಾದಳ ಸಂಸ್ಥಾಪಕರಾದ ನಾ.ಸು. ಹರ್ಡಿಕರ್ ಅವರ ತತ್ವಾದರ್ಶಗಳನ್ನು ನಾವು ರೂಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಭಾರತ ಸೇವಾದಳ ಎಂದೊಡನೆ ನೆನಪಿಗೆ ಬರುವ ಹೆಸರೇ ಡಾ.ನಾರಾಯಣ್ ಸುಬ್ಬರಾವ್ ಹರ್ಡಿಕರ್, ಇವರು ಹಾವೇರಿ ಜಿಲ್ಲೆಯ ಹಾನಗಲ್ಲು ತಾಲೂಕಿನ ತಿಳವಳ್ಳಿ ಗ್ರಾಮದಲ್ಲಿ 1889ನೇ ಮೇ 7ರಂದು ಸುಬ್ಬರಾವ್ ಹಾಗೂ ಯಮುನಬಾಯಿ ಅವರ 7ನೇ ಪುತ್ರರಾಗಿ ಜನಿಸಿದರು ಎಂದರು.

ಜಿಲ್ಲಾ ಕಾರ್ಯದರ್ಶಿ ಮೋಂತಿ ಗಣೇಶ್ ಮಾತನಾಡಿ, ಭಾ.ಸೇ.ದ ಸಂಘಟನ ಕೌಶಲ್ಯತೆಯನ್ನು, ದೇಶಾಭಿಮಾನ, ರಾಷ್ಟ್ರೀಯತೆ ಹಾಗೂ 1924ರ ಬೆಳಗಾವಿ ಅಧಿವೇಶನದಲ್ಲಿ ಇವರ ಮುಂದಾಳತ್ವವನ್ನು ವಿಧಿವತ್ತಾದ, ಧ್ವಜವಂದನೆ ಹಾಗೂ ಸ್ವಯಂ ಸೇವಕರ ಶಿಸ್ತು, ಸಂಯಮದ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಸಂತ ಮೈಕಲರ ಶಾಲೆಯ ಮುಖ್ಯ ಶಿಕ್ಷಕಿ ಪ್ರತಿಮ ಸಿಸ್ಟರ್ ಮತ್ತು ಸಿಬ್ಬಂದಿ ವರ್ಗದವರಾದ ರಜೀನ, ಎಲಿಜಾ, ಕೇಶವ, ಶಿಕ್ಷಕರಾದ ಸುನಿತ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಸೆ.3 ರಂದು ಓಣಂ ಆಚರಣೆ



ಗೋಣಿಕೊಪ್ಪ ಆ.26– ಚೆನ್ನಯ್ಯನಕೋಟೆ ಓಣಂ ಸಮಿತಿ ವತಿಯಿಂದ ಸೆ.3 ರಂದು ಚೆನ್ನಯ್ಯನಕೋಟೆ ಶಾಲಾ ಮೈದಾನದಲ್ಲಿ ಓಣಂ ಆಚರಣೆ ಆಯೋಜಿಸಲಾಗಿದೆ ಎಂದು ಸಮಿತಿ ಉಪಾಧ್ಯಕ್ಷ ಕೆ.ಎಂ. ರತೀಶ್‌ಕುಮಾರ್ ತಿಳಿಸಿದ್ದಾರೆ.

ಓಣಂ ಪ್ರಯುಕ್ತ ಎಲ್ಲಾ ಸಾರ್ವಜನಿಕರು ಮುಕ್ತವಾಗಿ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದ್ದು, ಓಟ, ಹಜ್ಜಜಗ್ಗಾಟ, ವಿಷದ ಚೆಂಡು, ಮಡಕೆ ಒಡೆಯುವ ಸ್ಪರ್ಧೆ, ಮ್ಯೂಸಿಕ ಚೇರ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಳಗ್ಗೆ 8 ಗಂಟೆಗೆ ಅಯ್ಯಪ್ಪ ದೇವಸ್ಥಾನದಲ್ಲಿ ಪೂಜೆ ನಡೆಸಿ ಚಂಡೆ ವಾದ್ಯದೊಂದಿಗೆ ಶಾಲಾ ಮೈದಾನಕ್ಕೆ ಮೆರವಣಿಗೆಯಲ್ಲಿ ತೆರಳಲಾಗುವುದು. ನಂತರ ಮಕ್ಕಳ ಛದ್ಮವೇಷ, ಕ್ರೀಡಾಕೂಟ ನಡೆಯಲಿದೆ. ಮಧ್ಯಾಹ್ನ ರೋಚಸ್ ಶಾದಿ ಮಹಲ್‌ನಲ್ಲಿ ಓಣಂ ನಡೆಯಲಿದೆ. ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಆರ್. ಹರೀಶ್, ಕ್ರೀಡಾಕೂಟ ಸಹ ಉಸ್ತುವಾರಿ ಅನಿಲ್ ಮೋನು ಇದ್ದರು.

ಚಾ.ನಗರ ಜಿಲ್ಲೆಯಲ್ಲಿ ಕೈಗಾರಿಕೆ ಉತ್ತೇಜನಕ್ಕೆ ನೆರವು

ಬದನಗುಪ್ಪೆಯಲ್ಲಿ ಕೈಗಾರಿಕೆ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಿದ ಡಿಸಿಎಂ ಭರವಸೆ



ಚಾಮರಾಜನಗರ, ಆ.26– ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಮುಂದೆ ಬರುವವರಿಗೆ ಸರ್ಕಾರದಿಂದ ಅಗತ್ಯ ನೆರವು ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ.

ನಗರದ ಹೊರವಲಯದ ಬದನಗುಪ್ಪೆ ಕೈಗಾರಿಕೆ ಪ್ರದೇಶದಲ್ಲಿ ಸ್ಥಾಪಿಸಲಿರುವ ಟೆಕ್ರಾನ್ ಬ್ಯಾಟರೀಸ್ ಕಾರ್ಖಾನೆಗೆ ಶಂಕುಸ್ಥಾಪನೆ ನೆರವೇರಿಸುವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ಟೆಕ್ರೇನ್ ಬ್ಯಾಟರಿಸ್ ಉತ್ಪಾದನೆಯ ಹೊಸ ಪ್ಲಾಂಟ್ ಅನ್ನು ನಿರ್ಮಿಸಲಾಗುತ್ತಿದ್ದು, ಇದರ ಭೂಮಿಪೂಜೆಗೆ ಬಂದಿದ್ದೇನೆ. ಖಾಸಗಿಯವರು ಜಿಲ್ಲೆಯಲ್ಲಿ ಕೈಗಾರಿಕೆ ತೆರೆಯಲು ಮುಂದಾದರೆ ಸರ್ಕಾರ ಎಲ್ಲ ರೀತಿಯ ಪ್ರೋತ್ಸಾಹ ನೀಡಲಿದೆ. ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿ ಮಾಡುವವರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ನಗರದ ಬದನಗುಪ್ಪೆ ಕೈಗಾರಿಕೆ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರು ಸ್ಥಳೀಯರಿಗೆ ಉದ್ಯೋಗ ನೀಡಲು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಟೆಕ್ರಾನ್ ಬ್ಯಾಟರೀಸ್ ಕಾರ್ಖಾನೆ ಆರಂಭವಾಗಲು ಇನ್ನು 1 ವರ್ಷ ಕಾಲಾವಕಾಶ ಬೇಕಾಗಲಿದೆ. ಸ್ಥಳೀಯರು ಹಾಗೂ ಇತರರು ಸಂಪೂರ್ಣ ಸಹಕಾರ ನೀಡಬೇಕು. ಇದಲ್ಲದೆ ಕಾರ್ಖಾನೆ ಸ್ಥಾಪನೆಗೆ ರಾಜ್ಯ ಸರ್ಕಾರ ಎಲ್ಲ ಸಹಕಾರ ನೀಡಲಿದೆ ಎಂದರು.

ಬ್ಯಾಟರಿ ತಯಾರಿಕೆ ಸಣ್ಣ ಉದ್ಯಮವಲ್ಲ. ಹಲವು ಸವಾಲುಗಳಿಂದ ಕೂಡಿದೆ. ಆರಂಭವಾದ ಬಳಿಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿ ಆಗಲಿದೆ. ಕಾಂಗ್ರೆಸ್ ಸರ್ಕಾರ 2013ರಲ್ಲಿ ಅಧಿಕಾರ ಹಿಡಿದಾಗ 10 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿತ್ತು. ನಾವು 24 ಮೆಗಾವ್ಯಾಟ್ ತಯಾರಿಕೆ ಮಾಡಿದೆವು ಎಂದು ತಿಳಿಸಿದರು.

ಪಾವಗಡದಲ್ಲಿ ರೈತರ ಸಹಭಾಗಿತ್ವದಲ್ಲಿ ಸೋಲಾರ್ ಮೂಲಕ ವಿದ್ಯುತ್ ತಯಾರಿಕೆ ಆರಂಭಿಸಿ ಯಶಸ್ವಿಯಾಗಿದ್ದೇವೆ. ಇದನ್ನು ಕೇಂದ್ರ ಸರ್ಕಾರವೇ ಮೆಚ್ಚಿಕೊಂಡು ಎಲ್ಲ ಕಡೆ ವಿಸ್ತರಿಸಲು ಮುಂದಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಚಾಮರಾಜನಗರ ಹಿಂದುಳಿದ ಜಿಲ್ಲೆ ಎಂದು ಗುರುತಿಸಲ್ಪಟ್ಟಿದೆ. ಬಡವರು, ನಿರುದ್ಯೋಗಿಗಳು ಹೆಚ್ಚಾಗಿದ್ದಾರೆ. ಜಿಲ್ಲೆಯ ಅಭಿವೃದ್ಧಿ ಎಂದರೆ ರಸ್ತೆ ನಿರ್ಮಾಣವಲ್ಲ. ಜನರ ಕೈಗೆ ಕೆಲಸ ನೀಡುವುದೇ ಆಗಿದೆ ಎಂದರು. ವಿದೇಶದಿಂದ ಆಗಮಿಸಿ ಇಲ್ಲಿ ಟೆಕ್ರಾನ್ ಬ್ಯಾಟರೀಸ್ ಕಾರ್ಖಾನೆ ಆರಂಭ ಮಾಡುತ್ತಿದ್ದಾರೆ. ಸುಮಾರು 1500 ಕೋಟಿ ರೂ. ವೆಚ್ಚದಲ್ಲಿ ಕಾರ್ಖಾನೆ ನಿರ್ಮಾಣವಾಗಲಿದೆ. ವಿದೇಶಗಳಿಗೆ ಅಗತ್ಯವಿರುವ ಬ್ಯಾಟರಿ ತಯಾರಿಸಿ ರಫ್ತು ಮಾಡಲಿ ಎಂದು ಶುಭ ಹಾರೈಸಿದರು.

ಸಮಾರಂಭದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಎ.ಆರ್.ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ ಡಿಸಿ ಸಿ.ಟಿ.ಶಿಲ್ಪಾನಾಗ್, ಎಡಿಸಿ ಗೀತಾ ಹುಡೇದ, ಎಸ್ಪಿ ಪದ್ಮಿನಿ ಸಾಹು, ಟೆಕ್ರಾನ್ ಬ್ಯಾಟರೀಸ್ ಮುಖ್ಯಸ್ಥರಾದ ಸಿ.ಎಸ್. ರಾಜು, ಧನಂಜಯ್, ತನು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಇತರರಿದ್ದರು.

ಗೃಹಲಕ್ಷ್ಮಿ ಯೋಜನೆ : ಸಿದ್ಧತೆಗಳ ಪರಿಶೀಲನೆ



ಚಾಮರಾಜನಗರ, ಆ.26– ಕುಟುಂಬದ ಯಜಮಾನಿ ಮಹಿಳೆಗೆ ತಿಂಗಳಿಗೆ 2 ಸಾವಿರ ರೂ. ನೀಡುವ ರಾಜ್ಯಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಗೃಹಲಕ್ಷ್ಮಿ ಯೋಜನೆಯ ಚಾಲನೆ ಬೃಹತ್ ಕಾರ್ಯಕ್ರಮ ಮೈಸೂರಿನಲ್ಲಿ ಆ.30ರಂದು ನಡೆಯಲಿರುವ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯಿಂದ ಫಲಾನುಭವಿಗಳನ್ನು ಕರೆತರುವ ಸಂಬಂಧ ಕೈಗೊಂಡಿರುವ ಸಿದ್ಧತೆಗಳನ್ನು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್‌ಕರ್ ಹಾಗೂ ಸಮಾಜ ಕಲ್ಯಾಣ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಇಂದು ಪರಿಶೀಲಿಸಿದರು.

ಕೊಳ್ಳೇಗಾಲ ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣ ಹಾಗೂ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಗೃಹಲಕ್ಷ್ಮಿ ಯೋಜನೆ ಪೂರ್ವಸಿದ್ಧತೆ ಪರಿಶೀಲನೆಗಾಗಿ ಇಂದು ನಡೆದ ಅಧಿಕಾರಿಗಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಪ್ರತ್ಯೇಕ ಸಭೆಯಲ್ಲಿ ಮೈಸೂರಿನಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳನ್ನು ಕರೆದುಕೊಂಡು ಹೋಗಿ ಬರುವ ಸಂಬಂಧ ಚಾಮರಾಜನಗರ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಸಂಪೂರ್ಣ ಸಿದ್ಧತೆಗಳನ್ನು ಪರಿಶೀಲಿಸಿದರು.

ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾಗಿರುವ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾಗಿರುವ ಮಹಿಳಾ ಫಲಾನುಭವಿಗಳಿಗೆ 2 ಸಾವಿರ ರೂ. ಹಣವನ್ನು ಖಾತೆಗಳಿಗೆ ಜಮೆ ಮಾಡುವ ಕಾರ್ಯಕ್ಕೆ ಆ.30ರಂದು ಚಾಲನೆ ನೀಡಲಾಗುತ್ತದೆ. ಕಾರ್ಯಕ್ರಮದಲ್ಲಿ ಬಟನ್ ಒತ್ತುವ ಮೂಲಕ ಏಕಕಾಲದಲ್ಲಿ ಎಲ್ಲಾ ಮಹಿಳಾ ಫಲಾನುಭವಿಗಳ ಖಾತೆಗೆ ಗೃಹಲಕ್ಷ್ಮಿ ಯೋಜನೆಯಡಿ 2 ಸಾವಿರ ರೂ. ಹಣ ಜಮೆಯಾಗಲಿದೆ. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಫಲಾನುಭವಿಗಳನ್ನು ಕರೆತರುವ ಜವಾಬ್ದಾರಿಯನ್ನು ಸಮರ್ಪಕವಾಗಿ ಹೊಣೆಗಾರಿಕೆಯಿಂದ ನಿರ್ವಹಿಸುವಂತೆ ಸಚಿವರುಗಳು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಮಹಿಳೆಯರಿಗೆ ನೆರವು ನೀಡುವ ಸರ್ಕಾರದ ಮಹತ್ವದ ಕಾರ್ಯಕ್ರಮಕ್ಕೆ ಫಲಾನುಭವಿಗಳನ್ನು ಮೈಸೂರಿಗೆ ನಿಗದಿತ ಸಮಯಕ್ಕೆ ಕರೆತರಬೇಕು. ಸರ್ಕಾರವೇ ಪ್ರತಿ ಗ್ರಾಮ ಪಂಚಾಯಿತಿಯಿಂದ ಉಚಿತ ಬಸ್ಸುಗಳ ವ್ಯವಸ್ಥೆ ಮಾಡಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್‌ಕರ್ ಮಾತನಾಡಿ, ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ರಾಜ್ಯ ಸರ್ಕಾರ ಗೃಹಲಕ್ಷ್ಮಿ ಯೋಜನೆ ಜಾರಿ ಮಾಡುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಯೋಜನೆಗೆ ಶೇ.87ರಷ್ಟು ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಮಾತನಾಡಿ, ಗೃಹಲಕ್ಷ್ಮಿ ಯೋಜನೆಯಡಿ 1.32 ಕೋಟಿ ಫಲಾನುಭವಿಗಳಿಗೆ ಪ್ರತಿ ತಿಂಗಳಿಗೆ 2 ಸಾವಿರ ರೂ. ನೆರವು ನೀಡುವ ಗುರಿ ಹೊಂದಲಾಗಿದೆ. ಈಗಾಗಲೇ 1.10 ಕೋಟಿ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ. ನೋಂದಣಿಯಾದ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡುವ ಮಹತ್ತರ ಕಾರ್ಯಕ್ರಮಕ್ಕೆ ಮೈಸೂರಿನಲ್ಲಿ ಎಲ್ಲಾ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು. ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರು ಜಿಲ್ಲೆಯಲ್ಲಿ ಕೈಗೊಂಡಿರುವ ಸಿದ್ಧತೆಗಳ ಕುರಿತು ವಿವರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸರಸ್ವತಿ, ಉಪ ವಿಭಾಗಾಧಿಕಾರಿ ಮಹೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಗೀತಾಲಕ್ಷ್ಮೀ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ನಗರದಲ್ಲಿ ಕಾರ್ಮಿಕರ ಭವಿಷ್ಯ ನಿಧಿ ಕಾರ್ಯಕ್ರಮ

ಚಾಮರಾಜನಗರ, ಆ.26– ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರ ಕಾರ್ಯಕ್ರಮವನ್ನು ಆ.28ರಂದು ಬೆಳಗ್ಗೆ 9 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆಯ ಕೆಡಿಪಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಪಿ.ಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಹಾಜರಾಗಿ ಮಾಹಿತಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೈಸೂರಿನ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿ ಅಥವಾ ಸಾರ್ವಜನಿಕ ಸಂಪರ್ಕ ಅಧಿಕಾರಿ (ದೂ.ಸಂ. 0821–2599200/222) ಸಂಪರ್ಕಿಸಬಹುದು. ಅಲ್ಲದೇ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿಯ ಸಾಮಾಜಿಕ ಮಾಧ್ಯಮ ವೇದಿಕೆ (@emfomysore) ಸಂಪರ್ಕಿಸಿ ಸಹ ಮಾಹಿತಿ ಪಡೆಯಬಹುದೆಂದು ಕ್ಷೇತ್ರೀಯ ಭವಿಷ್ಯ ನಿಧಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಡಿಕೆ ಈಡೇರಿಕೆಗಾಗಿ ಡಿಸಿಎಂಗೆ ರೈತರ ಮನವಿ



ಚಾಮರಾಜನಗರ, ಆ.26– ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಶನಿವಾರ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಸಮಿತಿಯಿಂದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಡಿ.ಕೆ. ಶಿವಕುಮಾರ್ ಅವರನ್ನು ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಭೇಟಿ ಮಾಡಿದ ರೈತರು ಮನವಿ ಸಲ್ಲಿಸಿದರು.

ಕಬ್ಬಿನ ಬಾಕಿ ಪ್ರತಿ ಟನ್‌ಗೆ 150ರೂ. ಕೊಡಿಸಬೇಕು. ಮೇಕೆದಾಟು ಯೋಜನೆಯನ್ನು ಕೂಡಲೇ ಪ್ರಾರಂಭಿಸಬೇಕು. ಕಾವೇರಿ ಹಾಗೂ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ಹರಿಯುವ ನೀರನ್ನು ನಿಲ್ಲಿಸಬೇಕು. ಜಲಾಶಯಗಳ ಅಚ್ಚುಕಟ್ಟು ವ್ಯಾಪ್ತಿಯ ಪ್ರದೇಶಕ್ಕೆ ನೀರು ಹರಿಸಬೇಕು. ನೀರು ಬಿಡಲು ಆಗದಿದ್ದರೆ ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ರೈತರು ಆಗ್ರಹಿಸಿದರು.

ಚಾಮರಾಜನಗರ ಕೈಗಾರಿಕಾ ಪ್ರದೇಶದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕು. ಕೃಷಿಗೆ ಸಮರ್ಪಕ ವಿದ್ಯುತ್ ನೀಡಬೇಕು. ಕರಾ ನಿರಾಕರಣೆ ಚಳವಳಿಯ ವಿದ್ಯುತ್ ಬಾಕಿಯನ್ನು ಸರ್ಕಾರವೇ ಭರಿಸಬೇಕು. ಅನ್ನಭಾಗ್ಯ ಯೋಜನೆಗೆ ರೈತರಿಂದ ನೇರವಾಗಿ ಭತ್ತ, ರಾಗಿ, ಜೋಳ, ಸಿರಿಧಾನ್ಯ ಖರೀದಿಸಬೇಕು. ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರು ಇಟ್ಟಿರುವ ಚಿನ್ನವನ್ನು ಕೂಡಲೇ ಕೊಡಿಸಬೇಕು ಎಂದು ಒತ್ತಾಯಿಸಿದರು.

ರೈತರ ಮನವಿಯನ್ನು ಸ್ವೀಕರಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂಬಂಧಪಟ್ಟವರ ಗಮನಕ್ಕೆ ತಂದು ಎಲ್ಲಾ ಸಮಸ್ಯೆಂಯನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದಯ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಹೊನ್ನೂರು ಬಸವಣ್ಣ, ಪಟೇಲ್ ಶಿವಮೂರ್ತಿ, ನಾಗರಾಜು, ಹರ್ಷ, ಮಂಜುನಾಥ್, ಹಾಡ್ಯ ರವಿ ಸೇರಿದಂತೆ ಇತರರಿದ್ದರು.

ಹುಸ್ನಾ ಜೋಹರ್‌ಗೆ ಪಿಎಚ್.ಡಿ

ಯಳಂದೂರು, ಆ.26– ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೇಡಿಯಾಲಜಿ ಇಮೇಜಿಂಗ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸೈಯದ್ ಉವೇಸ್ ಅಹಮ್ಮದ್‌ರವರ ಪತ್ನಿ ಆರ್.ಬಿ. ಹುಸ್ನಾ ಜೋಹರ್ ಅವರು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ.

ಪ್ರೊ. ಡಾ.ಬಿ.ಆರ್. ಸುಜಾತ ಎಂಬುವವರ ಮಾರ್ಗದರ್ಶನದಲ್ಲಿ ಇವರು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಸೈನ್ಸ್ ವಿಭಾಗದಲ್ಲಿ ಆಡಾಪ್ಟಿವ್, ಒಎಫ್‌ಡಿಎಮ್–ಎಮ್‌ಐಎಮ್‌ಓ ಟೆಕ್ನಿಕ್ಸ್ ಫರ್ ವೈರ್‌ಲೆಸ್ ಸೆನ್ಸಾರ್ ನೆಟ್‌ವರ್ಕ್ ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದರು. ಈ ಹಿನ್ನೆಲೆಯಲ್ಲಿ ಇವರಿಗೆ ಪಿಎಚ್‌ಡಿ ಪದವಿ ಲಭಿಸಿದೆ.

ಕಾಂಗ್ರೆಸ್ ಸಚಿವರಲ್ಲಿ ಹೊಂದಾಣಿಕೆ ಕೊರತೆಯೇ?

ಒಂದೇ ಕಾರ್ಯಕ್ರಮಕ್ಕೆ ಪ್ರತ್ಯೇಕ ಹೆಲಿಕಾಪ್ಟರ್‌ನಲ್ಲಿ ಬಂದ ಡಿಸಿಎಂ, ಸಚಿವ

ಚಾಮರಾಜನಗರ, ಆ.26– ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ಸಚಿವರ ನಡುವೆ ಹೊಂದಾಣಿಕೆ ಇಲ್ಲ ಎಂಬುದು ಚಾಮರಾಜನಗರದಲ್ಲಿ ಶನಿವಾರ ಸಾಬೀತಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ ಅವರ ನಡುವೆ ಇರುವ ವೈಮನಸ್ಸು ಹಾಗೂ ಮನಸ್ತಾಪ ಮತ್ತೊಮ್ಮೆ ಸಾಬೀತಾಗಿದೆ.

ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದ ಬಳಿ ಇರುವ ಕೈಗಾರಿಕಾ ಪ್ರದೇಶದಲ್ಲಿ ಟೆಕ್ರೇನ್ ಬ್ಯಾಟರಿಸ್ ಉತ್ಪಾದನಾ ಘಟಕ ಶಂಕುಸ್ಥಾಪನಾ ಸಮಾರಂಭ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಡಿ.ಕೆ. ಶಿವಕುಮಾರ್ ಹಾಗೂ ಭೈರತಿ ಸುರೇಶ್ ಅವರನ್ನು ಆಹ್ವಾನಿಸಲಾಗಿತ್ತು. ಭೈರತಿ ಸುರೇಶ್ ಅವರು ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಬೆಳಗ್ಗೆ 11.15ಕ್ಕೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕೆ ಬಂದಿಳಿದರು. ನಂತರ ಅವರು ಕೈಗಾರಿಕಾ ವಸಾಹತು ಪ್ರದೇಶಕ್ಕೆ ತೆರಳಿ ಶಂಕುಸ್ಥಾಪನಾ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವೇದಿಕೆಯಲ್ಲಿ ಮಾತನಾಡಿ, ಬೆಂಗಳೂರಿಗೆ ತೆರಳಿದರು.

ಇದಾದ ಅರ್ಧಗಂಟೆಯಲ್ಲಿ ಡಿ.ಕೆ. ಶಿವಕುಮಾರ್ ಅವರು ಮತ್ತೊಂದು ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿನಿಂದ ನಗರಕ್ಕೆ ಆಗಮಿಸಿದರು. ನಂತರ ಅವರು ಕೈಗಾರಿಕಾ ವಸಾಹತು ಪ್ರದೇಶಕ್ಕೆ ತೆರಳಿ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬೆಂಗಳೂರಿಗೆ ತೆರಳಿದರು.

ಇವರಿಬ್ಬರು ಒಂದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನಿಂದ ನಗರಕ್ಕೆ ಆಗಮಿಸಿದ್ದರೂ ಸಹ ಎಲ್ಲೂ ಸಹ ಮುಖಾಮುಖಿ ಆಗಲಿಲ್ಲ. ಇವರಿಬ್ಬರ ನಡುವೆ ಹೊಂದಾಣಿಕೆ ಇದ್ದರೆ, ಒಂದೇ ಹೆಲಿಕಾಪ್ಟರ್‌ನಲ್ಲಿ ಆಗಮಿಸಿ ವಾಪಸ್ ತೆರಳಬಹುದಿತ್ತು. ಆದರೆ, ಇವರಿಬ್ಬರು ಪ್ರತ್ಯೇಕ ಹೆಲಿಕಾಪ್ಟರ್‌ನಲ್ಲಿ ಆಗಮಿಸಿ ಪ್ರತ್ಯೇಕವಾಗಿ ತೆರಳಿದ್ದು, ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಸಾಕ್ಷೀಕರಿಸಿತು. ಸಚಿವರಿಬ್ಬರ ಈ ನಡೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಇರಿಸುಮುರಿಸು ತರಿಸಿದ್ದು ಸುಳ್ಳಲ್ಲ.

ಒಂದನೇ ಪುಟದಿಂದ

‘ಶಿವಶಕ್ತಿ’ ಸ್ಥಳ

ಭೇಟಿಯಾಗಿ ಚಂದ್ರನ ಮೇಲೆ ಯಶಸ್ವಿಯಾಗಿ ವಿಕ್ರಮ್ ಇಳಿಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು. ಮುಂದುವರೆದು ಮಾತನಾಡಿದ ಅವರು, ಇಂದು ವಿಭಿನ್ನ ಮಟ್ಟದ ಸಂತೋಷವನ್ನು ಅನುಭವಿಸುತ್ತಿದ್ದೇನೆ. ಇಂತಹ ಸಂದರ್ಭಗಳು ಒದಗಿಬರುವುದು ಬಹಳ ಅಪರೂಪ. ಈ ಬಾರಿ ನಾನು ತುಂಬಾ ಸಂತುಷ್ಟನಾಗಿದ್ದೇನೆ. ನಾನು ದಕ್ಷಿಣ ಆಫ್ರಿಕಾದ ಪ್ರವಾಸದಲ್ಲಿದ್ದರೂ ನನ್ನ ಮನಸ್ಸು ನಿಮ್ಮೊಂದಿಗಿತ್ತು. ನಾನು ಭಾರತಕ್ಕೆ ಬಂದ ಕೂಡಲೇ ನಿಮ್ಮನ್ನು ಆದಷ್ಟು ಬೇಗ ನೋಡಬೇಕು ಎನಿಸಿತು. ಮೊದಲು ನಿಮ್ಮ ದರ್ಶನ ಪಡೆದು, ನಿಮಗೆ ಸೆಲ್ಯೂಟ್ ಹೊಡೆಯಲು ನಿರ್ಧರಿಸಿದೆ ಎಂದಾಗ ಅವರ ಕಣ್ಣಂಚಿನಲ್ಲಿ ಕಣ್ಣೀರು ಇಣುಕಿತು.

ಯಾರು ಮಾಡದ ಕೆಲಸವನ್ನು ನಾವು ಮಾಡಿ ತೋರಿಸಿದ್ದೇವೆ. ಇದು ಇಂದಿನ ಭಾರತ. ನಿರ್ಭೀತ ಮತ್ತು ಹೋರಾಟದ ದೇಶ. ಹೊಸದಾಗಿ ಆಲೋಚಿಸುವ ಚಿಂತನೆಗಳು ನಮ್ಮಲ್ಲಿ ಇವೆ ಎಂಬುದು ಬಿಂಬಿತವಾಯಿತು. ಒಂದೆಡೆ ವಿಕ್ರಮನ ಮೇಲಿನ ನಂಬಿಕೆ ಮತ್ತೊಂದು ಕಡೆ ರೋವರ್ ಪ್ರಗ್ಯಾನ್ ಶಕ್ತಿಯ ಫಲವಾಗಿ ಮೊದಲ ಬಾರಿಗೆ ಆ ಸ್ಥಳದ ಚಿತ್ರವನ್ನು ನಮ್ಮ ಕಣ್ಣುಗಳಿಂದ ನೋಡುತ್ತಿದ್ದೇವೆ. ಈ ಚಿತ್ರವನ್ನು ಜಗತ್ತಿಗೆ ತೋರಿಸುವ ಕೆಲಸವನ್ನು ನೀವು ಮಾಡಿದ್ದೀರಿ ಎಂದು ಕೊಂಡಾಡಿದರು. ಚಂದ್ರಯಾನ-2ರ ಹೆಜ್ಜೆ ಗುರುತು ಮೂಡಿವೆ. ಚಂದ್ರಯಾನ-3 ಯಶಸ್ವಿಯಾಗಿ ತಲುಪಿದೆ. ಚಂದ್ರಯಾನ-2ರ ಹೆಜ್ಜೆಗುರುತುಗಳ ಸ್ಥಳವನ್ನು ‘ತಿರಂಗ ಪಾಯಿಂಟ್’ ಹಾಗೂ ಚಂದ್ರಯಾನ-3ರ ಸ್ಥಳವನ್ನು ‘ಶಿವಶಕ್ತಿ’ ಎಂದು ಕರೆಯಲಾಗುವುದು.

ಧೃಡವಾದ ಇಚ್ಛಾಶಕ್ತಿ ಇದ್ದರೆ ಯಶಸ್ಸು ದೊರೆಯಲಿದೆ ಎಂಬುದಕ್ಕೆ ನಾವೇ ಸಾಕ್ಷಿ. ಅಗತ್ಯ ತಂತ್ರಜ್ಞಾನವಿಲ್ಲದೆ, ಹಿಂದುಳಿದಿದ್ದ ನಾವು, ಈಗ ಚಂದ್ರನ ಮೇಲೆ ಇಳಿದ ನಾಲ್ಕನೇ ರಾಷ್ಟ್ರವಾಗಿದೆ. ಈ ಕೀರ್ತಿಗೆ ಇಸ್ರೋ ಸಂಸ್ಥೆ ಕಾರಣ ಎಂದರು.

ಈ ಪ್ರಯಾಣ ಸುಲಭವಾಗಿರಲಿಲ್ಲ. ಸಾಫ್ಟ್ ಲ್ಯಾಂಡಿಂಗ್ ಖಚಿತಪಡಿಸಿಕೊಳ್ಳಲು ವಿಜ್ಞಾನಿಗಳು ಸಾಹಸವನ್ನೇ ಮಾಡಬೇಕಾಯಿತು. ಲ್ಯಾಂಡಿಂಗ್ ಪ್ರಾಯೋಗಿಕ ಪರೀಕ್ಷೆ ಯಶಸ್ವಿಯಾದ ನಂತರ ಚಂದ್ರನ ಮೇಲೆ ಚಂದ್ರಯಾನ-3 ಲ್ಯಾಂಡರ್ ಇಳಿಸುವುದು ಯಶಸ್ವಿಯಾಯಿತು.

ಮಂಗಳಯಾನ ಮತ್ತು ಚಂದ್ರಯಾನದ ಯಶಸ್ಸು ಹಾಗೂ ಗಗನ್ ಯಾನ್ ಸಿದ್ಧತೆಯೂ ದೇಶಕ್ಕೆ ಹೊಸ ಚಿತ್ರವನ್ನೇ ನೀಡಿದೆ. ಚಂದ್ರಯಾನದ ಹೆಸರು ಚಿಕ್ಕಮಕ್ಕಳ ಬಾಯಲು ಇದೆ. ನೀವು ಈ ಯಶಸ್ಸಿನ ಆಳವಾದ ಪ್ರಭಾವವನ್ನು ಬಿತ್ತಿದ್ದೀರಿ ಎಂದು ಬಣ್ಣಿಸಿದರು.

ರಾತ್ರಿವೇಳೆ ಚಂದ್ರನನ್ನು ನೋಡುವ ಯಾವುದೇ ಮಗು, ನನ್ನ ದೇಶವು ಚಂದ್ರನನ್ನು ತಲುಪಿದ ಧೈರ್ಯ ಮತ್ತು ಉತ್ಸಾಹದೊಂದಿಗೆ ಇರುತ್ತದೆ ಎಂದರು. ಸ್ವಾತಂತ್ರ್ಯದ ಸುವರ್ಣಯುಗದಲ್ಲಿ ಈ ನಿಧಿಯ ಬಗ್ಗೆ ಸಂಶೋಧನೆ ಮಾಡಿ ಹೊರತರಬೇಕು. ನಮ್ಮ ಯುವ ಪೀಳಿಗೆಗೆ ಇಂದಿನ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೊಸ ಆಯಾಮಗಳನ್ನು ನೀಡಬೇಕು ಎಂದು ಹೇಳಿದರು. ಇದಕ್ಕೂ ಮುನ್ನ ಚಂದ್ರಯಾನ ಇಂಚಿಂಚು ಮಾಹಿತಿಯನ್ನು ಇಸ್ರೋ ಅಧ್ಯಕ್ಷ ಸೋಮನಾಥ್, ಪ್ರಧಾನಿ ಅವರಿಗೆ ಬಿಡಿಸಿಟ್ಟರು.

ಮೈಸೂರಲ್ಲಿ ಮುಖ್ಯಮಂತ್ರಿ

ಉದ್ಘಾಟಿಸುವರು. ನಂತರ ಮಧ್ಯಾಹ್ನ 1.45 ಗಂಟೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದ ನವೀಕೃತ ಸುಟ್ಟಗಾಯಗಳ ವಿಭಾಗದ ಕಟ್ಟಡ ಹಾಗೂ ಎಂಆರ್‌ಐ ಉಪಕರಣ ಉದ್ಘಾಟಿಸಲಿರುವ ಅವರು, ಮಧ್ಯಾಹ್ನ 3 ಗಂಟೆಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಶಾಸಕರುಗಳನ್ನು ಭೇಟಿ ಮಾಡುವರು. ಸಂಜೆ 6 ಗಂಟೆಗೆ ಮೈಸೂರಿನ ವಕೀಲರ ಸಂಘದಲ್ಲಿ ಆಯೋಜಿಸಿರುವ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸುವರು.

ಆಗಸ್ಟ್ 30ರಂದು ಬುಧವಾರ ಬೆಳಗ್ಗೆ 11 ಗಂಟೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಗೃಹಲಕ್ಷ್ಮಿ ಯೋಜನೆಯ ವಿವಿಧ ಸೌಲಭ್ಯಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವ ಮುಖ್ಯಮಂತ್ರಿಗಳು, ಮಧ್ಯಾಹ್ನ 3.30 ಗಂಟೆಗೆ ಸಿದ್ದಲಿಂಗಪುರದಲ್ಲಿ ನಿರ್ಮಿಸಿರುವ ಕನಕ ಭವನ ಉದ್ಘಾಟನೆ ಬಳಿಕ ಸಂಜೆ 6 ಗಂಟೆಗೆ ರಾಜೀವ್‌ನಗರದಲ್ಲಿ ಮೈಸೂರು ನಗರಪಾಲಿಕೆಯಿಂದ ಆಯೋಜಿಸಿರುವ ಅಲ್ ಬ್ರದರ್ಸ್ ಸರ್ಕಲ್ ಉದ್ಘಾಟನೆ ಮಾಡಲಿದ್ದಾರೆ. ನಂತರ ರಾತ್ರಿ 7.30ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳಸಲಿದ್ದು, ರಾತ್ರಿ 9.30ಕ್ಕೆ ಬೆಂಗಳೂರು ತಲುಪಲಿದ್ದಾರೆ ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ಕೆ.ಚಿರಂಜೀವಿ ತಿಳಿಸಿದ್ದಾರೆ

ಟೋಲ್ ಪ್ಲಾಜಾ ಬಳಿ ಮಾತ್ರ ವಿರಮಿಸಿ

ನಿರ್ಮಾಣ ಮಾಡಿರುವುದು ಅತೀ ಕಡಿಮೆ ಅವಧಿಯಲ್ಲಿ ತಲುಪಬೇಕೆಂಬ ಉದ್ದೇಶದಿಂದ. ಚಾಲಕರಿಗೆ ನಿದ್ರೆ ಬಂದರೆ ರಾತ್ರಿ ವೇಳೆ ಎಲ್ಲೆಂದರಲ್ಲಿ ನಿರ್ಜನ ಪ್ರದೇಶದಲ್ಲಿ ವಾಹನ ನಿಲ್ಲಿಸಿದರೆ ದುಷ್ಕರ್ಮಿಗಳು ಹೆದರಿಸಿ ದರೋಡೆ, ಸುಲಿಗೆ ಮಾಡುತ್ತಾರೆ. ಅದರ ಬದಲು ಜನಗಳಿರುವ ಟೋಲ್ ಪ್ಲಾಜಾಗಳ ಬಳಿ ವಿಶಾಲ ಸ್ಥಳದಲ್ಲಿ ವಾಹನ ನಿಲ್ಲಿಸಿ, ಎಷ್ಟು ಬೇಕಾದರೂ ನಿದ್ರೆ ಮಾಡಿ ಮುಂದೆ ಹೋಗುವುದು ಸೂಕ್ತ ಎಂದು ಅವರು ತಿಳಿಸಿದರು. ಅಪರಾಧ ಕೃತ್ಯ, ಕಳ್ಳತನ, ಅಪಘಾತಗಳನ್ನು ತಪ್ಪಿಸಲು ಎಕ್ಸ್‌ಪ್ರೆಸ್‌ವೇನಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಹೈವೇ ಪೆಟ್ರೋಲಿಂಗ್ ವಾಹನಗಳೂ ಗಸ್ತು ತಿರುಗುತ್ತಿರುತ್ತವೆಯಾದರೂ, ಕೆಲವರು ರಾತ್ರಿ ವೇಳೆ ಬೈಪಾಸ್‌ಗಳಲ್ಲಿ, ಮೇನ್ ಕ್ಯಾರಿಯೇಜ್ ಮಧ್ಯೆ ವಾಹನಗಳನ್ನು ನಿಲ್ಲಿಸಿಕೊಳ್ಳುತ್ತಾರೆ. ಆ ವೇಳೆ ದುಷ್ಕರ್ಮಿಗಳು ಅಪರಾಧ ಕೃತ್ಯಗಳನ್ನೆಸಗಲು ಪ್ರಯತ್ನಿಸುತ್ತಾರೆ. ಅದಕ್ಕೆ ವಾಹನ ಚಾಲಕರು ಅವಕಾಶ ನೀಡಬಾರದು ಎಂದು ಪ್ರತಾಪ್ ಸಿಂಹ ತಿಳಿಸಿದರು.

ಈ ಎಕ್ಸ್‌ಪ್ರೆಸ್‌ವೇಯ ಎರಡೂ ಕಡೆಯ ಟೋಲ್ ಪ್ಲಾಜಾಗಳಲ್ಲಿ ಶೌಚಾಲಯಗಳಿವೆ. ವಾಹನ ನಿಲ್ಲಿಸಲು ವಿಶಾಲ ಸ್ಥಳಾವಕಾಶ ಕಲ್ಪಿಸಲಾಗಿದೆ. ಹೈರೆಜುಲೇಷನ್ ಸಿಸಿಟಿವಿ ಕ್ಯಾಮರಾಗಳಿರುತ್ತವೆ. ರಸ್ತೆ ಬಳಕೆದಾರರು ಅಲ್ಲಿ ವಿಶ್ರಾಂತಿ ಪಡೆಯಬೇಕು. ಜನರಿರುವುದರಿಂದ ಅಲ್ಲಿ ಯಾವುದೇ ಅಪರಾಧ ಕೃತ್ಯಗಳು ಸಂಭವಿಸುವುದಿಲ್ಲ ಎಂದು ಅವರು ಇದೇ ವೇಳೆ ನುಡಿದರು.

ನಮ್ಮ ಅವಧಿಯಲ್ಲಿ ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ, ವಿಮಾನಗಳ ಸೇವೆ ಹೆಚ್ಚಳ, ಟೆಕ್‌ಪಾರ್ಕ್, ಮೈಸೂರು-ಕುಶಾಲನಗರ ಹೆದ್ದಾರಿ, ರೈಲು ಸಂಚಾರ, ರೈಲ್ವೆ ನಿಲ್ದಾಣಗಳ ಉನ್ನತೀಕರಣದಂತಹ ಹಲವು ಅಭಿವೃದ್ಧಿ ಯೋಜನೆಗಳಾಗಿವೆ. ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇ ನಿರ್ಮಾಣವಾಗಿದೆ. ಜನರಿಗೆ ನಮ್ಮ ಕೆಲಸ ಏನು ಎಂಬುದು ಅರ್ಥವಾಗಿದೆ. ಬೇರೆಯವರ್‍ಯಾರೂ ನಮಗೆ ಸರ್ಟಿಫಿಕೇಟ್ ನೀಡಬೇಕಿಲ್ಲ ಎಂದು ಪ್ರತಾಪ್ ಸಿಂಹ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು. ಯಾರೇ ಪ್ರಧಾನಿಯಾಗಲಿ ರಾಜ್ಯಕ್ಕೆ ಆಗಮಿಸಿದಾಗ ಇಲ್ಲಿನ ರಾಜ್ಯಪಾಲರು, ಮುಖ್ಯಮಂತ್ರಿಗಳು, ಮುಖ್ಯ ಕಾರ್ಯದರ್ಶಿಗಳು, ಅವರನ್ನು ಬರಮಾಡಿಕೊಳ್ಳುವುದು ವಾಡಿಕೆ ಹಾಗೂ ಶಿಷ್ಟಾಚಾರ. ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಬಂದಾಗ ನಮ್ಮ ಮುಖ್ಯಮಂತ್ರಿಗಳು ಏಕೆ ಹೋಗಿಲ್ಲ ಎಂಬುದು ಗೊತ್ತಿಲ್ಲ. ಅದು ಅವರ ಸಂಸ್ಕೃತಿ, ವಿವೇಕ ತೋರಿಸುತ್ತದೆ. ನಾನು ಆ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಪ್ರತಾಪ್‌ಸಿಂಹ ಸುದ್ದಿಗಾರರಿಗೆ ಉತ್ತರಿಸಿದರು.

ಕಾಮಗಾರಿ ಶೀಘ್ರ ಪೂರ್ಣ

ಅಪಘಾತಕ್ಕೆ ಕಾರಣವಾಗಿದೆ. ಮಾತ್ರವಲ್ಲ, ದರೋಡೆ, ಕಳ್ಳತನ, ಸುಲಿಗೆ ಯಂತಹ ಅಪರಾಧ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ ಎಂದು ಸಾರ್ವಜನಿಕರು ಸಂಸದ, ಶಾಸಕರಿಗೆ ತಮಗಾಗುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದರು. ಸರ್ವೀಸ್ ರಸ್ತೆಗಳಲ್ಲಿ ಸಂಚರಿಸುತ್ತಿರುವ ವಾಹನ ಸವಾರರಿಗೆ ಸುರಕ್ಷತೆ ಇಲ್ಲ, ರಸ್ತೆ ಕಾಮಗಾರಿಯೂ ಅಪೂರ್ಣಗೊಂಡಿರುವುದರಿಂದ ಸಾಕಷ್ಟು ಅಪಘಾತಗಳು ಸಂಭವಿಸುತ್ತಿವೆ. ನಾಗನಹಳ್ಳಿ, ಕಳಸ್ತವಾಡಿ, ಸಿದ್ದಲಿಂಗಪುರ ಹಾಗೂ ಕೆ.ಆರ್. ಮಿಲ್‌ನಿಂದ ಮೈಸೂರು ನಗರಕ್ಕೆ ಬರುವವರಿಗೆ ಎಡಬದಿಯ ಸರ್ವೀಸ್ ರಸ್ತೆ ಪ್ರವೇಶಿಸಲು ಪ್ರಯಾಸ ಪಡಬೇಕಾಗಿದೆ ಎಂದು ಸಾರ್ವಜನಿಕರು ಪ್ರತಾಪ್ ಸಿಂಹ, ಜಿ.ಟಿ.ದೇವೇಗೌಡರ ಬಳಿ ತಮ್ಮ ಅಳಲು ತೋಡಿಕೊಂಡರು.

ಈ ವೇಳೆ ಸಮಜಾಯಿಷಿ ನೀಡಿದ ಸಂಸದ ಪ್ರತಾಪ್ ಸಿಂಹ, ಅತೀ ಕಡಿಮೆ ಅವಧಿಯಲ್ಲಿ ಸಂಚರಿಸಲು ಅನುಕೂಲವಾಗಲೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಮೈಸೂರು-ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ವೇ ನಿರ್ಮಿಸಿದೆ. ಮೇನ್ ಕ್ಯಾರಿಯೇಜ್‌ನಲ್ಲಿ ವಾಹನಗಳು ಸುರಕ್ಷಿತವಾಗಿ ಸಂಚರಿಸುತ್ತಿವೆ ಎಂದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅಲ್ಲಲ್ಲಿ ಎಕ್ಸಿಟ್, ಎಂಟ್ರಿ, ಅಂಡರ್‌ಬ್ರಿಡ್ಜ್, ಓವರ್ ಬ್ರಿಡ್ಜ್‌ಗಳನ್ನೂ ನಿರ್ಮಿಸಲಾಗಿದೆ. ಸರ್ವೀಸ್ ರಸ್ತೆಯೂ ಬಹುಪಾಲು ಪೂರ್ಣಗೊಂಡಿದೆ. ಕೆಲ ತೊಂದರೆಯಿಂದಾಗಿ ಮೈಸೂರು ಭಾಗದ ಸರ್ವೀಸ್ ರಸ್ತೆ ಕೆಲಸ ಬಾಕಿ ಉಳಿದಿದೆ. ಸುತ್ತಲಿನ ಗ್ರಾಮಸ್ಥರಿಗೆ ರಸ್ತೆ ದಾಟಲು ಅನುಕೂಲವಾಗುವಂತೆ ಫುಟ್ ಓವರ್ ಬ್ರಿಡ್ಜ್ (ಸ್ಕೈವಾಕ್)ಗಳನ್ನು ಅಗತ್ಯವಿರುವ ಕಡೆ ನಿರ್ಮಿಸಬೇಕಾಗಿದೆ. ಯೋಜನೆಗೆ ಎಸ್ಟಿಮೇಟ್‌ನೊಂದಿಗೆ ಪ್ರಸ್ತಾವನೆ ಸಲ್ಲಿಸಿ ಪ್ರಾಧಿಕಾರದಿಂದ ಅನುಮೋದನೆಯನ್ನೂ ಪಡೆದುಕೊಂಡಿರುವುದರಿಂದ ಶೀಘ್ರ ಕಾಮಗಾರಿ ಆರಂಭಿಸುತ್ತೇವೆ ಎಂದು ಇದೇ ವೇಳೆ ಭರವಸೆ ನೀಡಿದರು. ಸರ್ವೀಸ್ ರಸ್ತೆಯ ಚರಂಡಿ ವ್ಯವಸ್ಥೆ, ಮಳೆ ನೀರು ಹರಿದು ಹೋಗಲು ಸಂಪರ್ಕ ಕಲ್ಪಿಸುವುದು, ಅಗತ್ಯವಿರುವೆಡೆ ವೈಜ್ಞಾನಿಕ ರೋಡ್ ಹಂಪ್ಸ್ ಹಾಕುವುದು, ಬೀದಿ ದೀಪದ ವ್ಯವಸ್ಥೆ ಸೇರಿದಂತೆ ದ್ವಿಚಕ್ರ ವಾಹನಗಳು, ಆಟೋ, ಟ್ರಾಕ್ಟರ್, ಎತ್ತಿನಗಾಡಿ ಸಂಚರಿಸುವ ಸರ್ವೀಸ್ ರಸ್ತೆಯ ಎಲ್ಲಾ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಹೆದ್ದಾರಿ ಪ್ರಾಧಿಕಾರವು ಕಾರ್ಯೋನ್ಮುಖವಾಗಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಗೆ ಬರುವ ಎಕ್ಸ್‌ಪ್ರೆಸ್‌ವೇ ಸರ್ವೀಸ್ ರಸ್ತೆ ಸಮಸ್ಯೆ ಬಗ್ಗೆ ಶಾಸಕ ಜಿ.ಟಿ. ದೇವೇಗೌಡರೂ ಗಮನ ಸೆಳೆದಿದ್ದಾರೆ. ಇಂದೂ ಅವರು ಸ್ವತಃ ಬಂದು ನನ್ನೊಂದಿಗೆ ಖುದ್ದು ಪರಿಶೀಲಿಸಿದ್ದಾರೆ. ಗ್ರಾಮಸ್ಥರು ತಮ್ಮ ಜಮೀನುಗಳಿಗೆ ಹೋಗಿ ಬರಲು ಎಕ್ಸ್‌ಪ್ರೆಸ್‌ವೇಗೆ ಸ್ಕೈವಾಕ್ ನಿರ್ಮಿಸಲು ಮುಂದಾಗಿದ್ದೇವೆ ಎಂದೂ ತಿಳಿಸಿದರು.

ಸಿರಿಧಾನ್ಯ ಮೇಳಕ್ಕೆ ಚಾಲನೆ

ಸಾವಯವ ಕೃಷಿ ಉತ್ಪನ್ನ ಸಿರಿಧಾನ್ಯಗಳಿಗೆ ಉತ್ತಮ ಮಾರುಕಟ್ಟೆ ಅವಶ್ಯ: ಸುತ್ತೂರು ಶ್ರೀಗಳು





ಮೈಸೂರು, ಆ.26(ಎಸ್‌ಬಿಡಿ)- ಸಾವಯವ ಕೃಷಿ ಉತ್ಪನ್ನಗಳು ಹಾಗೂ ಸಿರಿಧಾನ್ಯಗಳಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಅಗತ್ಯವಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ಸಹಜ ಸಮೃದ್ಧ ಸಂಸ್ಥೆ, ಯೂಸಿಂಗ್ ಡೈವರ್ಸಿಟಿ, ಜಿಐಝಡ್ ಜರ್ಮನಿ, ಐಸಿಎಆರ್-ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ದೇವಧಾನ್ಯ ರೈತ ಉತ್ಪಾದಕ ಕಂಪನಿ, ಸಹಜ ಸೀಡ್ಸ್ ಹಾಗೂ ಸಹಜ ಆರ್ಗಾನಿಕ್ಸ್ ಕಂಪನಿ ಸಹಯೋಗದೊಂದಿಗೆ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆಯೋಜಿಸಿರುವ ಎರಡು ದಿನಗಳ ‘ಸಿರಿಧಾನ್ಯ ಮೇಳ’ಕ್ಕೆ ಶನಿವಾರ ಚಾಲನೆ ನೀಡಿ, ಅವರು ಮಾತನಾಡಿದರು.

ಸಾವಯವ ಕೃಷಿ ಹಾಗೂ ಸಿರಿಧಾನ್ಯ ಬೆಳೆಯುವ ರೈತರ ಸಮೂಹ ಹೆಚ್ಚಾಗುತ್ತಿದೆ. ಆದರೆ ಇದಕ್ಕೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಅಗತ್ಯವಿದೆ. ಇದರೊಂದಿಗೆ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿದರೆ ಬೆಳೆಯುವವರ ಸಂಖ್ಯೆಯೂ ಸಹಜವಾಗಿ ಹೆಚ್ಚಾಗುತ್ತದೆ. ಜೊತೆಗೆ ಹೆಚ್ಚೆಚ್ಚು ಜನ ಉಪಯೋಗಿಸುತ್ತಾರೆ. ಎಲ್ಲರೂ ಆರೋಗ್ಯವಂತರಾದರೆ ವೈಯಕ್ತಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಆರೋಗ್ಯ ಹೊರತು ಬೇರೆ ಏನನ್ನಾದರೂ ಗಳಿಸಬಹುದು. ಹಾಗಾಗಿ ಆರೋಗ್ಯ ರಕ್ಷಣೆ ಆದ್ಯತೆಯಾಗಬೇಕು. ಮನುಷ್ಯ ಆರೋಗ್ಯ ಕೆಡುವಷ್ಟು ಸಂಪಾದನೆ ಮಾಡುತ್ತಾನೆ. ನಂತರ ಗಳಿಸಿದ್ದನ್ನೆಲ್ಲಾ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಾನೆ. ಇಂಗ್ಲಿಷ್‌ನ ಈ ಪ್ರಸಿದ್ಧ ವಾಕ್ಯ ವಾಸ್ತವವಾದುದು ಎಂದರು.

ಎಲ್ಲಾ ಪದಾರ್ಥಗಳೂ ಕಲಬೆರಕೆ ಆಗುತ್ತಿರುವುದನ್ನು ಗಮನಿಸಿದರೆ ಯಾವ ಆಹಾರ ಸೇವಿಸುವುದಕ್ಕೂ ಆತಂಕವಾಗುತ್ತದೆ. ಮತ್ತೊಂದೆಡೆ ಕೃಷಿ ಕ್ರಾಂತಿ ಭರದಲ್ಲಿ ಎಲ್ಲಾ ರೀತಿಯ ರಾಸಾಯನಿಕಗಳನ್ನು ಬಳಸುತ್ತಿರುವುದರಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತಿದೆ. ಹಾಗಾಗಿ ಮತ್ತೆ ಸಾವಯವ ಕೃಷಿ ಪದ್ಧತಿಗೆ ಮರಳಬೇಕು, ರಾಸಾಯನಿಕ ಬಳಕೆ ಕಡಿಮೆ ಮಾಡುವ ಮೂಲಕ ಭೂಮಿಯ ಫಲವತ್ತತೆ ಕಾಪಾಡಿಕೊಳ್ಳಬೇಕು ಎಂದು ಬಹುತೇಕ ಕೃಷಿ ತಜ್ಞರು ಅಭಿಪ್ರಾಯಿಸಿದ್ದಾರೆ ಎಂದು ತಿಳಿಸಿದರು.

ಕೃಷಿಗೆ ಬಳಸುವ ರಾಸಾಯನಿಕ ಬೆಳೆಯ ಮೂಲಕ ಮನುಷ್ಯನ ದೇಹ ಸೇರುತ್ತದೆ. ಸದ್ಯ ಜನರಲ್ಲಿ ಆಹಾರ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡುತ್ತಿದೆ ಈ ನಿಟ್ಟಿನಲ್ಲಿ ಮುಖ್ಯವಾಗಿ ಸಾವಯವ ಕೃಷಿ ಹಾಗೂ ಸಿರಿಧಾನ್ಯ ಹೆಚ್ಚು ಆಕರ್ಷಿಸುತ್ತಿದೆ ಆಹಾರದಲ್ಲಿ ಸಾಧ್ಯವಾದಷ್ಟು ಸಿರಿಧಾನ್ಯಗಳನ್ನು ಬಳಸುವುದರಿಂದ ಆರೋಗ್ಯಕ್ಕೆ ಅನುಕೂಲವಾಗಲಿದೆ. ಸಿರಿಧಾನ್ಯಗಳ ಮಹತ್ವವನ್ನು ಜನರಿಗೆ ಮನದಟ್ಟು ಮಾಡುವ ಉದ್ದೇಶದಿಂದ ಎರಡು ದಿನಗಳ ಮೇಳ ಆಯೋಜಿಸಿದ್ದಾರೆ. ರಾಜ್ಯದ ವಿವಿಧೆಡೆಯ ಸಿರಿಧಾನ್ಯ ಹಾಗೂ ಅವುಗಳನ್ನು ಬಳಸಿಕೊಂಡು ಸಿದ್ಧಪಡಿಸುವ ತ್ವರಿತ ಆಹಾರಗಳ ಬಗ್ಗೆ ಮಾಹಿತಿ ದೊರಕಲಿದೆ. ಹೆಚ್ಚು ಜನ ಇದರ ಸದುಪಯೋಗ ಪಡೆಯಬೇಕು ಎಂದು ಹೇಳಿದರು.

ಈ ವೇಳೆ ರಾಗಿ ಪೋಸ್ಟರ್ ಬಿಡುಗಡೆ ಮಾಡಿದ ನಟಿ, ನೃತ್ಯಾರ್ತಿ ಯಮುನಾ ಶ್ರೀನಿಧಿ ಮಾತನಾಡಿ, ಪೌಷ್ಟಿಕ ಆಹಾರ ಸೇವನೆಯಿಂದ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಲಿದೆ ಜಂಕ್‌ಫುಡ್ ಬದಲಿಗೆ ಸಿರಿಧಾನ್ಯಗಳ ತಿಂಡಿ-ತಿನಿಸುಗಳನ್ನು ಸೇವಿಸುವುದನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೀ ಸ್ಟೋನ್ ಪ್ರತಿಷ್ಠಾನದ ಸಂಸ್ಥಾಪಕಿ ಸ್ನೇಹಲತಾ ನಾಥ್ ಮಾತನಾಡಿ, ಬುಡಕಟ್ಟು ಸಮುದಾಯದವರು ನೂರಾರು ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದಿರುವ ಸಿರಿಧಾನ್ಯಗಳು, ವಾಣಿಜ್ಯ ಬೆಳೆಗಳ ಅಬ್ಬರದಲ್ಲಿ ಕಾಣೆಯಾಗುತ್ತಿವೆ ಪೌಷ್ಟಿಕಾಂಶದ ಆಗರವಾದ ಸಿರಿಧಾನ್ಯಗಳ ಮಹತ್ವವನ್ನು ರೈತರು ಹಾಗೂ ಗ್ರಾಹಕರಿಗೆ ಮನವರಿಕೆ ಮಾಡಿಕೊಡಲು ಇಂತಹ ಮೇಳಗಳು ಸಹಕಾರಿ ಎಂದರು. ಸಹಜ ಆರ್ಗಾನಿಕ್ ಸಿಇಓ ಬಿ.ಸೋಮೇಶ್, ಸಹಜ ಸಮೃದ್ಧ ಸಂಸ್ಥೆ ನಿರ್ದೇಶಕ ಜಿ.ಕೃಷ್ಣಪ್ರಸಾದ್, ಧಾರವಾಡದ ಸಿರಿಧಾನ್ಯ ಸಂರಕ್ಷಕಿ ಸಾವಿತ್ರಿ ಕೊಡ್ಲಿ ಸಿರಿಧಾನ್ಯ ಕುರಿತು ಮಾತನಾಡಿದರು. ಅಣೆಕಟ್ಟೆ ವಿಶ್ವನಾಥ್, ಸೂರ್ಯಕಾಂತ್, ಕೋಮಲ್ ಮತ್ತಿತರರು ಉಪಸ್ಥಿತರಿದ್ದರು.

ಸಿರಿಧಾನ್ಯ ಮೇಳ; ವಿಶೇಷಗಳ ಆಗರ

ಕರ್ನಾಟಕದ ವಿವಿಧ ರೈತ ಗುಂಪುಗಳು ಸಿರಿಧಾನ್ಯ, ಅಕ್ಕಿ ಹಾಗೂ ಮೌಲ್ಯವರ್ಧಿತ ತಿನಿಸುಗಳನ್ನು ಮೇಳದಲ್ಲಿ ಪ್ರದರ್ಶಿಸಿವೆ. ನಾಗಾಲ್ಯಾಂಡ್‌ನ ಅಪರೂಪದ ‘ಜಾಬ್ ಟಿಯರ್ಸ್’, ಮಧ್ಯಪ್ರದೇಶದ ಬೈಗಾ ಬುಡಕಟ್ಟು ನಿವಾಸಿಗಳು ಸೇವಿಸುವ ‘ಸಿಖಿಯಾ’ ಸಿರಿಧಾನ್ಯ, ಒಡಿಶಾ ರಾಜ್ಯಗಳ ರೈತರು ಬೆಳೆಯುವ ಸಿರಿಧಾನ್ಯಗಳ ತಳಿಗಳನ್ನು ಇಲ್ಲಿ ನೋಡಬಹುದು. ಛತ್ತೀಸಗಢ ಆದಿವಾಸಿ ಮಹಿಳೆಯರು ಬಳಸುವ ಮೆಕ್ಕೆಜೋಳ, ಜೋಳ, ಬೇಳೆಕಾಳು, ತರಕಾರಿ-ಸೊಪ್ಪು, ಗಡ್ಡೆ-ಗೆಣಸುಗಳನ್ನು ಮೇಳದಲ್ಲಿಟ್ಟಿದ್ದಾರೆ. ಸಿರಿ ಧಾನ್ಯಗಳಾದ ರಾಗಿ, ಸಾವೆ, ನವಣೆ, ಸಜ್ಜೆ, ಜೋಳ, ಹಾರಕ, ಬರಗು, ಊದಲು, ಕೊರಲು ಹೀಗೆ ವಿವಿಧ ಬೆಳೆಗಳನ್ನು ಕಾಣಬಹುದು. ಸಿರಿಧಾನ್ಯದ ಬಿಸ್ಕೆಟ್, ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ ಸೇರಿದಂತೆ ಬಗೆ ಬಗೆಯ ಕುರುಕಲು ತಿಂಡಿ, ಉತ್ತರ ಕರ್ನಾಟಕ ಶೈಲಿಯ ವೈವಿಧ್ಯಮಯ ಆಹಾರ ಲಭ್ಯವಿದೆ. ಕೈತೋಟದಲ್ಲಿ ಬಿತ್ತಲು ನಾಟಿ ಸೊಪ್ಪುಗಳ ಬಿತ್ತನೆ ಬೀಜ, ಹಲಸಿನ ಸಸಿಗಳನ್ನೂ ಮಾರಾಟಕ್ಕಿಡಲಾಗಿದೆ. ಬಾಳೆಕಾಯಿ ಉಡಿ(ಬಾಕಾವು), ಶುದ್ಧ ನೈಸರ್ಗಿಕ ಎಣ್ಣೆ, ಉಪ್ಪಿನಕಾಯಿ, ನೈಸರ್ಗಿಕ ವಸ್ತುಗಳನ್ನು ಬಳಸಿ ತಯಾರಿಸಿದ ಐಸ್‌ಕ್ರೀಂ, ಚನ್ನಪಟ್ಟಣ ಬೊಂಬೆ ಸೇರಿದಂತೆ ಕರಕುಶಲ ವಸ್ತುಗಳೂ ಇಲ್ಲಿವೆ. ಸಿರಿಧಾನ್ಯ ಮೇಳಕ್ಕೆ ಉಚಿತ ಪ್ರವೇಶವಿದ್ದು, ನಾಳೆ(ಭಾನುವಾರ) ಮುಕ್ತಾಯವಾಗಲಿದೆ.

ಅಡುಗೆ, ಚಿತ್ರಕಲಾ ಸ್ಪರ್ಧೆ

ಭಾನುವಾರ ಬೆಳಗ್ಗೆ 10ಕ್ಕೆ ಮಕ್ಕಳಿಗಾಗಿ ಸಿರಿಧಾನ್ಯ ಕುರಿತ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಮಧ್ಯಾಹ್ನ 12ಕ್ಕೆ ಸಿರಿಧಾನ್ಯಗಳಿಂದ ತಯಾರಿಸುವ ಅಡುಗೆ ಸ್ಪರ್ಧೆ ನಡೆಯಲಿದ್ದು, ಮನೆಯಲ್ಲಿ ತಯಾರಿಸಿದ ಬಗೆ ಬಗೆಯ ಖಾದ್ಯಗಳನ್ನು ಸ್ಪರ್ಧೆಯಲ್ಲಿಡಬಹುದು. ವಿಜೇತರಿಗೆ ಬಹುಮಾನವೂ ಇದೆ. ಎರಡೂ ಸ್ಪರ್ಧೆಗೆ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ ಮೊ.ಸಂ. 9972077998 ಸಂಪರ್ಕಿಸಬಹುದು.

ಹಿರಿಯ ತಬಲ ವಾದಕ ಭೀಮಾಶಂಕರ ಬಿದನೂರರಿಗೆ ಸನ್ಮಾನ



ಮೈಸೂರು, ಆ.26 (ಎಸ್‌ಪಿಎನ್)- ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ಸಂಸ್ಥಾಪಕ, ಹಿರಿಯ ತಬಲ ವಾದಕ ಭೀಮಾಶಂಕರ ಬಿದನೂರ ಅವರನ್ನು ಗುರುಪೂರ್ಣಿಮೆ ಅಂಗವಾಗಿ ಶನಿವಾರ ಸನ್ಮಾನಿಸಲಾಯಿತು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಹಿರಿಯ ತಬಲ ವಾದಕ ಭೀಮಾಶಂಕರ ಬಿದನೂರ ಅವರ ಶಿಷ್ಯ ರೋಹಿತ್ ಕಳಲೆ ಅವರಿಂದ ಗುರು ಅಭಿನಂದನೆ ಸಲ್ಲಿಸಲಾಯಿತು.

ಇದಕ್ಕೂ ಮುನ್ನ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವಿದ್ಯಾರ್ಥಿಗಳಿಂದ ತಬಲಾ ವಾದನ, ಪಂ.ರವಿಶಂಕರ್ ಮಿಶ್ರಾ ಅವರಿಂದ ಕೊಳಲು ವಾದನ, ಭೀಮಾಶಂಕರ ಬಿದನೂರ ಹಾಗೂ ಕು.ರೋಹಿತ್ ಕಳಲೆ ಅವರಿಂದ ತಬಲಾ ಜುಗಲ್‌ಬಂದಿ ಕಛೇರಿ ನಡೆಯಿತು. ಪಂ.ವೀರಭದ್ರಯ್ಯ ಹಿರೇಮಠ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಅಮೋಘವಾಗಿ ಮೂಡಿಬಂತು. ವಿದ್ವಾನ್ ಮೃತ್ಯುಂಜಯ ಹಿರೇಮಠ ಹಾಗೂ ವಿಘ್ನೇಶ್ ಭಾಗ್ವತ್ ಹಾರ್ಮೋನಿಯಂ ನುಡಿಸಿ, ಎಲ್ಲರ ಮೆಚ್ಚುಗೆ ಪಾತ್ರರಾದರು.

ದಾಂಪತ್ಯ ಎಂದರೆ ಗಂಡು-ಹೆಣ್ಣು ಸಮಾನವಾಗಿ ಗೌರವಿಸಬೇಕಾದ ಮೌಲ್ಯ



ಮೈಸೂರು, ಆ.26(ಎಸ್‌ಪಿಎನ್)- ಭಾರತೀಯ ಪರಂಪರೆಯ ವಿವಾಹ ಸಂಸ್ಕಾರವನ್ನು ಆದರ್ಶ ಜೀವನ ಸೂತ್ರವಾಗಿ ಪರಿಭಾವಿಸಬೇಕು ಎಂದು ಹಿರಿಯ ಸಾಹಿತಿ, ಸಂಸ್ಕೃತಿ ಚಿಂತಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಅಭಿಪ್ರಾಯಪಟ್ಟರು. ಉಡುಪಿ ಪೇಜಾವರ ಶ್ರೀ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ಬೃಹತ್ ಮಹಿಳಾ ಸಮಾವೇಶದ ಎರಡನೇ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸ್ತ್ರೀಯರಿಗೆ ಪಾತಿವ್ರತ್ಯವೆಂಬುದು ಜೀವನ ಮೌಲ್ಯವಾಗಿರುವಂತೆ, ಗಂಡಿಗೂ ‘ಸಾತಿವ್ರತ್ಯ’ವೆಂಬ ತತ್ವವನ್ನು ಅನುಸರಿಸಬೇಕು. ದಾಂಪತ್ಯವೆಂಬುದು ಗಂಡು-ಹೆಣ್ಣುಗಳಿಬ್ಬರೂ ಸಮಾನವಾಗಿ ಗೌರವಿಸಬೇಕಾದ ಜೀವನಮೌಲ್ಯ ಎಂಬುದನ್ನು ಮರೆಯಬಾರದು ಎಂದು ತಿಳಿಸಿದರು. ಆಧುನಿಕ ಯುಗದಲ್ಲಿ ತಂತ್ರಜ್ಞಾನ ಮುಂದು ವರೆದಂತೆ ಸಮಾಜದಲ್ಲಿ ಕಂಡುಬರುತ್ತಿರುವ ಲಿವಿಂಗ್ ಟುಗೆದರ್, ಸಲಿಂಗರತಿ ಮುಂತಾದ ಪರಿಕಲ್ಪನೆಗಳು ಭಾರತೀಯ ಸಂಸ್ಕೃತಿಯನ್ನು ಹಾಳುಗೆಡವುತ್ತಿವೆ ಇಂತಹ ವಿಕೃತಿಗಳಿಗೆ ಕಡಿವಾಣ ಅಗತ್ಯ. ಭಾರತೀಯ ಪರಂಪರೆಯಲ್ಲಿ ಸಮುದಾಯ ಒಗ್ಗೂಡಿಸುವ ಜೀವನ ಮೌಲ್ಯಗಳಿಗೆ ತಿಲಾಂಜಲಿ ನೀಡುತ್ತಿರುವುದು ಬೇಸರದ ಸಂಗತಿ ಎಂದರು. ವಿದ್ವಾಂಸರಾದ ಗ.ನಾ.ಭಟ್ಟ, ಡಾ.ದೀಪಿಕಾ ಪಾಂಡುರಂಗಿ, ಡಾ.ವಿ.ಬಿ.ಆರತಿ, ಡಾ.ಎಸ್.ಸುಧಾ, ಅನಿತಾ ವೆಂಕಟೇಶ್, ಡಾ.ಸಿ.ಜಿ.ಸವಿತಾ, ಗಣರಾಜ ಕುಂಬ್ಳೆ, ಕೃಷ್ಣರಾಜ ಪುರಾಣಿಕ ಮುಂತಾದವರು ಪಾಲ್ಗೊಂಡಿದ್ದರು.

ಶ್ರೀರಾಮಚಂದ್ರ ಗುಣಗಳು ಎಲ್ಲರಿಗೂ ಆದರ್ಶ: ಪೇಜಾವರ ಶ್ರೀ



ಮೈಸೂರು, ಆ.26(ಎಸ್‌ಪಿಎನ್)- ಗುರು-ಹಿರಿಯರ ಮೇಲಿನ ಗೌರವ, ಕುಟುಂಬದ ಮೇಲಿನ ಘನತೆ ಹೇಗೆ ಎತ್ತಿ ಹಿಡಿಯಬೇಕು ಎಂಬುದಕ್ಕೆ ನಮಗೆ ಶ್ರೀರಾಮಚಂದ್ರನೇ ಆದರ್ಶ. ಶ್ರೀರಾಮಚಂದ್ರನ ಗುಣಗಳು ಪ್ರತಿಯೊಬ್ಬರಿಗೂ ಜೀವನ ಪಾಠ ಕಲಿಸಿಕೊಡುತ್ತದೆ ಎಂದು ಉಡುಪಿ ಪೇಜಾವರ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಮನೋಜ್ಞವಾಗಿ ವಿವರಿಸಿದರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ‘ಶ್ರೀಮದ್ರಾಮಾಯಣ’ ಪ್ರವಚನ ಮಾಲೆಯಲ್ಲಿ ಶ್ರೀಗಳು ತಿಳಿಸಿದರು.

ದಶರಥ ಮಹಾರಾಜ ತನ್ನ ಹಿರಿಯ ಮಗನಾದ ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಕಟ್ಟುವ ಕೊನೆಯ ಕ್ಷಣದಲ್ಲಿ ಶ್ರೀರಾಮಚಂದ್ರ ತಂದೆಯ ಮಾತಿನ ಪರಿಪಾಲನೆ ಮಾಡಲು 14 ವರ್ಷ ಕಾಡಿಗೆ ಹೋಗಲು ತಯಾರಿ ನಡೆಸುತ್ತಿರುವಾಗ, ಅನೇಕ ಒಳ ತಿರುವುಗಳನ್ನು ಪಡೆಯುತ್ತದೆ. ತಮ್ಮನಾದ ಲಕ್ಷ್ಮಣ, ಶ್ರೀರಾಮನ ಧರ್ಮಪತ್ನಿ ಸೀತಾದೇವಿ ಕೂಡ ಕಾಡಿಗೆ ಹೋಗಲು ತಯಾರಾಗುವ ಸನ್ನಿವೇಶ ಮನಮಿಡಿಯುತ್ತದೆ ಎಂದರು.

ಹಾಗಾಗಿ ಹಿರಿಯರಿಗೆ ಕೊಟ್ಟಿರುವ ಮಾತುಗಳನ್ನು ನೆರವೇರಿಸುವ ಸಂದರ್ಭದಲ್ಲಿ ಕಠಿಣ ಪರಿಸ್ಥಿತಿ ಎದುರಿಸುವಾಗ ಮಾತಿನ ಮೇಲಿನ ಅಚಲತೆ, ಆತ್ಮವಿಶ್ವಾಸ ಎಲ್ಲವೂ ಮೈಗೂಡಿಸಿಕೊಂಡು ಕಠಿಣ ಮಾರ್ಗ ತುಳಿಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ವಿದ್ವಾನ್ ವೆಂಕಟೇಶ ನರಸಿಂಹ ಆಚಾರ್ಯ, ಭಕ್ತ ಪ್ರಹ್ಲಾದ ಕುರಿತಾದ ರೂಪಕವನ್ನು, ಶ್ಲೋಕಗಳ ಮೂಲಕ ಅಮೋಘವಾಗಿ ವರ್ಣಿಸಿದರು. ರಾಯಚೂರಿನ ಹಿರಿಯ ಗಾಯಕ ಶೇಷಗಿರಿ ರಾವ್, ಹರಿದಾಸ ಕೀರ್ತನೆಗಳನ್ನು ಹಾಡಿ, ಸಭಿಕರ ಮನಸೂರೆಗೊಂಡರು.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನ 24 ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಾಣಕ್ಕೆ ನಿರ್ಧಾರ

- ಹಳ್ಳಿಗಳ ನಡುವೆ ಸಂಪರ್ಕ ಕಲ್ಪಿಸಲು 46 ಕೋಟಿ ವೆಚ್ಚದ ಯೋಜನೆ
- ಕಳಸ್ತವಾಡಿ, ಸಿದ್ದಲಿಂಗಪುರ ಬಳಿ ಸ್ಕೈವಾಕ್
- ವರ್ಷದೊಳಗೆ ಕಾಮಗಾರಿ ಮುಗಿಸುವ ಗುರಿ
- ಅಕ್ಕ-ಪಕ್ಕದ ಹಳ್ಳಿಗಳ ನಡುವಿನ ಸಂಪರ್ಕ ಕೊಂಡಿ



ಮೈಸೂರು, ಆ.26(ಬಿಎಲ್‌ಯು)- ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ತಡೆಗಟ್ಟಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಡವಾಗಿಯಾದರೂ ಹಲವು ಸುಧಾರಣಾ ಕ್ರಮ ಕೈಗೊಳ್ಳುತ್ತಿದ್ದಾರೆ. ಹೈವೇ ಅಕ್ಕ-ಪಕ್ಕದಲ್ಲಿರುವ ಹಳ್ಳಿಗಳ ನಡುವೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸ್ಕೈವಾಕ್ ನಿರ್ಮಾಣ ಮಾಡಲಾಗುತ್ತಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣದಿಂದ ಮಾರ್ಗದ ಹಲವು ಹಳ್ಳಿಗಳ ನಡುವಿನ ಸಂಪರ್ಕವೇ ಕಡಿತವಾಗಿದೆ. ಎಕ್ಸ್‌ಪ್ರೆಸ್ ಹೈವೇ ಎಡ ಹಾಗೂ ಬಲ ಭಾಗದಲ್ಲಿರುವ ಹಳ್ಳಿ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಅವಕಾಶವೇ ಇಲ್ಲದಂತಾಗಿದೆ. ಊರಿನಿಂದ ಜಮೀನಿಗೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಕಾರಣದಿಂದ ಕಬ್ಬಿಣದ ತಂತಿ ಬೇಲಿಯಿಂದ ನುಗ್ಗಿ ಹಳ್ಳಿ ಜನರು ಎಕ್ಸ್‌ಪ್ರೆಸ್ ವೇನಲ್ಲಿ ಹಾದು ಹೋಗುತ್ತಿದ್ದಾರೆ. ಆ ವೇಳೆ ವೇಗವಾಗಿ ಬರುವ ವಾಹನಗಳಿಗೆ ಸಿಕ್ಕಿ ಹಲವು ಪಾದಚಾರಿಗಳು ಪ್ರಾಣ ಬಿಟ್ಟಿದ್ದಾರೆ.

ಅಕ್ಕ-ಪಕ್ಕ ನೂರಾರು ಹಳ್ಳಿಗಳು ಇರುವ ಕಾರಣ ಎಕ್ಸ್‌ಪ್ರೆಸ್ ವೇ ನಿರ್ಮಾಣದ ವೇಳೆಯೇ ಸ್ಕೈವಾಕ್‌ಗಳನ್ನು ನಿರ್ಮಿಸಬೇಕಾಗಿತ್ತು. ಆದರೆ ಸಾವಿರಾರು ಕೋಟಿ ರೂಪಾಯಿ ವೆಚ್ಚವಾದರೂ ಇಂತಹ ಯಾವುದೇ ಸೌಲಭ್ಯ ಕಲ್ಪಿಸದೆ ಅವೈಜ್ಞಾನಿಕವಾಗಿ ತರಾತುರಿಯಲ್ಲಿ ಎಕ್ಸ್‌ಪ್ರೆಸ್ ಹೈವೆ ನಿರ್ಮಾಣ ಮಾಡಲಾಗಿದೆ ಎಂದು ಹಳ್ಳಿ ಜನರು ಆಕ್ರೋಶ ವ್ಯಕ್ತಪಡಿಸಿದ್ದರು.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಪರಿಶೀಲನೆ ನಡೆಸಿದ ರಾಜ್ಯ ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಸಹ ಅವೈಜ್ಞಾನಿಕವಾಗಿ ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಅಲೋಕ್ ಕುಮಾರ್ ಅವರ ಆದೇಶದ ಮೇರೆಗೆ ರಸ್ತೆ ಸುರಕ್ಷತೆ ಬಗ್ಗೆ ಪರಿಶೀಲನೆ ನಡೆಸಿದ ಪೊಲೀಸ್ ಇಲಾಖೆಯ ಅಧಿಕಾರಿಗಳು ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡುವ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದ್ದರು.

ಸರಣಿ ಅಪಘಾತಗಳಿಂದ ತಡವಾಗಿಯಾದರೂ ಎಚ್ಚೆತ್ತುಕೊಂಡಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈಗ ಸ್ಕೈವಾಕ್ ನಿರ್ಮಾಣ ಮಾಡಲು ತೀರ್ಮಾನ ಕೈಗೊಂಡು, ಅದರ ಪ್ರಕ್ರಿಯೆ ಕೂಡ ಆರಂಭಿಸಿದ್ದಾರೆ. ಮೈಸೂರು-ಬೆಂಗಳೂರು ನಡುವಿನ 118 ಕಿಲೋಮೀಟರ್‌ಗಳ ಎಕ್ಸ್‌ಪ್ರೆಸ್ ಹೈವೇನಲ್ಲಿ ಒಟ್ಟು 24 ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕಾಗಿ ಈಗಾಗಲೇ ಸ್ಥಳಗಳನ್ನು ಕೂಡ ಗುರುತಿಸಲಾಗಿದೆ. ಹೆಚ್ಚು ಹಳ್ಳಿಗಳು ಇರುವ ಸ್ಥಳವನ್ನು ಗಮನದಲ್ಲಿರಿಸಿಕೊಂಡು ಮೈಸೂರು ತಾಲೂಕಿನ ಕಳಸ್ತವಾಡಿ, ಸಿದ್ದಲಿಂಗಪುರ, ಮಂಡ್ಯ ಜಿಲ್ಲೆಯ ಬ್ರಹ್ಮಾಪುರ, ಸಿದ್ದಾಪುರ, ಗಂಗೂರು, ಗೆಜ್ಜಲಗೆರೆ, ಬಿ.ಗೌಡಗೆರೆ, ಗೌಡಹಳ್ಳಿ, ರುದ್ರಾಕ್ಷಿಪುರ, ಮಾದಾಪುರ, ಕಲ್ಲುಗೋಪಹಳ್ಳಿ, ಹುಲ್ತಾರ್ ಹೊಸದೊಡ್ಡಿ, ಕಣಿಮ್ಮಿಕೆ ಸೇರಿದಂತೆ ಒಟ್ಟು 24 ಕಡೆ ಸ್ಕೈವಾಕ್ ನಿರ್ಮಾಣ ಮಾಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಧಾರ ಮಾಡಿದೆ. ಫುಟ್ ಓವರ್‌ಬ್ರಿಡ್ಜ್ ಮಾದರಿಯ ಸ್ಕೈವಾಕ್‌ಗಾಗಿ ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನೀಲನಕ್ಷೆ ಸಿದ್ಧ ಮಾಡಿದೆ. ಜೊತೆಗೆ ಡಿಪಿಆರ್ ಕೂಡ ಸಿದ್ಧವಾಗಿದೆ. 46 ಕೋಟಿ ರೂಪಾಯಿ ವೆಚ್ಚದ ಸ್ಕೈವಾಕ್ ಅನ್ನು ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಸ್ಕೈವಾಕ್ ನಿರ್ಮಾಣ ಕಾರ್ಯವನ್ನು ಇಪಿಸಿ(ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಅಂಡ್ ಕನ್ಸ್ಟ್ರಕ್ಷನ್) ಆಧಾರದಲ್ಲಿ ಗುತ್ತಿಗೆ ನೀಡಲಾಗುತ್ತಿದೆ. ಇದರ ನಿರ್ಮಾಣದ ಗುತ್ತಿಗೆ ಪಡೆದ ಕಂಪನಿಯವರೇ ನಿರ್ವಹಣೆ ಕೂಡ ಮಾಡಲಿದ್ದಾರೆ.

ಕಾಂಕ್ರಿಟ್ ಹಾಗೂ ಕಬ್ಬಿಣದಿಂದ ನಿರ್ಮಾಣ ಮಾಡುವ ಸ್ಕೈವಾಕ್‌ನಿಂದ ಎಕ್ಸ್‌ಪ್ರೆಸ್ ವೇನ ಹಾಗೂ ಸರ್ವೀಸ್ ರಸ್ತೆಯಲ್ಲಿ ಸಂಚರಿಸುವ ಯಾವುದೇ ವಾಹನಗಳಿಗೆ ತೊಂದರೆ ಆಗದಂತೆ ಡಿಸೈನ್ ಮಾಡಲಾಗಿದೆ. ಎಕ್ಸ್‌ಪ್ರೆಸ್ ವೇನ ಕೆಳಗಿನಿಂದ 63 ಅಡಿ ಎತ್ತರದ ಸ್ಕೈವಾಕ್ 10 ಅಡಿ ಅಗಲವಿರುತ್ತದೆ.

ಪರಿಸರ ಸಂರಕ್ಷಣೆಗೆ ಯುವಜನರು ಹೆಚ್ಚಾಗಿ ಮುಂದಾಗಬೇಕು

ರಾಷ್ಟ್ರಮಟ್ಟದ ಯುವಕರ ಸಂಘಟನೆಯ ಯುವಪ್ರತಿನಿಧಿ ಶಾಲಿನಿ ಅಭಿಮತ



ಮೈಸೂರು, ಆ.26– ಸುಸ್ಥಿರ ಜಗತ್ತಿಗಾಗಿ ಯುವ ಜನರಿಗೆ ಹಸಿರು ಕೌಶಲ್ಯಗಳು ಎಂಬುದು 2023ರ ಅಂತರ ರಾಷ್ಟ್ರೀಯ ಯುವ ದಿನಾಚರಣೆಯ ಧ್ಯೇಯ ವಾಕ್ಯವಾಗಿದೆ. ಆದ್ದರಿಂದ ಪರಿಸರ ಸಂರಕ್ಷಣೆಯಲ್ಲಿ ಯುವ ಜನರು ಮುಂದಾಗಬೇಕು ಎಂದು ರಾಷ್ಟ್ರಮಟ್ಟದ ಯುವಕರ ಸಂಘಟನೆಯ ಯುವ ಪ್ರತಿನಿಧಿ ಶಾಲಿನಿ ತಿಳಿಸಿದರು.

ಇಂದು ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್.ಎಲ್.ಎಚ್.ಪಿ) ಹಾಗೂ ಕರ್ನಾಟಕ ರಾಜ್ಯ ಯುವಕರ ಸಂಘಟನೆ ವತಿಯಿಂದ ವರುಣಾದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಯುವ ಜನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮನೆಯಲ್ಲಿ ನಮ್ಮದೇ ಆದ ಕೆಲವು ಜವಾಬ್ದಾರಿಗಳನ್ನು ನಾವು ನಿರ್ವಹಿಸ ಬೇಕಾಗುತ್ತದೆ. ಅದೇ ರೀತಿ ಪರಿಸರ ರಕ್ಷಣೆ ಯಲ್ಲಿ ನಮ್ಮ ಕರ್ತವ್ಯವನ್ನು ಅರಿಯಬೇಕು. ಹಸಿರುಮನೆ ಅನಿಲಗಳ ಪರಿಣಾಮದಿಂದ ವಾತಾವರಣದಲ್ಲಿನ ಉಷ್ಣಾಂಶ ಹೆಚ್ಚು ತ್ತಿರುವುದು, ಜಲ ಮಾಲಿನ್ಯ, ವಾಯು ಮಾಲಿನ್ಯ, ಪರಿಸರ ಮಾಲಿನ್ಯ, ರಾಸಾಯನಿಕ ಗಳನ್ನು ಹೆಚ್ಚು ಬಳಸುತ್ತಿರುವುದು, ಹವಾ ಮಾನ ವೈಪರಿತ್ಯ ಉಂಟಾಗುತ್ತಿರುವುದು ಪರಿಸರ ಹಾಳಾಗುತ್ತಿರುವುದರ ಸಾಕ್ಷಿ ಗಳಾಗಿವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಇದರ ಕುರಿತು ಚರ್ಚೆಯಾಗುತ್ತಿದೆ. ಕಲ್ಲಿದ್ದಲು ಉಪಯೋಗಿಸುತ್ತಿರು ವುದರಿಂದ ಉಷ್ಣಾಂಶ ಹೆಚ್ಚಾಗುತ್ತಿದೆ. ಇದೇ ರೀತಿ ಮುಂದುವರೆದರೆ ನಾವು ಹಾಗೂ ನಮ್ಮ ಮುಂದಿನ ಪೀಳಿಗೆಯ ಜೀವನ ಹಾಗೂ ಜೀವ ತೊಂದರೆಗೆ ಸಿಲುಕಬಹುದು ಎಂದರು.

ಸಂಸ್ಥೆಯ ಸಂಯೋಜಕ ಶಶಿಕುಮಾರ್ ಮಾತನಾಡಿ, ಇಂದಿನಿಂದಲೇ ನಾವು ಪರಿಸರವನ್ನು ಉಳಿಸುವಂತಹ ಕೆಲಸ ಮಾಡಬೇಕು. ಪ್ರತಿಯೊಬ್ಬ ಯುವಕರು ಸಹ ಒಂದೊಂದು ಗಿಡ ನೆಟ್ಟರೆ ಪರಿಸರ ಉಳಿಸಿದಂತಾಗುತ್ತದೆ ಮತ್ತು ಪರಿಸರ ಸಂರಕ್ಷಣೆಯನ್ನು ಮಾಡುವುದು ಎಲ್ಲರ ಜವಾಬ್ದಾರಿ ಎಂದು ತಿಳಿಸಿದರು. ಕಾರ್ಯ ಕ್ರಮದಲ್ಲಿ ಕಾಲೇಜು ಹಿರಿಯ ಉಪ ನ್ಯಾಸಕರಾದ ಸೋಮಣ್ಣ, ಶಾಲೆಯ ಮುಖ್ಯ ಶಿಕ್ಷಕರಾದ ಮಾಯಾಂಗ, ಯುವ ರಾಜ್ಯ ಸಂಯೋಜಕರಾದ ಅನಿಕೇತನ, ಶಾಲೆ ಉಪನ್ಯಾಸಕರು ಹಾಗೂ 50ಕ್ಕೂ ಹೆಚ್ಚು ಯುವಜನರು ಭಾಗವಹಿಸಿದ್ದರು.



ಮೈಸೂರು ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯು ಮೈಸೂರು ಉತ್ತರ ವಲಯದಲ್ಲಿ ಆಯೋಜಿಸಿದ್ದ ವಲಯ ಮಟ್ಟದ ಕೋ ಕೋ ಪಂದ್ಯಾವಳಿಯಲ್ಲಿ ಮೈಸೂರಿನ ಅನಂತಗೀತ ವಿದ್ಯಾಲಯದ ಮಕ್ಕಳು ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳೊಂದಿಗೆ ಶಾಲೆ ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲ ಹರದೂರು ಲೋಕೇಶ್, ದೈಹಿಕ ಶಿಕ್ಷಕ ಬಿಳಿಗಿರಿ ರಂಗಯ್ಯ ಮತ್ತು ಶಿಕ್ಷಕರಾದ ಸುಲೋಚನಾ, ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಮಾಜದ ಅಭಿವೃದ್ಧಿಗೆ ಸಂಘಟನೆ ಅವಶ್ಯಕ



ಮೈಸೂರು, ಆ. 26– ಸಮಾಜದ ಅಭಿವೃದ್ಧಿಯಲ್ಲಿ ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸಿ ಆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹಾಯ ಹಸ್ತ ನೀಡಿದಲ್ಲಿ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಸಂಘಟನೆ ಅವಶ್ಯಕ. ಪ್ರಸ್ತುತ ದಿನಗಳಲ್ಲಿ ಬ್ರಾಹ್ಮಣ ಸಮಾಜ ಜಾಗೃತಿ ಯಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯ ದರ್ಶಿ ವಿಕ್ರಮ ಅಯ್ಯಂಗಾರ್ ಹೇಳಿದರು.

ಮೈಸೂರಿನ ಚಾಮರಾಜಪುರಂನಲ್ಲಿ ರುವ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಕಚೇರಿಯಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಹಾಗೂ ವಿಪ್ರ ಸಹಾಯವಾಣಿ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಹ ಕಾರ್ಯದರ್ಶಿಯಾಗಿ ನೇಮಕವಾದ ಜಯಸಿಂಹ ಶ್ರೀಧರ್ ಹಾಗೂ ಶ್ರೀ ರಾಮ ಚಂದ್ರಾಪುರ ಮಠದ ಹವ್ಯಕ ಮಹಾ ಮಂಡಲದ ಮೈಸೂರು ವಲಯದ ಕಾರ್ಯದರ್ಶಿಯಾಗಿ ನೇಮಕವಾದ ರಾಕೇಶ್ ಭಟ್ ಅಭಿನಂದನಾ ಸಮಾರಂಭ ದಲ್ಲಿ ಮಾತನಾಡಿದ ಅವರು, ಸರ್ವೇ ಜನಃ ಸುಖಿನೋ ಭವಂತು ಎಂಬ ವಾಣಿಯಂತೆ ಬ್ರಾಹ್ಮಣರು ಸಮಸ್ತ ಹಿಂದೂ ಧರ್ಮದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಜಾತಿಯಿಂದ ಹಿಂದೂ ಧರ್ಮ ಒಡೆಯದಂತೆ ಬ್ರಾಹ್ಮಣ ಸಮಾಜ ಸಮಸ್ತ ಹಿಂದೂ ಸಮಾಜಕ್ಕೆ ಮಾರ್ಗ ದರ್ಶನ ನೀಡಬೇಕು ಎಂದರು. ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಕೆ ಎಂ ನಿಶಾಂತ್, ಎನ್.ವಿ.ನಾಗೇಂದ್ರ ಬಾಬು, ಶ್ರೀನಿವಾಸ್ ಪ್ರಸಾದ್, ಎಸ್.ಎನ್.ರಾಜೇಶ್, ರಂಗನಾಥ್, ಸುಚೇಂದ್ರ ಚಕ್ರಪಾಣಿ, ಪ್ರಶಾಂತ್, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸ್ನೇಹ, ಪ್ರೀತಿ, ನಿಷ್ಠೆಯ ಸಂಕೇತ ಶ್ವಾನ



ಮೈಸೂರು, ಆ. 26– ಬದುಕಿನ ಭದ್ರತೆ ಜೊತೆಗೆ ನಿಷ್ಠೆ, ಸ್ನೇಹಕ್ಕೆ ಶ್ವಾನಗಳು ಹೆಸರುವಾಸಿಯಾಗಿವೆ ಎಂದು ಬಿಜೆಪಿ ನರಸಿಂಹರಾಜ ಕ್ಷೇತ್ರದ ಯುವಮೋರ್ಚಾ ಅಧ್ಯಕ್ಷ ಲೋಹಿತ್ ತಿಳಿಸಿದರು.

ವಿಶ್ವ ಶ್ವಾನಗಳ ದಿನಾಚರಣೆ ಅಂಗ ವಾಗಿ ಗೌಸಿಯಾನಗರದಲ್ಲಿ ರೇವಣ್ಣ ಎಂಬುವರ ಮನೆಯಲ್ಲಿ ಶ್ವಾನಗಳಿಗೆ ಕೇಕ್ ಕತ್ತರಿಸಿ ತಿನ್ನಿಸುವ ಮುಖಾಂತರ ತಮ್ಮ ಮನೆಯ ಸದಸ್ಯರೇ ಎಂಬ ಭಾವನೆಯಿಂದ ಅರ್ಥಪೂರ್ಣವಾಗಿ ಶ್ವಾನಗಳ ದಿನಾಚರಣೆ ಆಚರಿಸಿದರು.

ಬಳಿಕ ಮಾತನಾಡಿದ ಅವರು, ಮಾನವ, ಸಹೋದ್ಯೋಗಿಗಳು ಮತ್ತು ಬಂಧು ಗಳೊಂದಿಗೆ ಸ್ನೇಹ ಭಾವನೆ ತೋರೆ ಯುತ್ತಿದ್ದಾನೆ. ನಾಯಿಗಳು ಜೀವನದಲ್ಲಿ ಮನುಷ್ಯನಿಗೆ ಗೆಳೆಯನ ಸ್ನೇಹವನ್ನು ನೀಡುವುದರ ಜೊತೆಗೆ ಬದುಕಿಗೆ ಭದ್ರತೆ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಸಮಾಜ ಸೇವಕರಾದ ನಂದನ್ ಮನೋಹರ್, ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ 108ನೇ ಜನ್ಮದಿನಕ್ಕೆ ಸಿದ್ಧತೆ

ಮೈಸೂರು,ಆ.26(ಎಂಟಿವೈ)– ಸುತ್ತೂರು ವೀರಸಿಂಹಾಸನ ಮಹಾ ಸಂಸ್ಥಾನ ಮಠದ 23ನೇ ಪೀಠಾಧಿಪತಿ ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 108ನೇ ಜಯಂತಿ ಮಹೋತ್ಸವ ಚಾಮುಂಡಿಬೆಟ್ಟ ತಪ್ಪಲಿನ ಸುತ್ತೂರು ಮಠದ ಆವರಣದಲ್ಲಿ ಆ.29ರಂದು ಬೆಳಗ್ಗೆ 10.30ಕ್ಕೆ ಆರಂಭ ವಾಗಲಿದ್ದು, ಮುಖ್ಯಮಂತ್ರಿ ಸಿದ್ದ ರಾಮಯ್ಯ ಸೇರಿದಂತೆ ಗಣ್ಯರು ಹಾಗೂ ಮಠಾಧಿಪತಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜೆ.ಬೆಟಸೂರ ಮಠ ತಿಳಿಸಿದ್ದಾರೆ.



ಮೈಸೂರಿನ ಅಗ್ರಹಾರ ಜೆಎಸ್‌ಎಸ್ ಆಸ್ಪತ್ರೆ ಆವರಣದ ರಾಜೇಂದ್ರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಜನ್ಮ ಜಯಂತಿ ಕಾರ್ಯಕ್ರಮವನ್ನು ಪ್ರತಿ ವರ್ಷವೂ ಆಚರಿ ಸುವ ಪದ್ಧತಿಯನ್ನು ಅನುಸರಿಸುತ್ತಾ ಬಂದಿದ್ದು, ದಿನವಿಡಿ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ. ಈ ವರ್ಷದ ಜಯಂತಿ ಕಾರ್ಯಕ್ರಮವನ್ನು ಆ.29ರಂದು ಬೆಳಗ್ಗೆ 10.30ಕ್ಕೆ ಆರಂಭವಾಗಿ ಸಂಜೆವರೆಗೂ ನಡೆಯಲಿದೆ ಎಂದರು.

ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದಲ್ಲಿ ಬೆಳಗ್ಗೆ 10.30ಕ್ಕೆ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀಗಳು, ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮ ದಲ್ಲಿ ಸಂಸದ ಪ್ರತಾಪಸಿಂಹ 'ರಾಜಗುರು ತಿಲಕ' ಕೃತಿ ಬಿಡುಗಡೆ ಮಾಡಿದರೆ, ಶಾಸಕ ಜಿ.ಟಿ.ದೇವೇಗೌಡ 'ಪ್ರಸಾದ' ವಿಶೇಷ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮೇಯರ್ ಶಿವಕುಮಾರ್ ಹಾಗೂ ಇನ್ನಿ ತರರು ಭಾಗವಹಿಸಲಿದ್ದಾರೆ ಎಂದರು.



ನಿವೃತ್ತರಿಗೆ ಸನ್ಮಾನ: ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸಿಬ್ಬಂದಿಗಳಿಗೆ ಅಂದು ಮಧ್ಯಾಹ್ನ 3 ಗಂಟೆಗೆ ಅಭಿನಂದಿಸಲಾಗುತ್ತದೆ. ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವ ರಿಗೆ ಪ್ರತಿ ವರ್ಷವೂ ಸನ್ಮಾನಿಸುವ ಪದ್ಧತಿ ಅನುಸರಿಸಲಾಗುತ್ತಿದೆ. ಈ ವರ್ಷ 148 ಮಂದಿ ನಿವೃತ್ತರಾಗಿದ್ದು, 54 ಮಂದಿ ಕೆಲಸದಿಂದ ಬಿಡುಗಡೆ ಹೊಂದಿದ್ದಾರೆ. ನಿವೃತ್ತರಾದವರಿಗೆ ಸನ್ಮಾನಿಸಿದರೆ, 20 ಮಂದಿ ಸೇವೆಯಲ್ಲಿದ್ದಾಗಲೇ ನಿಧನ ರಾಗಿದ್ದು ಅವರ ಕುಟುಂಬದವರಿಗೆ ಸಾಂತ್ವನ ಹೇಳಲಾಗುವುದು ಎಂದು ತಿಳಿಸಿದರು.

ಜೆಎಸ್‌ಎಸ್ ವಿದ್ಯಾಸಂಸ್ಥೆಗಳಲ್ಲಿ ಎಸ್‌ಎಸ್‌ಎಲ್ಸಿ ಮತ್ತು ಪಿಯುಸಿ ಪರೀಕ್ಷೆ ಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗು ವುದು. ಜತೆಗೆ ಜೆಎಸ್‌ಎಸ್ ಶಾಲಾ ಕಾಲೇಜುಗಳ ಉತ್ತಮ ವಾರ್ಷಿಕ ಸಂಚಿಕೆ ಗಳಿಗೆ ಹಾಗೂ ಪ್ರಸಾದ ದ್ವೈಮಾಸಿಕ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಪ್ರಸಾದ ನಿಲಯ ಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತರಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು. ಇದರೊಂದಿಗೆ ನೇತ್ರ, ರಕ್ತ, ಅಂಗಾಂಗಳು, ದೇಹ ದಾನದ ಬಗ್ಗೆ ಮಾಹಿತಿ ನೀಡಲು, ನೋಂದಣಿ ಮಾಡಿಕೊಳ್ಳಲು ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಮಾಹಿತಿ ಕೇಂದ್ರ ತೆರೆಯಲಾಗುವುದು ಎಂದು ತಿಳಿಸಿದರು.

ಸಾಹಿತಿ ಡಾ.ಪ್ರದೀಪಕುಮಾರ ಹೆಬ್ರಿಯವರು ರಾಜೇಂದ್ರ ಶ್ರೀಗಳ ಕುರಿತು ರಚಿಸಿರುವ ರಾಜಗುರುತಿಲಕ ಎಂಬ ಮಹಾಕಾವ್ಯ, ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರತಿ ತಿಂಗಳು ಪ್ರಕಟವಾಗುವ ಪ್ರಸಾದ ವಿಶೇಷ ಸಂಚಿಕೆ ಬಿಡುಗಡೆ ಮಾಡಲಾಗುವುದು. ಜಯಂತಿ ಅಂಗವಾಗಿ ಜೆಎಸ್‌ಎಸ್ ಗ್ರಂಥಮಾಲೆಯ ಪ್ರಕಟಣೆಗಳಿಗೆ ಆ.29ರಿಂದ ಸೆ.30ರವರೆಗೆ ಶೇ.50ರಷ್ಟು ರಿಯಾಯಿತಿ ನೀಡಲಾ ಗುತ್ತದೆ ಎಂದು ಹೇಳಿದರು.

ವಿವಿಧೆಡೆ ಆಚರಣೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಎಲ್ಲ ಅಂಗಸಂಸ್ಥೆ ಗಳು, ವಿವಿಧ ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ವಿವಿಧೆಡೆ ಶ್ರೀಗಳ ಜಯಂತಿ ಆಚರಿಸಲಾಗುತ್ತಿದೆ. ಆಸ್ಪತ್ರೆ ಗಳಲ್ಲಿ ರೋಗಿಗಳಿಗೆ ಹಣ್ಣುಹಂಪಲು ವಿತರಣೆ, ಶಾಲಾ ಕಾಲೇಜುಗಳಲ್ಲಿ ಸಸಿ ನೆಡುವುದು, ವಿಚಾರ ಸಂಕಿರಣ, ಕ್ರೀಡಾ ಕೂಟ ಆಯೋಜಿಸಲಾಗುತ್ತಿದೆ. ಆರೋಗ್ಯದ ಅರಿವು, ಉಚಿತ ತಪಾಸಣಾ ಶಿಬಿರ, ಗಾಲಿಕುರ್ಚಿ, ಶ್ರವಣದೋಷ ಉಳ್ಳವರಿಗೆ ಉಚಿತವಾಗಿ ಉಪಕರಣ ನೀಡಲಾಗು ತ್ತದೆ. ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್, ಬ್ಯಾಗ್, ಸಮವಸ್ತ್ರ ವಿತರಿಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರಸ್ವಾಮಿ, ಕಾಲೇಜು ಶಿಕ್ಷಣ ವಿಭಾಗದ ಉಪ ನಿರ್ದೇಶಕ ಪ್ರೊ.ಬಿ.ನಿರಂಜನಮೂರ್ತಿ ಇದ್ದರು.

ರಾಜ್ಯದ ಜನರು ಬಿಜೆಪಿಯವರನ್ನು ಸೋಲಿಸಿ ಈಗಾಗಲೇ ಬೀದಿಯಲ್ಲಿ ನಿಲ್ಲಿಸಿದ್ದಾರೆ

ಬಿಜೆಪಿ ನಾಯಕರಿಗೆ ಸಚಿವ ಡಾ.ಮಹದೇವಪ್ಪ ತಿರುಗೇಟು

ಮೈಸೂರು, ಆ.26(ಬಿಎಲ್‌ಯು)– ಕರ್ನಾಟಕದ ಜನತೆ ಬಿಜೆಪಿಯವರನ್ನು ಸೋಲಿಸಿ, ಈಗಾಗಲೇ ಬೀದಿಯಲ್ಲಿ ನಿಲ್ಲಿಸಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕೇಸರಿ ನಾಯಕರನ್ನು ಗೇಲಿ ಮಾಡಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬೆಂಗ ಳೂರಿಗೆ ಇಂದು ಆಗಮಿಸಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಬಿಜೆಪಿ ನಾಯಕರು ಬೀದಿ ಯಲ್ಲಿ ನಿಂತಿದ್ದ ಬಗ್ಗೆ ಕಾಂಗ್ರೆಸ್ ಮಾಡಿ ರುವ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದರು.

ಬಿಜೆಪಿ ನಾಯಕರನ್ನು ಈಗಾಗಲೇ ಸೋಲಿಸಿ ಬೀದಿಯಲ್ಲಿ ನಿಲ್ಲಿಸಿರುವ ಕಾರಣ ಅವರ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ಕೇಂದ್ರದಲ್ಲಿ ಅಧಿಕಾರ ದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಅವಧಿ ಯಲ್ಲಿ ನೆಹರು, ರಾಜೀವ್‌ಗಾಂಧಿ ಕಾಲ ದಿಂದಲೂ ಬಾಹ್ಯಾಕಾಶ ಸಂಶೋಧನೆಗೆ ಹೆಚ್ಚು ಒತ್ತು ನೀಡುತ್ತಾ ಬಂದಿದ್ದರು. ಈ ಕಾರಣದಿಂದ ಈಗ ಚಂದ್ರಯಾನ–3 ಯಶಸ್ವಿಯಾಗಿದೆ. ಚಂದ್ರಯಾನ–3ರ ಯಶಸ್ಸು ಇಸ್ರೋ ವಿಜ್ಞಾನಿಗಳಿಗೆ ಮಾತ್ರ ಸಲ್ಲಬೇಕು. ಇದರ ಕ್ರೆಡಿಟ್ ಯಾರಿಗೂ ಹೋಗಲು ಸಾಧ್ಯವೇ ಇಲ್ಲ ಎಂದು ಡಾ. ಮಹದೇವಪ್ಪ ತಿಳಿಸಿ ದರು. ಬಿಜೆಪಿ ನಾಯಕರು ಬೀದಿಗೆ ಬಂದಿದ್ದಾರೆ ಎಂಬ ಕಾಂಗ್ರೆಸ್ ಟ್ವೀಟ್ ಬಗ್ಗೆ ಇದೇ ವೇಳೆ ಪ್ರತಿಕ್ರಿಯೆ ನೀಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಅವರನ್ನು ನಾಯಕರು ಎಂದು ಒಪ್ಪಿಕೊಂಡಿದ್ದಾರೆ. ಆದರೂ ಯಾವ ಕಾರಣಕ್ಕೆ ಅವರನ್ನು ಅಲ್ಲಿ ನಿಲ್ಲಿಸಿದ್ದಾರೊ ಗೊತ್ತಿಲ್ಲ. ಸ್ಪಷ್ಟವಾಗಿ ಯಾವುದೇ ವಿಚಾರ ತಿಳಿಯದೆ ಮಾತನಾ ಡುವುದು ತಪ್ಪು ಎಂದು ಹೇಳಿದರು.



ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ದೂರವಾಣಿ ಕರೆ ಮಾಡಿ ರುವ ಬಗ್ಗೆ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭದ ಸಿದ್ಧತಾ ಕಾರ್ಯದಲ್ಲಿ ನಾನು ತೊಡಗಿದ್ದೇನೆ. ಇದರಿಂದ ಯಾರು ಯಾರಿಗೆ ಕರೆ ಮಾಡಿದರು, ಯಾಕೆ ಕರೆ ಮಾಡಿದರು ಎಂಬ ಊಹಾ ಪೋಹದ ವಿಚಾರಗಳಿಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ ನಡೆಯುತ್ತಿರುವ ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭ ಕಾಂಗ್ರೆಸ್ ಪಕ್ಷದ ಶಕ್ತಿ ಪ್ರದರ್ಶನವಲ್ಲ. ರಾಹುಲ್ ಗಾಂಧಿ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವುದು ಕೂಡ ರಾಜಕೀಯ ಉದ್ದೇಶದಿಂದ ಅಲ್ಲ. ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಗ್ಯಾರಂಟಿ ಯೋಜನೆಯನ್ನು ಘೋಷಣೆ ಮಾಡಿದ್ದರು. ಈ ಕಾರಣದಿಂದ ಅವರ ಸಮ್ಮುಖದಲ್ಲೇ ಕಾರ್ಯಕ್ರಮಕ್ಕೆ ಚಾಲನೆ ನೀಡಲು ರಾಹುಲ್ ಗಾಂಧಿ ಅವರಿಗೆ ಆಹ್ವಾನ ನೀಡಿದ್ದೇವೆ. ಇದರಲ್ಲಿ ಯಾವುದೇ ರಾಜಕೀಯ ಲಾಭ–ನಷ್ಟದ ಲೆಕ್ಕಾಚಾರವಿಲ್ಲ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು.

ಹರಿ ವಿದ್ಯಾಲಯದಲ್ಲಿ ರಕ್ತದಾನ ಶಿಬಿರ



ಮೈಸೂರು, ಆ. 26– ರಕ್ತದಾನವು ವ್ಯಕ್ತಿಗಳ ಸಾಮಾನ್ಯ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲ. ಒಬ್ಬ ವ್ಯಕ್ತಿಯ ರಕ್ತದಾನವು ಐದು ಜನರ ಆರೋಗ್ಯಕ್ಕೆ ಸಹಾಯಕವಾಗುತ್ತದೆ ಎಂದು ಸುಯೋಗ್ ಆಸ್ಪತ್ರೆಯ ಡಾ.ಮಂಜುನಾಥ್ ತಿಳಿಸಿದರು.

ಹರಿ ವಿದ್ಯಾಲಯ ಮತ್ತು ವಿದ್ಯಾಲಯ ಹಳೇ ವಿದ್ಯಾರ್ಥಿಗಳ ಸಂಘವು ಸುಯೋಗ್ ಆಸ್ಪತ್ರೆಯ ಸಹಯೋಗದೊಂದಿಗೆ ಹರಿ ವಿದ್ಯಾಲಯದ ಆವರಣದಲ್ಲಿ ಆಯೋಜಿ ಸಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದ ಅವರು, ಸುಧಾರಿತ ತಂತ್ರ ಜ್ಞಾನದ ಮೂಲಕ ರಕ್ತದ ಘಟಕಗಳನ್ನು ಬೇರ್ಪಡಿಸಿ ರೋಗಿಗಳಿಗೆ ಅವರ ಅವಶ್ಯ ಕತೆಗೆ ಅನುಗುಣವಾಗಿ ನೀಡಬಹುದು. ಆದ್ದರಿಂದ ಸಾರ್ವಜನಿಕರು ವರ್ಷದಲ್ಲಿ ಎರಡು ಬಾರಿ ರಕ್ತದಾನದಲ್ಲಿ ತೊಡಗಿಸಿ ಕೊಳ್ಳಬೇಕು ಎಂದು ತಿಳಿಸಿದರು. ಹರಿ ವಿದ್ಯಾಲಯದ ಸದಸ್ಯ ಎಚ್.ಆರ್. ಭಗವಾನ್ ಮಾತನಾಡಿ, ಸಂಸ್ಥೆಯು ಸದಾ ಸಾರ್ಥಕ ಕಾರ್ಯಕ್ರಮಗಳ ಮೂಲಕ ಸಮಾಜದ ಒಳಿತಿಗಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಸಂಸ್ಥೆಯ ಪ್ರಾಂಶುಪಾಲ ಡಾ.ಎನ್. ಭಾರತಿ ಶಂಕರ್ ಮಾತನಾಡಿ, ರಕ್ತ ದಾನದಿಂದ ಆರೋಗ್ಯ ಹಾಗೂ ತೂಕವನ್ನು ಕಾಪಾಡಿಕೊಳ್ಳಬಹುದು ಎಂದು ಹೇಳಿದರು. ರಕ್ತದಾನ ಶಿಬಿರದಲ್ಲಿ ಸುಯೋಗ್ ಆಸ್ಪತ್ರೆಯ ವೈದ್ಯರು, ಹರಿ ವಿದ್ಯಾಲಯದ ಹಳೆ ವಿದ್ಯಾರ್ಥಿಗಳು ಹಾಗೂ 50 ಕ್ಕೂ ಹೆಚ್ಚು ರಕ್ತದಾನಿಗಳು ಭಾಗವಹಿಸಿದ್ದರು.

ಪ್ರಧಾನಿ ಮೋದಿ ಬೆಂಗಳೂರು ಭೇಟಿ ಬೆನ್ನ ಹಿಂದೆಯೇ ಕಾಂಗ್ರೆಸ್–ಬಿಜೆಪಿ ಕೆಸರೆರಚಾಟ

- ಹೆಚ್‌ಎಎಲ್‌ನಿಂದ ಪೀಣ್ಯದ ಇಸ್ರೋವರೆಗೆ ತೆರೆದ ಕಾರಲ್ಲಿ ತೆರಳಿದ ಪ್ರಧಾನಿ; ಜನರ ನಡುವೆ ನಿಂತು ಪ್ರಧಾನಿ ಮೋದಿ ಅವರಿಗೆ ಕೈಬೀಸಿದ ಬಿಜೆಪಿ ಮುಖಂಡರು
- ಪ್ರಧಾನಿ ಸ್ವಾಗತಕ್ಕೆ ಸಿಎಂ, ಡಿಸಿಎಂ, ಸಚಿವರ ಗೈರು ಹಾಜರಿ ಬಗ್ಗೆ ಮಾಜಿ ಸಚಿವ ಆರ್.ಅಶೋಕ್ ಕೆಂಡಾಮಂಡಲ
- ಪ್ರಧಾನಿ ಕಚೇರಿ ಸೂಚನೆಯಂತೆ ಸ್ವಾಗತಕ್ಕೆ ಹೋಗಲಿಲ್ಲ; ಬಿಜೆಪಿಯವರಿಗೆ ಮಾಹಿತಿ ಕೊರತೆ: ಡಿಕೆಶಿ ಡಿಚ್ಚಿ

ಬೆಂಗಳೂರು, ಆ. 26(ಕೆಎಂಶಿ)– ಚಂದ್ರಯಾನ–3 ಯಶಸ್ಸಿಗಾಗಿ ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಭೇಟಿ ನೀಡಿದ್ದ ವಿಚಾರ ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ಪ್ರತಿ ಪಕ್ಷ ಬಿಜೆಪಿ ನಡುವೆ ಕೆಸರೆರಚಾಟಕ್ಕೆ ಎಡೆಮಾಡಿಕೊಟ್ಟಿದೆ.



ಬೆಂಗಳೂರಿಗೆ ಇಂದು ಆಗಮಿಸಿದ ಪ್ರಧಾನಿ ಅವರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಇಸ್ರೋ ಕೇಂದ್ರವಿರುವ ಪೀಣ್ಯದವರೆಗೂ ತೆರೆದ ಕಾರಿನಲ್ಲಿ ತೆರಳಿದರು. ಈ ಸಂದಭದಲ್ಲಿ ರಸ್ತೆ ಇಕ್ಕೆಲ ಗಳಲ್ಲಿ ನೆರೆದಿದ್ದ ಜನರತ್ತ ಕೈ ಬೀಸುತ್ತಾ ಪ್ರಧಾನಿ ಸಾಗಿದರು. ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲು, ಮಾಜಿ ಸಚಿವರಾದ ಮುನಿರತ್ನ, ಗೋಪಾಲಯ್ಯ, ಸಂಸದ ತೇಜಸ್ವಿ ಸೂರ್ಯ, ಶಾಸಕ ಮುನಿರಾಜು ಸೇರಿ ದಂತೆ ಹಲವು ಬಿಜೆಪಿ ನಾಯಕರು ಸಾಮಾನ್ಯ ರಂತೆ ಜನತೆಯ ಜೊತೆಗೆ ಬ್ಯಾರಿಕೇಡ್ ಹಿಂದೆ ಸಾಲಿನಲ್ಲಿ ನಿಂತು ಪ್ರಧಾನಿಯತ್ತ ಕೈಬೀಸಿ ಹರ್ಷ ವ್ಯಕ್ತಪಡಿಸಿದರು.

ಕಾಂಗ್ರೆಸ್ ಟೀಕೆ: ಈ ವಿಚಾರವನ್ನು ಮುಂದಿಟ್ಟುಕೊಂಡು ಟೀಕೆ ಮಾಡಿರುವ ಕಾಂಗ್ರೆಸ್, ವಿಧಾನಸಭಾ ಚುನಾವಣೆಯಲ್ಲಿ ಸೋತ ಬಳಿಕ ರಾಜ್ಯ ಬಿಜೆಪಿ ನಾಯಕ ರನ್ನು ಅವರ ಹೈಕಮಾಂಡ್ ಹತ್ತಿರಕ್ಕೂ ಸೇರಿಸದೆ ಬೀದಿಪಾಲು ಮಾಡಿದ್ದಾರೆ ಎಂಬುದಕ್ಕೆ ಇಂದಿನ ಘಟನೆಯೇ ಸಾಕ್ಷಿ ಎಂದು ಫೋಟೋ, ವಿಡಿಯೊವನ್ನು ಸಾಮಾ ಜಿಕ ಜಾಲತಾಣದಲ್ಲಿ ಹಾಕಿ ಟೀಕಿಸಿದೆ.

ಬಿಜೆಪಿ ಎದಿರೇಟು: ಈ ಟೀಕೆಗೆ ಎದಿರೇಟು ನೀಡಿರುವ ರಾಜ್ಯ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿಯವರು ಬೆಂಗಳೂರಿಗೆ ಬಂದಿದ್ದು ಚಂದ್ರಯಾನದ ಅಭೂತಪೂರ್ವ ಯಶಸ್ಸಿಗಾಗಿ ಶ್ರಮಿಸಿದ ಇಸ್ರೋ ವಿಜ್ಞಾನಿ ಗಳನ್ನು ಅಭಿನಂದಿಸುವುದಕ್ಕೇ ಹೊರತು ಪಕ್ಷದ ಸಭೆಗಲ್ಲ ಎಂದು ಸಾಮಾಜಿಕ ಜಾಲ ತಾಣದ ಮೂಲಕವೇ ತಿರುಗೇಟು ನೀಡಿದೆ. ನಮ್ಮ ಪಕ್ಷದ ಪ್ರಮುಖರು ಜನಸಾಮಾನ್ಯರಂತೆ ನಿಂತು ಅವರ ಸಂತಸದಲ್ಲಿ ಪಾಲ್ಗೊಂಡು ಅವರೊಡನೆ ತಮ್ಮ ಅಭಿಮಾನ ಪ್ರದರ್ಶಿಸಿರುವುದರಲ್ಲಿ ಹುಳುಕು ಹುಡುಕಲೆತ್ನಿಸಿರುವ ನಿಮಗೆ ಕಾಮಾಲೆಯಂತೆ ಏನೋ ಕಾಯಿಲೆ ಇರಬಹುದು ಎಂದು ಆರೋಪಿಸಿದೆ.

ಕಾಮಾಲೆ ಕಣ್ಣಿನವರಿಗೆ ಕಾಣೋದೆಲ್ಲಾ ಹಳದಿಯೇ ಎಂಬಂತೆ ಗಾಂಧಿ ಕುಟುಂಬದ ಜೀತಕ್ಕೆ ಬಿದ್ದವರಂತೆ ಸೇವೆ ಮಾಡುವ ಕಾಂಗ್ರೆಸ್ಸಿಗರಿಗೆ ಪ್ರಧಾನಮಂತ್ರಿಗಳ ಅಧಿಕೃತ ಸರ್ಕಾರಿ ಭೇಟಿಗೂ, ಅನೌಪ ಚಾರಿಕ ಭೇಟಿಗೂ ವ್ಯತ್ಯಾಸ ತಿಳಿದಿಲ್ಲ ಎಂದು ಎಕ್ಸ್‌ನಲ್ಲಿ ವ್ಯಂಗ್ಯವಾಡಿದೆ.

ಬೆಂಗಳೂರಿಗೆ ಆಗಮಿಸಿದ ಪ್ರಧಾನ ಮಂತ್ರಿಗಳನ್ನು ಸ್ವಾಗತಿಸಲು ಮುಖ್ಯ ಮಂತ್ರಿ, ಉಪಮುಖ್ಯಮಂತ್ರಿಗಳಾಗಲೀ, ಸರ್ಕಾರದ ಪ್ರತಿನಿಧಿಗಳಾಗಲಿ ತೆರಳಿಲ್ಲ. ರಾಜ್ಯ ಸರ್ಕಾರ ಶಿಷ್ಟಾಚಾರ ಪಾಲನೆ ಉಲ್ಲಂಘಿಸಿದೆ ಎಂದು ಮಾಜಿ ಸಚಿವ ಆರ್ ಅಶೋಕ್ ಆರೋಪಿಸಿದ್ದಾರೆ.

ಕಾಂಗ್ರೆಸ್ ತಿರುಗೇಟು: ಇದಕ್ಕೆ ತಿರು ಗೇಟು ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಕಚೇರಿ ಆರ್. ಅಶೋಕ್ ಅವರನ್ನು ಲೆಕ್ಕಕ್ಕೇ ಇಟ್ಟುಕೊಂಡಿಲ್ಲ ಎಂಬುದಕ್ಕೆ ಅವರ ಮಾತೇ ಸಾಕ್ಷಿ. ನಾವು ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾಗತಕ್ಕೆ ಸಿದ್ಧವಿದ್ದೆವು. ಆದರೆ ಪ್ರಧಾನಮಂತ್ರಿಗಳ ಕಚೇರಿಯ ಸಂದೇಶ ಗೌರವಿಸಿ, ಸ್ವಾಗತಕ್ಕೆ ತೆರಳಲಿಲ್ಲ. ಈ ವಿಚಾರದ ಬಗ್ಗೆ ಪ್ರಧಾನಿ ಕಚೇರಿಯಿಂದ ಮಾಹಿತಿ ಪಡೆದುಕೊಂಡು ನಂತರ ಅಶೋಕ್ ಮಾತನಾಡಲಿ ಎಂದರು.

ನಮಗೆ ರಾಜಕೀಯ ಪ್ರಜ್ಞೆ, ಶಿಷ್ಟಾಚಾರ, ಯಾರಿಗೆ ಯಾವ ಗೌರವ ನೀಡಬೇಕು ಎಂಬ ಪರಿಜ್ಞಾನ ಬಿಜೆಪಿಯವರಿಗಿಂತಲೂ ಹೆಚ್ಚಾಗಿ ಇದೆ. ಶಿಷ್ಟಾಚಾರದ ಪ್ರಕಾರ ಸರ್ಕಾರ ಪ್ರಧಾನಿಗಳ ಸ್ವಾಗತಕ್ಕೆ ಸಿದ್ಧವಿತ್ತು. ಆದರೆ ಪ್ರಧಾನಮಂತ್ರಿಗಳ ಕಚೇರಿಯಿಂದಲೇ ಬರಬಾರದೆಂದು ಅನಧಿಕೃತವಾಗಿ ನಮಗೆ ಸಂದೇಶ ಬಂದಿತ್ತು.

ನಾವು ಮುಖ್ಯ ಕಾರ್ಯದರ್ಶಿಗಳಿಗೆ ಈ ವಿಚಾರವಾಗಿ ಲಿಖಿತ ಸಂದೇಶ ನೀಡಿ ಎಂದು ಮನವಿ ಮಾಡಿದೆವು. ನಂತರ ಅವರು ಅಧಿಕೃತವಾಗಿ ಪತ್ರದ ಮೂಲಕ ರಾಜ್ಯಪಾಲರು, ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಸೇರಿದಂತೆ ಯಾರೂ ಸ್ವಾಗತ ಮಾಡಲು ಬರುವುದು ಬೇಡ ಎಂದು ಸಂದೇಶ ರವಾನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ತೆರಳಲಿಲ್ಲ. ಅಶೋಕ್ ಅವರು ಈ ಬಗ್ಗೆ ತಿಳಿದು ಕೊಂಡಿದ್ದರೆ ಚೆನ್ನಾಗಿತ್ತು.

ನಾವು ಪ್ರಧಾನಮಂತ್ರಿ ಸ್ಥಾನಕ್ಕೆ ಗೌರವ ನೀಡುತ್ತೇವೆ. ಅವರು ನಮ್ಮ ವಿಜ್ಞಾನಿ ಗಳನ್ನು ಸನ್ಮಾನಿಸಲು ಬಂದಿದ್ದಾರೆ. ನಾವು ಅವರನ್ನು ಸ್ವಾಗತಿಸುತ್ತೇವೆ. ನಮಗೆ ಈ ವಿಚಾರದಲ್ಲಿ ರಾಜಕೀಯ ಮಾಡುವ ಉದ್ದೇಶವಿಲ್ಲ. ರಾಜಕೀಯ ಆಟ ಮುಗಿದಿದೆ. ಇನ್ನು ಅಭಿವೃದ್ಧಿಯತ್ತ ಗಮನಹರಿಸ ಬೇಕು. ರಾಜ್ಯದ ಘನತೆ, ರಾಜ್ಯದ ಸಂಸ್ಕೃತಿ ಉಳಿಸಲು ನಾವು ಕೆಲಸ ಮಾಡಬೇಕು. ಅಶೋಕ್ ಅವರಿಗೆ ಈ ವಿಚಾರವಾಗಿ ಮಾಹಿತಿ ಇಲ್ಲ. ಪ್ರಧಾನಮಂತ್ರಿಗಳ ಕಚೇರಿ ಅವರನ್ನು ರಾಜಕೀಯ ಚಿತ್ರಣದಿಂದ ದೂರವಿಟ್ಟಿದೆ. ಹೀಗಾಗಿ ಅವರು ಮಾಹಿತಿ ಇಲ್ಲದೆ ಮಾತನಾಡಿದ್ದಾರೆ. ಅದಕ್ಕೆ ನಾವೇನು ಮಾಡಲು ಸಾಧ್ಯ? ಅವರಲ್ಲಿ ಏನೋ ಸಮಸ್ಯೆ ಇರಬಹುದು ಎಂದು ಟೀಕಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಎಕ್ಸ್‌ನಲ್ಲಿ ಬಿಜೆಪಿ ನಾಯಕರ ಪರಿಸ್ಥಿತಿ ಯನ್ನು ಕಂಡು ವ್ಯಂಗ್ಯವಾಡಿದ್ದಾರೆ. ರಾಜಕೀಯವಾಗಿ, ಸೈದ್ಧಾಂತಿಕವಾಗಿ ವಿರೋಧಿಗಳಾಗಿದ್ದರೂ ಕರ್ನಾಟಕದ ಬಿಜೆಪಿ ನಾಯಕರ ದುರಾವಸ್ಥೆ ನೋಡಿ ಕರುಣೆ ಹುಟ್ಟುತ್ತಿದೆ. ಪ್ರಧಾನಿ ಮುಂದೆ ಬ್ಯಾರಿಕೇಡ್ ಬಂಧಿಗಳಾಗಿ ಗಮನ ಸೆಳೆಯಲು ಹರಸಾಹಸ ಮಾಡುತ್ತಿರುವ ಬಿಜೆಪಿ ನಾಯಕರು ಸ್ವಾಭಿಮಾನ, ಆತ್ಮಗೌರವ ವನ್ನು ಬೀದಿಪಾಲು ಮಾಡಿಕೊಂಡಿದ್ದು ಕರುಣಾಜನಕವಾಗಿದೆ ಎಂದಿದ್ದಾರೆ.

ಹೈಕಮಾಂಡ್‌ನಿಂದ ಇಷ್ಟೊಂದು ತಿರಸ್ಕಾರಕ್ಕೆ ಒಳಪಟ್ಟಿರುವಾಗ 'ವಿರೋಧ ಪಕ್ಷದ ನಾಯಕ'ನ ಆಯ್ಕೆ ಸಾಧ್ಯವಾ ಗುವುದೇ?. ಈಗ ಸ್ವತಃ ಬಿಜೆಪಿಯವರೇ ಸರ್ವಾಧಿಕಾರದ ಸಂತ್ರಸ್ತರಾಗಿದ್ದಾರೆ. ಬೀದಿಯಲ್ಲಿ ನಿಂತ ಬಿಜೆಪಿ ನಾಯಕರು ತಮ್ಮನ್ನು ತಾವೇ ಅವಮಾನಿಸಿಕೊಂಡಿ ದ್ದಲ್ಲ, ಇದು ಮತ ನೀಡಿದ ಮತ ದಾರರಿಗೆ ಅವಮಾನ, ಕನ್ನಡಿಗರಿಗೆ ಅವಮಾನ, ಕಾರ್ಯಕರ್ತರಿಗೆ ಅವಮಾನ ಎಂದು ಆರೋಪಿಸಿದ್ದಾರೆ.

ತಿ.ನರಸೀಪುರ ಬಳಿ ರಸ್ತೆ ಅಪಘಾತದಲ್ಲಿ ರೈತನ ಸಾವು

●ರೊಚ್ಚಿಗೆದ್ದ ಗ್ರಾಮಸ್ಥರಿಂದ ರಸ್ತೆ ತಡೆದು ಪ್ರತಿಭಟನೆ ●ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಆಕ್ರೋಶ ●ಪ್ರತಿಭಟನಾಕಾರರ ಮನವೊಲಿಸಿದ ತಹಸೀಲ್ದಾರ್


ಮೃತ ನಾಗರಾಜು

ತಿ.ನರಸೀಪುರ, ಆ.26– ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ರಸ್ತೆ ಅಪಘಾತದಲ್ಲಿ ರೈತ ಮುಖಂಡರೊಬ್ಬರು ಸಾವನ್ನಪ್ಪಿದ್ದು, ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಕುರುಬೂರು ಗ್ರಾಮದ ಬಳಿ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಉಪಾಧ್ಯಕ್ಷ ಕುರುಬೂರು ನಿವಾಸಿ ಕೆ.ಜಿ.ನಾಗರಾಜು (72) ದುರಂತದಲ್ಲಿ ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡಿರುವ ಅವರ ಪುತ್ರ ಕೆ.ಎನ್. ರಾಜೇಶ್ ಅವರನ್ನು ಮೈಸೂರಿನ ಜೆಎಸ್ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಾಗರಾಜು ಅವರು ತಮ್ಮ ಮಗ ಕೆ.ಎನ್.ರಾಜೇಶ್‌ನೊಂದಿಗೆ ಟಿವಿಎಸ್ ಎಕ್ಸೆಲ್ ಮೊಪೆಡ್ (KA55/W-1575)ನಲ್ಲಿ ಶನಿವಾರ ಬೆಳಗ್ಗೆ ಗದ್ದೆಗೆ ತೆರಳಿ ವಾಪಸ್ ಗ್ರಾಮಕ್ಕೆ ಹಿಂತಿರುಗುತ್ತಿದ್ದ ವೇಳೆ ರಸ್ತೆ ದಾಟುವ ಸಂಧರ್ಭ ಕೊಳ್ಳೇಗಾಲ ಕಡೆಯಿಂದ ಅತಿ ವೇಗವಾಗಿ ಬಂದ ಪಲ್ಸರ್ ಬೈಕ್ (KA-10/E-1119) ಡಿಕ್ಕಿ ಹೊಡೆಯಿತು. ಇದರಿಂದ ನಾಗರಾಜು ತೀವ್ರ ರಕ್ತಸ್ರಾವಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೊಪೆಡ್ ಚಾಲನೆ ಮಾಡುತ್ತಿದ್ದ ರಾಜೇಶ್ ಅವರಿಗೆ ಗಂಭೀರವಾದ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಪಲ್ಸರ್ ಬೈಕಿನಲ್ಲಿ ಬಂದು ಡಿಕ್ಕಿ ಹೊಡೆದು ನೆಲಕ್ಕೆ ಬಿದ್ದ ಕೊಳ್ಳೇಗಾಲ ತಾಲೂಕು ಕೌದಳ್ಳಿ ಗ್ರಾಮದ ಶ್ರೇಯಸ್ ಸಣ್ಣ–ಪುಟ್ಟ ಗಾಯಗಳಿಂದ ಪಾರಾಗಿದ್ದಾರೆ.



ಅಪಘಾತದ ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗುಂಪು–ಗುಂಪಾಗಿ ಬಂದ ಗ್ರಾಮಸ್ಥರು ರಸ್ತೆ ತಡೆ ನಡೆಸಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ರಸ್ತೆಗೆ ಅಡ್ಡಲಾಗಿ ಬೆಳೆದಿರುವ ಗಿಡ ಗಂಟಿಗಳನ್ನು ತೆರವುಗೊಳಿಸದ ಹಿನ್ನೆಲೆಯಲ್ಲಿ ಪದೇ ಪದೇ ರಸ್ತೆ ಅಪಘಾತಗಳಾಗಿ ಅಮೂಲ್ಯ ಜೀವಗಳು ಬಲಿಯಾಗುತ್ತಿವೆ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಶವವನ್ನು ರಸ್ತೆಗೆ ಅಡ್ಡಲಾಗಿಟ್ಟು ರಸ್ತೆ ಬಂದ್ ಮಾಡಿದರು.

ಈ ವೇಳೆ ರಸ್ತೆ ತಡೆಯ ನೇತೃತ್ವ ವಹಿಸಿದ್ದ ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ನಿರ್ಲಕ್ಷ್ಯ ಮನೋಭಾವಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಇದೇ ಗ್ರಾಮದ ಬಳಿ ಜಂಗಲ್ ಕಟಿಂಗ್ ಆಗದ ಹಿನ್ನೆಲೆಯಲ್ಲಿ ರಸ್ತೆ ಅಪಘಾತವಾಗಿ 10 ಮಂದಿ ಜೀವ ಕಳೆದುಕೊಂಡಿದ್ದರು. ಅಂದು ಸ್ಥಳಕ್ಕೆ ಭೇಟಿ ನೀಡಿದ್ದ ಅಧಿಕಾರಿಗಳು ಜಂಗಲ್ ಕಟಿಂಗ್ ಮಾಡಿಸುವ ಭರವಸೆ ನೀಡಿ ಈಗ ಉದಾಸೀನ ತೋರಿದ್ದಾರೆ. ಅಧಿಕಾರಿಗಳ ಅಸಡ್ಡೆಯಿಂದಾಗಿ ಇಂದು ಮತ್ತೆ ರೈತ ಮುಖಂಡರೊಬ್ಬರು ಮೃತರಾಗಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಯುತ್ತಿರುವ ಅಪಘಾತಗಳಿಗೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೇ ನೇರ ಕಾರಣ ಎಂದು ಆರೋಪಿಸಿದರು. ಕೂಡಲೇ ರಸ್ತೆಯಲ್ಲಿ ಬೆಳೆದ ಜಂಗಲ್ ಕಟಿಂಗ್ ಮಾಡಿಸಬೇಕು. ಹಾಗೂ ಗ್ರಾಮದ ಕೆಲವೆಡೆ ರಸ್ತೆ ಡುಬ್ಬ ನಿರ್ಮಿಸಬೇಕೆಂದು ಒತ್ತಾಯಿಸಿದರು.

ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಹಾಗೂ ವೀರಶೈವ ಮಹಾಸಭಾದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ಘಟನೆಗೆ ಕಾರಣರಾದ ರಸ್ತೆ ಅಭಿವೃದ್ಧಿ ಅಧಿಕಾರಿಗಳಾಗಲಿ ಅಥವಾ ಜಿಲ್ಲಾಧಿಕಾರಿಗಳಾಗಲಿ ಬರುವವರೆಗೂ ರಸ್ತೆ ತಡೆ ತೆರವುಗೊಳಿಸುವುದಿಲ್ಲ ಎಂದು ಪಟ್ಟು ಹಿಡಿದರು. ಸುಮಾರು 6 ಘಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆದ ಹಿನ್ನೆಲೆಯಲ್ಲಿ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡು ಪ್ರಯಾಣಿಕರು ಪರದಾಡಬೇಕಾಯಿತು. ಚಾಮರಾಜನಗರ, ಕೊಳ್ಳೇಗಾಲಕ್ಕೆ ತೆರಳುವ ವಾಹನಗಳು ಬದಲೀ ರಸ್ತೆಯಲ್ಲಿ ಸಂಚರಿಸಿದವು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಎಎಸ್ಪಿ ನಂದಿನಿ ಹಾಗೂ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಪ್ರತಿಭಟನಾ ನಿರತರ ಮನವೊಲಿಕೆಗೆ ಮುಂದಾದರು. ಈ ವೇಳೆ ಪ್ರತಿಭಟನಾಕಾರರು ದಿನದಿಂದ ದಿನಕ್ಕೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅದರಲ್ಲೂ ಗ್ರಾಮದ ಸಮೀಪ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ. ಜಂಗಲ್ ಕಟಿಂಗ್ ಮಾಡಿಸದೇ ನಿರ್ಲಕ್ಷ್ಯ ತೋರುತ್ತಿರುವ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ನಡೆ ಅಕ್ಷಮ್ಯ. ಹಾಗಾಗಿ ಅವರ ಮೇಲೆ ಪ್ರಕರಣ ದಾಖಲು ಮಾಡಬೇಕು ಹಾಗೂ ಮೃತನ ಕುಟುಂಬಕ್ಕೆ ಪ್ರಾಧಿಕಾರದ ವತಿಯಿಂದ ಪರಿಹಾರ ಕೊಡಿಸಬೇಕೆಂದು ಪಟ್ಟು ಹಿಡಿದು ಕುಳಿತರು.

ಈ ವೇಳೆ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಮಾತನಾಡಿ, ನಾಳೆ ಬೆಳಗ್ಗೆ 11 ಘಂಟೆ ಒಳಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ವಿಚಾರಣೆ ಮಾಡಲಾಗುತ್ತದೆ. ಅನಾಹುತಗಳಿಗೆ ಸ್ಪಷ್ಟ ಉತ್ತರ ಕೇಳಲಾಗುತ್ತದೆ. ಮುಂದೆ ಇಂತಹ ಯಾವುದೇ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸುವುದರ ಜೊತೆಗೆ ಮೃತರ ಕುಟುಂಬಕ್ಕೆ ನೀಡಬೇಕಾದ ಪರಿಹಾರದ ಬಗ್ಗೆಯೂ ಚರ್ಚಿಸಲಾಗುತ್ತದೆ ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾ ನಿರತರು ರಸ್ತೆ ತಡೆ ಕೈಬಿಟ್ಟರು. ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದರಾಜು, ಬನ್ನೂರು ಸರ್ಕಲ್ ಇನ್ಸ್‌ಪೆಕ್ಟರ್ ಮನೋಜ್ ಕುಮಾರ್, ತಲಕಾಡು ಆನಂದ್, ಸಿಬ್ಬಂದಿ ಬಂದೋಬಸ್ತ್ ವ್ಯವಸ್ಥೆ ಮಾಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ವೀರೇಶ್, ಜಗಪತಿರಾವ್, ಮೂಗೂರು ಸಿದ್ದರಾಜು, ಪ್ರಿಂಟಿಂಗ್ ಪ್ರೆಸ್ ಶಾಂತರಾಜು, ಗೌರಿಶಂಕರ್, ಕುರುಬೂರು ನಂದೀಶ್ ಕನ್ನಳ್ಳಿ ಶಿವಕುಮಾರ್ ಸೇರಿದಂತೆ ನೂರಾರು ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಬೆದುರುಲಂಕ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗದರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಬಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಂಗ್ ಆಫ್ ಕೋತ (ತ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಂಡೀವಧಾರಿ ಅರ್ಜುನ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಡೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಲಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿ, ನಮ್ಮದೇನೂ ವಿರೋಧವಿಲ್ಲ

●ಶಾಸಕ ಡಿ.ರವಿಶಂಕರ್‌ಗೆ ಮಾಜಿ ಸಚಿವ ಸಾ.ರಾ.ಮಹೇಶ್ ಸಲಹೆ ●ನನ್ನ ಸೋಲಿಗೆ ಕಾರಣವೇ ತಿಳಿಯುತ್ತಿಲ್ಲ



ಕೆಆರ್.ನಗರ, ಆ.26– ತಾಲೂಕಿನ ಜನತೆ ಬಹಳ ನಿರೀಕ್ಷೆ ಇಟ್ಟುಕೊಂಡು ಶಾಸಕರಾಗಿ ಆಯ್ಕೆ ಮಾಡಿದ್ದಾರೆ, ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿದರೆ ನಮ್ಮದೇನು ವಿರೋಧವಿಲ್ಲ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಶಾಸಕ ಡಿ.ರವಿಶಂಕರ್ ಅವರಿಗೆ ಕಿವಿಮಾತು ಹೇಳಿದ್ದಾರೆ.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ತಾಲೂಕು ಒಕ್ಕಲಿಗರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೊಡ್ಡ ದೊಡ್ಡ ನಾಯಕರೆಲ್ಲ ಸೋತಿದ್ದಾರೆ, ಅವರ ಸೋಲಿಗೆ ಕಾರಣವಿತ್ತು ಆದರೆ ನನ್ನ ಸೋಲಿಗೆ ಕಾರಣ ಏನೆಂಬುದೇ ತಿಳಿಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

15 ವರ್ಷಗಳ ನನ್ನ ಶಾಸಕತ್ವದ ಆಡಳಿತ ಅವಧಿಯನ್ನು ಬದಲಾವಣೆ ಬಯಸಿರುವ ಕೆ.ಆರ್.ನಗರ ಕ್ಷೇತ್ರದ ಜನತೆ ಮುಂದಿನ ದಿನಗಳಲ್ಲಿ ಹೊಸ ಶಾಸಕರ ಆಯ್ಕೆಯಿಂದ ಯಾವ ಬದಲಾವಣೆ ಆಗುತ್ತದೆ ಎಂದು ನಾನು ನಿರೀಕ್ಷೆ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು. ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಗೌರವಾಧ್ಯಕ್ಷ ಸ್ಥಾನವನ್ನು ಏಕೆ ನಿರಾಕರಿಸಿದೆ ಎಂದರೆ ಒಂದು ಜಾತಿಯ ಹೆಸರಿನಲ್ಲಿರುವ ಸಂಘಕ್ಕೆ ನನ್ನ ಬೆಂಬಲವಿಲ್ಲ. ಆದರೆ, ಒಕ್ಕಲಿಗರ ಹೆಸರಿನಲ್ಲಿರುವ ಸೊಸೈಟಿ ಜಾತ್ಯಾತೀತ ಮನೋಭಾವದಿಂದ ಸರ್ವರಿಗೂ ಸಾಲ ಸೌಲಭ್ಯ ನೀಡುವುದರ ಜೊತೆಗೆ ಸಹಾಯಹಸ್ತ ಚಾಚುತ್ತಿರುವುದು ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಹಾಗೂ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿ, ತಾಲೂಕು ಒಕ್ಕಲಿಗರ ಸಂಘ ಸಮಾಜದ ಏಳಿಗೆಗೆ ಮತ್ತು ಸಂಕಷ್ಟಕ್ಕೆ ಸ್ಪಂದಿಸದಿದ್ದರೂ ನಮ್ಮ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಒಕ್ಕಲಿಗ ಸಮುದಾಯದಲ್ಲಿರುವ ನೌಕರರ ಪರವಾಗಿ ಹೋರಾಟ ಮಾಡುವುದರ ಜೊತೆಗೆ ಸಹಕಾರ ಮತ್ತು ಸಹಾಯ ಮಾಡಲು ಸದಾ ಸಿದ್ಧವಿರುತ್ತದೆ ಎಂದು ಘೋಷಣೆ ಮಾಡಿದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪತ್ರಕರ್ತ ವಿನಯ್ ದೊಡ್ಡಕೊಪ್ಪಲು, ಗ್ರಾಪಂ ಅಧ್ಯಕ್ಷ ಬಾಲು, ಅನೀಫ್ ಗೌಡ ಸೇರಿದಂತೆ 2022–23 ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ, ಮೈಸೂರು ಪೇಟ ತೊಡಿಸಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಹುಣಸೂರಲ್ಲಿ ಪ್ರೇಕ್ಷಕರ ಮನಗೆದ್ದ ಶ್ವಾನ ಪ್ರದರ್ಶನ

14 ವಿವಿಧ ತಳಿಯ 40ಕ್ಕೂ ಹೆಚ್ಚು ಶ್ವಾನಗಳು ಭಾಗಿ



ಹುಣಸೂರು, ಆ.26– ವಿಶ್ವ ಶ್ವಾನ ದಿನಾಚರಣೆ ಅಂಗವಾಗಿ ರೋಟರಿ ಸಂಸ್ಥೆ ವತಿಯಿಂದ ಇದೇ ಪ್ರಥಮ ಬಾರಿಗೆ ಹುಣಸೂರಿನಲ್ಲಿ "ಶ್ವಾನ ಪ್ರದರ್ಶನ ಸ್ಪರ್ಧೆ"ಯನ್ನು ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ಸುಮಾರು 40ಕ್ಕೂ ಹೆಚ್ಚು ಶ್ವಾನಗಳು ಭಾಗವಹಿಸಿದ್ದು, ಗ್ರೇಟ್ ಡೇನ್, ರಾಟ್ ವೀಲರ್, ಲ್ಯಾಬರ್ಡೋಲ್, ಜರ್ಮನ್ ಶಫರ್ಡ್, ಪಿಟ್ ಬುಲ್, ಗೋಲ್ಡನ್ ರೇಟ್ರಿವರ್, ಪಾಮೋರಿಯನ್, ಸಿಟ್ಜ್ ಹಾಗೂ ಪಗ್ ಸೇರಿದಂತೆ, 14 ಕ್ಕೂ ಹೆಚ್ಚು ವಿವಿಧ ತಳಿಯ ಶ್ವಾನಗಳು ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರೇಕ್ಷಕರ ಮನಗೆದ್ದವು.

ಮೊದಲ ಬಹುಮಾನವನ್ನು ಮಲ್ಲಿಕಾರ್ಜುನ್ ಮಾಲೀಕತ್ವದ ಲಿಯಾ ಎಂಬ ಗ್ರೇಟ್ ಡೇನ್ ತಳಿಯ ಶ್ವಾನವು ಪಡೆಯಿತು, ಎರಡನೇ ಸ್ಥಾನವನ್ನು ಚಂದನ್ ಗೌಡ ಮಾಲೀಕತ್ವದ ಕನ್ವರ್ ಹೆಸರಿನ ಜರ್ಮನ್ ಶಫರ್ಡ್ ತಳಿಯ ಶ್ವಾನವು ಪಡೆಯಿತು. ಮೂರನೇ ಬಹುಮಾನವನ್ನು ರಾಜಶೇಖರ್ ಮಾಲೀಕತ್ವದ ಗ್ರೇ ಹೆಸರಿನ ಗ್ರೇಟ್ ಡೇನ್ ತಳಿಯ ಶ್ವಾನವು ಪಡೆಯಿತು.

ಭಾಗವಹಿಸಿದ ಎಲ್ಲಾ ಶ್ವಾನಗಳಿಗೂ ಸರ್ಟಿಫಿಕೇಟ್ ಹಾಗೂ ಪಾರಿತೋಷಕವನ್ನು ಪ್ರೀತಿ ವೆಟ್ ಮೆಡಿಕಲ್ ವತಿಯಿಂದ ವಿತರಿಸಲಾಯಿತು. ಮತ್ತು ಶ್ವಾನ ಪ್ರೇಮಿಗಳಾದ ಬೈಲಕುಪ್ಪೆಯ ಡೋಲ್ಮ ಡಾಗ್ ರೆಸ್ಕ್ಯೂ ಸೆಂಟರ್‌ನ ಕಾಲ್ಸಂಗ್ ದೋರ್ಜಿ ಹಾಗೂ ಹುಣಸೂರಿನ ಸರಸ್ವತಿಪುರಂನ ಬಸವರಾಜ್ ಅವರನ್ನು ಗೌರವಿಸಲಾಯಿತು. ತೀರ್ಪುಗಾರರಾಗಿ ಪಶು ಇಲಾಖೆ ನಿರ್ದೇಶಕರಾದ ಚನ್ನಬಸಪ್ಪ ಅವರು ಆಗಮಿಸಿದ್ದರು.

ನಾಯಿಗಳು ಹಲವು ರೀತಿಯಲ್ಲಿ ಮನುಷ್ಯನಿಗೆ ಸಹಾಯಕಾರಿಯಾಗಿದ್ದು, ಇವುಗಳು ಕೂಡ ಭೂಮಿಯ ಮೇಲೆ ಬಾಳಲು ನಮ್ಮಷ್ಟೇ ಹಕ್ಕನ್ನು ಹೊಂದಿವೆ, ಆದ್ದರಿಂದ ಅವುಗಳಿಗೆ ಗೌರವ ಸಲ್ಲಿಸುವ ಸಲುವಾಗಿ ಶ್ವಾನಗಳ ದಿನವನ್ನು ರೋಟರಿ ಕ್ಲಬ್ ವತಿಯಿಂದ ಆಚರಿಸಲಾಗುತ್ತಿದೆ ಎಂದು ಅಧ್ಯಕ್ಷ ಚನ್ನಕೇಶವ ತಿಳಿಸಿದರು. ಕಾರ್ಯದರ್ಶಿ ಪ್ರಸನ್ನ ಕೆಪಿ,ರೋಟರಿ ಸದಸ್ಯರಾದ ಆನಂದ್, ರಾಜಶೇಖರ್, ಗಿರಿಯಣ್ಣ ಶಾಮ್, ಸತೀಶ್ ಉಪಸ್ಥಿತರಿದ್ದರು.

ಸೌಜನ್ಯ ಪ್ರಕರಣದ ಮರು ತನಿಖೆಗೆ ಒತ್ತಾಯಿಸಿ ಪ್ರತಿಭಟನೆ



ನಂಜನಗೂಡು, ಆ.26– ಸೌಜನ್ಯ ಅತ್ಯಾಚಾರ ಮತ್ತು ಹತ್ಯೆ ಪ್ರಕರಣವನ್ನು ಮರು ತನಿಖೆ ನಡೆಸಬೇಕು ಹಾಗೂ ದಲಿತರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ನಟ ಉಪೇಂದ್ರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಛಲವಾದಿ ಮಹಾ ಸಭಾ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು ಮೈಸೂರು–ಊಟಿ ಹೆದ್ದಾರಿಯನ್ನು ತಡೆದು ಮಾನವ ಸರಪಳಿ ನಿರ್ಮಿಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ನಗರದ ಹುಲ್ಲಹಳ್ಳಿ ವೃತ್ತದಿಂದ, ಆರ್.ಪಿ.ರಸ್ತೆಯ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಅಂಬೇಡ್ಕರ್ ವೃತ್ತದ ಬಳಿ ಧರಣಿ ನಡೆಸಿದ ಪ್ರತಿಭಟನಾಕಾರರು, ಸೌಜನ್ಯ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಅಭಿನಾಗಭೂಷಣ್ ಮಾತನಾಡಿ, ಸೌಜನ್ಯ ಎಂಬ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಹಾಗೂ ಬರ್ಬರ ಹತ್ಯೆಯಂತಹ ಅಮಾನವೀಯ ಪ್ರಕರಣಕ್ಕೆ ನ್ಯಾಯ ಸಿಗದಿರುವುದು ನೋವಿನ ಸಂಗತಿಯಾಗಿದೆ. ಆದ್ದರಿಂದ ಸರ್ಕಾರ ಸೌಜನ್ಯ ಪ್ರಕರಣವನ್ನು ಮರು ತನಿಖೆಗೆ ಆದೇಶ ಮಾಡಬೇಕು ಮತ್ತು ದಲಿತರ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿ ಅವಮಾನಿಸಿರುವ ನಟ ಉಪೇಂದ್ರ, ಹಾಗೂ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ರವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು. ಈ ಸಂಬಂಧ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.


ಪ್ರತಿಭಟನೆಯಲ್ಲಿ ಹಿರಿಯ ಪತ್ರಕರ್ತ ಹಾಗೂ ವಿಚಾರವಾದಿ ಕೆ. ದೀಪಕ್, ಜನಸಂಗ್ರಾಮ ಪರಿಷತ್‌ನ ರಾಜ್ಯಾಧ್ಯಕ್ಷ ನಗರ್ಲೆ ವಿಜಯಕುಮಾರ್, ದಸಂಸ ಸಂಚಾಲಕ ಹಗಿನವಾಳು ಚಿಕ್ಕಣ್ಣ ಉಮೇಶ್, ಮಲ್ಲಿಕಾರ್ಜುನ್, ರಾಜೇಂದ್ರ, ನಗರಸಭಾ ಸದಸ್ಯ ಯೋಗೀಶ್, ಸಿದ್ದು, ರಾಜೇಶ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಜೂಜಾಟದಲ್ಲಿ ತೊಡಗಿದ 9 ಪ್ರಭಾವಿ ವ್ಯಕ್ತಿಗಳ ಬಂಧನ; ಪಣಕ್ಕಿಟ್ಟಿದ್ದ 19,700 ರೂ. ವಶಕ್ಕೆ

ಹುಣಸೂರು, ಆ.26– ನಗರದ ನರಸಿಂಹಸ್ವಾಮಿ ಬಡಾವಣೆಯ ಎಸ್‌ಎಲ್‌ವಿ ಲಾಡ್ಜ್ ಹಿಂಭಾಗದ ಸಾರ್ವಜನಿಕ ಸ್ಥಳದಲ್ಲಿ ಜೂಜಾಡುತ್ತಿದ್ದ ತಾಲೂಕಿನ 9 ಪ್ರಭಾವಿ ವ್ಯಕ್ತಿಗಳನ್ನು ಬಂಧಿಸಿ, ಪಣಕಿಟ್ಟಿದ್ದ 19,700 ರೂ. ವಶಕ್ಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾತ್ಮೀದಾರರ ಖಚಿತ ಮಾಹಿತಿ ಮೇರೆಗೆ ಇನ್ಸ್‌ಪೆಕ್ಟರ್ ದೇವೇಂದ್ರ, ಪಿಎಸ್‌ಐ ಜಮೀರ್ ಅಹಮದ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಎಲ್ಲಾ 9 ಆರೋಪಿಗಳನ್ನು ಬಂಧಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕ್ಷೀರಸಾಗರ 2ನೇ ವರ್ಷದ ನೆನಪು ಕಾರ್ಯಕ್ರಮ



ಹೆಚ್.ಡಿ.ಕೋಟೆ, ಆ.26– ತಾಲೂಕಿನ ಪರಿಸರ ಪ್ರೇಮಿ, ಪ್ರಾಣಿ ಪ್ರಿಯಾ ಆದಿವಾಸಿ ಅಧ್ಯಯನಕಾರ ಕ್ಷೀರಸಾಗರ ಅವರ ಎರಡನೇ ವರ್ಷದ ಸ್ಮರಣೆ ಕಾರ್ಯಕ್ರಮವನ್ನು ವಡ್ಡರಗುಡಿ ಸಮೀಪವಿರುವ ಅವರ ತೋಟದಲ್ಲಿ ಅವರ ಹಿತೈಷಿಗಳು ಮತ್ತು ಕುಟುಂಬದವರು ಸೇರಿ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಮಾತನಾಡಿದ ಭೀಮನಹಳ್ಳಿ ಮಹದೇವ್, ಕ್ಷೀರಸಾಗರ ಸರಳ ಸಜ್ಜನಿಕೆ ಮತ್ತು ಪರಿಸರ ಪ್ರೇಮಿಯಾಗಿ ಈ ತಾಲೂಕಿನಲ್ಲಿ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಹಾಗೂ ನಮ್ಮೆಲ್ಲರಿಗೂ ಪ್ರಾಣಿ, ಪಕ್ಷಿ, ಪರಿಸರದ ಅರಿವು ಮೂಡಿಸಿದ್ದಾರೆ ಎಂದು ಅವರ ಒಡನಾಟವನ್ನು ನೆನಪಿಸಿಕೊಂಡರು.

ಕ್ಷೀರಸಾಗರ ಅವರ ಆಪ್ತ ಮಿತ್ರ ಸೋಮಣ್ಣ ಮಾತನಾಡಿ, ನಾನು ನನ್ನ ಜೀವನದ ಮುಕ್ಕಾಲು ಸಮಯವನ್ನು ಇವರೊಟ್ಟಿಗೆ ಕಳೆದೆ. ಜೀವನವನ್ನು ಅತ್ಯಂತ ಸರಳವಾಗಿ ರೂಢಿಸಿಕೊಂಡು ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಬದುಕನ್ನು ನಡೆಸಿದವರು ಎಂದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ ಕೋಟೆ, ಕ್ಷೀರಸಾಗರ ಪತ್ನಿ ಲಕ್ಷ್ಮೀಸಾಗರ, ಹೇಮ ಮೇಡಮ್ ಹೊ. ಕೆ. ಮಹೇಂದ್ರ, ಜೆ.ಪಿ.ನಾಗರಾಜ್, ಗುರು ಅಗ್ರಿಗಾರ್ಡ್, ಜೀವಿಕ ಸಂಚಾಲಕ ಉಮೇಶ್, ಅಕ್ಬರ್ ಪಾಷ, ಪಳನಿ ಸ್ವಾಮಿ, ಮಲಾರ್ ಮಹದೇವ್, ಬುಲೇಟ್ ಮಹದೇವ್, ಸಿದ್ದರಾಜು, ಸತ್ಯನಾರಾಯಣ, ಕ್ರಾಂತಿರಾಜ್, ಮಂಜುನಾಥ್, ನಿರಂಜನ್, ನಿತೀನ್ ರಾಜ್, ಶಿವಸ್ವಾಮಿ ಮತ್ತಿತರರು ಭಾಗವಹಿಸಿದರು.

ಸಚಿವ ವೆಂಕಟೇಶ್‌ರಿಂದ ದ್ವೇಷದ ರಾಜಕಾರಣ

ಮಾಜಿ ಶಾಸಕ ಕೆ.ಮಹದೇವ್ ಗಂಭೀರ ಆರೋಪ



ಪಿರಿಯಾಪಟ್ಟಣ, ಆ.26– ಕಳೆದ ವಿಧಾನಸಭಾ ಚುನಾವಣೆಯಲ್ಲಿ ಭರವಸೆಗಳ ಮೇಲೆ ಸರ್ಕಾರ ಅಧಿಕಾರಕ್ಕೆ ಬಂದ ಶಾಸಕ ಕೆ.ವೆಂಕಟೇಶ್ ತಾಲೂಕಿನ ಅಭಿವೃದ್ಧಿಗೆ ಆಸಕ್ತಿ ತೋರದೆ ಜೆಡಿಎಸ್ ಕಾರ್ಯಕರ್ತರ ಮೇಲೆ ಹಗೆತನ ಸಾಧಿಸಿ, ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ಕೆ.ಮಹದೇವ್ ಆಪಾದಿಸಿದ್ದಾರೆ.

ತಮ್ಮ ಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಈಗಾಗಲೇ ಅಧಿಕಾರಕ್ಕೆ ಬಂದು ಮೂರು ತಿಂಗಳೇ ಕಳೆದು ಹೋಗಿದ್ದು, ತಾಲೂಕಿನ ಅಭಿವೃದ್ಧಿಗೆ ಯಾವ ರೀತಿಯಲ್ಲೂ ಆಸಕ್ತಿ ತೋರದ ಸಚಿವ ವೆಂಕಟೇಶ್ ಎಲ್ಲೆಂದರಲ್ಲಿ ಅಧಿಕಾರಿಗಳ ಹಾಗೂ ನಮ್ಮ ಕಾರ್ಯಕರ್ತರ ವಿರುದ್ಧ ಹರಿಹಾಯುತ್ತಾ ಬಂದಿದ್ದಾರೆ ಇದರ ಬಗ್ಗೆ ನಾನು ಇದುವರೆಗೆ ತುಟಿ ಬಿಚ್ಚದೆ ಇದ್ದೆ ಆದರೆ ನಮ್ಮ ಕಾರ್ಯಕರ್ತರ ಮೇಲೆ ದ್ವೇಷದ ದಬ್ಬಾಳಿಕೆ ಹೆಚ್ಚಾದ ಕಾರಣ ನಾನು ಇಂದು ಪತ್ರಿಕಾಗೋಷ್ಠಿಯನ್ನು ಕರೆಯಬೇಕಾದ ಅನಿವಾರ್ಯತೆ ಬಂದಿದೆ ಎಂದರು.

ತಾಲೂಕಿನ ಅಧಿಕಾರಿಗಳನ್ನು ಹಾಗೂ ಇಡೀ ಪೊಲೀಸ್ ವ್ಯವಸ್ಥೆಯನ್ನು ತಮ್ಮ ತೆಕ್ಕೆಗೆ ಹಾಕಿಕೊಂಡಿರುವ ಸಚಿವರು ನಮ್ಮ ಕಾರ್ಯಕರ್ತರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ವಿನಾಕಾರಣ ಕೇಸ್ ದಾಖಲು ಮಾಡಿಸುತ್ತಿದ್ದಾರೆ. ಜೊತೆ ಜೊತೆಗೆ ಇನ್ನು ಮುಂದೆ ನನಗೆ ಯಾವುದೇ ರೀತಿಯಲ್ಲಿ ಅಧಿಕಾರಿಗಳು ಸಹಕಾರ ನೀಡಬಾರದು ಎಂದು ಅಧಿಕಾರಿಗಳಿಗೆ ಬೆದರಿಕೆ ಒಡ್ಡುತ್ತಿದ್ದಾರೆ ಎಂದು ಆರೋಪಿಸಿದರು.

ದೊಡ್ಡಬೇಲಾಳು ಅಧ್ಯಕ್ಷ ಹಾಗೂ ನಿರ್ದೇಶಕರ ಮೇಲೆ ವಿನಾಕಾರಣ ಪೊಲೀಸ್ ದೂರು ದಾಖಲಿಸಿ ಪಿತೂರಿ ಮಾಡಿರುವ ಸಚಿವರು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನಮ್ಮ ಕಾರ್ಯಕರ್ತರ ವಿರುದ್ಧ ಇಲ್ಲಸಲ್ಲದ ಕೇಸು ದಾಖಲಿಸಿಕೊಂಡು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ಶಾಸಕ ವೆಂಕಟೇಶ್‌ರವರು ಮೈಮುಲ್ ವಿಚಾರದಲ್ಲಿ ಅಧಿಕಾರಿಗಳನ್ನು ಕರೆಸಿ, ನನ್ನ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ. ತಾಲೂಕಿನ ಪಂಚವಳ್ಳಿಯ ಸಮೀಪ ಈಗಾಗಲೇ ಪಶು ಆಹಾರ ಘಟಕ ಸ್ಥಾಪನೆ ಮಾಡಲು ಒಕ್ಕೂಟದ ವತಿಯಿಂದ ಜಮೀನು ಖರೀದಿ ಮಾಡಿದ್ದು, ಇದರಲ್ಲಿ ನನ್ನ ಪಾತ್ರ ಯಾವುದೂ ಇಲ್ಲ. ಈ ಜಮೀನು ಖರೀದಿ ಕಮಿಟಿಯಲ್ಲಿ ನಾಲ್ಕು ಜನ ನಿರ್ದೇಶಕರು ಸೇರಿದಂತೆ ಒಕ್ಕೂಟದ ಎಂಡಿ ಅವರು ಕಮಿಟಿಯಲ್ಲಿದ್ದು, ಜಮೀನು ಖರೀದಿಸಿದ ಹಣ ನೇರವಾಗಿ ಆ ರೈತನ ಖಾತೆಗೆ ಹೋಗಿದೆ. ಆದರೆ ಸಚಿವ ವೆಂಕಟೇಶ್ ನನ್ನ ಹಾಗೂ ಶಾಸಕ ಹರೀಶ್ ಗೌಡ ಅವರನ್ನು ರಾಜಕೀಯವಾಗಿ ತುಳಿಯಲು ಸಹಕಾರಿ ಕ್ಷೇತ್ರ ಹಾಗೂ ಮೈಮುಲ್ ಒಕ್ಕೂಟದ ಅಧಿಕಾರ ದುರ್ಬಳಕೆ ಮಾಡಿ ನನ್ನ ಮೇಲೆ ಹಗೆ ಸಾಧಿಸುವುದರ ಮೂಲಕ ಅಧಿಕಾರಿಗಳಲ್ಲಿ ಭಯ ಹುಟ್ಟಿಸುವ ವಾತಾವರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ನಾಗೇಂದ್ರ ಐಲಾಪುರ ರಾಮು, ಬಸವರಾಜು ಅರಸ್, ಶಿವಣ್ಣ, ಪೆಪ್ಸಿ ಕುಮಾರ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಕಿಶೋರ್ ನಿಧನ



ಹುಣಸೂರು, ಆ.26– ನಗರದ ಕರಿಗೌಡರ ಬೀದಿಯ ನಿವಾಸಿ ನಳಿನಿ ಹಾಗೂ ಯತಿರಾಜ್ ದಂಪತಿಯ ಪುತ್ರ ಹಾಗೂ ಮೈಸೂರಿನ ಪಿರಮಿಡ್ ಕಂಪನಿಯ ಯುವ ಇಂಜಿನಿಯರ್ ಕಿಶೋರ್ (25) ಶುಕ್ರವಾರ ರಾತ್ರಿ 12 ಗಂಟೆಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಮೃತರು ತಂದೆ, ತಾಯಿ, ಸಹೋದರಿ ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.